ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡತಕ್ಕದ್ದು. ಆಯಾಯ ಪಕ್ಷದ ಮುಖ್ಯ ಸಚೇತಕರುಗಳು ಮಾನ್ಯ ಸದಸ್ಯರ ಹಾಜರಾತಿಯ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂದು ಸೂಚಿಸಲಾಗಿದೆ. ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಮತ್ತೆ ಸದನವು ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

7. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ:

ವಿಷಯ : ರಾಜ್ಯದಲ್ಲಿ ಇತ್ತೀಚೆಗೆ ಉಂಟಾಗಿರುವ ತೀವ್ರ ವಿದ್ಯುತ್ ಸಮಸ್ಯೆಯ ಬಗ್ಗೆ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಉಂಟಾಗಿರುವ ವಿದ್ಯುತ್ ಅಭಾವದ ವಿಷಯವಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನಮ್ಮ ರಾಜ್ಯ ಕಗ್ಗತ್ತಲೆಯಲ್ಲಿದ್ದು, ವಿದ್ಯುತ್ ಅಭಾವವನ್ನು ಎದುರಿಸುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ, ಏಕೆಂದರೆ ಹಿಂದೆ ಎಂದೂ ಕಂಡರಿಯದ ಇಂಥ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕೆ ಕಾರಣ ಏನೆಂಬ ಬಗ್ಗೆ ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು, ಶ್ರೀ ಕೆ.ಎಂ. ಶಿವಲಿಂಗೇಗೌಡರು, ಶ್ರೀ ಟಿ.ಬಿ. ಜಯಚಂದ್ರರವರು ಹಾಗೂ ಇತರ ಸದಸ್ಯರುಗಳು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಉತ್ಪಾದನೆಗೆ ಹಿಂದಿನ ಸರ್ಕಾರ ಆದ್ಯತೆ ಕೊಟ್ಟಿಲ್ಲ, ಹಿಂದಿನ ಸರ್ಕಾರ ಕೊಟ್ಟಿಲ್ಲವೆನ್ನುವ ಆದ್ಯತೆ ಬಗ್ಗೆ ನಾನು ಒತ್ತು ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಅಂಕಿ-ಅಂಶಗಳ ಮೂಲಕ ಸರ್ಕಾರ ಗಮನ ಸೆಳೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇವತ್ತು ರಾಜ್ಯದಲ್ಲಿ 2009-10ರಲ್ಲಿ 51 ದಶಲಕ್ಷ 19 ಸಾವಿರ ಯೂನಿಟ್ ಬೇಡಿಕೆ ಇದೆ. ಆದರೆ

ಲಭ್ಯತೆ 44 ಲಕ್ಷ 55.31 ಸಾವಿರ ಇದೆ, ಕೊರತೆ 64 ದಶಲಕ್ಷ 68.69 ಲಕ್ಷ ಯೂನಿಟ್ ಕೊರತೆಯನ್ನು ನಾವು ಎದುರಿಸುತ್ತಿದ್ದೇವೆ. ಇವತ್ತು ವಿದ್ಯುತ್ ಅಭಾವದಿಂದ ನಮ್ಮ ವಲಯಗಳಲ್ಲಿ ನಾವು ತೊಂದರೆಯನ್ನು ಅನುಭವಿಸುತ್ತಿದ್ದೇವೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ಮೊದಲನೆಯದಾಗಿ ಕುಡಿಯುವ ನೀರಿನ ಸಮಸ್ಯೆಯನ್ನು, ಅನುಭವಿಸುತ್ತಿದ್ದೇವೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ. ಸಣ್ಣ ಕೈಗಾರಿಕೋದ್ಯಮಗಳು ಕುಂಠಿತಗೊಳ್ಳುತ್ತಿವೆ. ಅದು ಅಲ್ಲದೇ ಮುಖ್ಯವಾಗಿ ರೈತರ ಪಂಪ್ ಸೆಟ್‌ಗಳು ಯಾವುದು ಕಾರ್ಯ ನಿರ್ವಹಿಸುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ low voltage ಇದೆ. ಈ ರೀತಿ low voltageನಿಂದಾಗಿ ಪಂಪ್‌ಸೆಟ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ಇದು ಅಲ್ಲದೇ ಸರ್ಕಾರವು ಕೃಷಿ ಉತ್ಪಾದನೆಯಲ್ಲಿ 2010ನೇ ಸಾಲಿನಲ್ಲಿ 118 ದಶಲಕ್ಷ ಟನ್ ಗುರಿಯನ್ನು ಏನು ಇಟ್ಟುಕೊಂಡಿದ್ದಾರೆ, ಆ ಗುರಿಯು ಕೂಡ ಇವತ್ತು ಮೈನಸ್ ಆಗುತ್ತದೆಂದು ತಾವು ಭಾವಿಸಬೇಕಾಗುತ್ತದೆ, ಏಕೆಂದರೆ ಹಿಂದೆ ನಮ್ಮ ರಾಜ್ಯ ಇದೇ ಸಾಲಿನಲ್ಲಿ ಒಂದು ಕಡೆ ಬರಗಾಲವನ್ನು ಎದುರಿಸಿದ್ದೇವೆ, ಮತ್ತೊಂದು ಕಡೆ ನೆರೆ ಹಾವಳಿಯನ್ನು ಎದುರಿಸಿದ್ದೇವೆ. ಇದರ ಜೊತೆಗೆ ಇವತ್ತು ನಾವು ಮತ್ತೆ ಆಹಾರ ಉತ್ಪಾದನೆಯನ್ನು ಮಾಡದಿದ್ದರೆ, ನಾವು ಸ್ವಾವಲಂಬಿಯಾಗಿ ಆಹಾರವನ್ನು ಉತ್ಪಾದನೆಯನ್ನು ಮಾಡದಿದ್ದರೆ ರಾಜ್ಯದ ಸಮಗ್ರ ಅಭಿವೃದ್ಧಿಯ ಕುಂಠಿತವನ್ನು ಎದುರಿಸುತ್ತದೆಂಬ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಆ ಕಾರಣಕ್ಕಾಗಿ ಬೇಸಿಗೆ ಕಾಲದಲ್ಲಿ ರೈತರು ಹಾಕಿರುವಂಥ ಪಂಪ್‌ಸೆಟ್‌ಗಳ ಆಧಾರದ ಮೇಲೆ ಏನು ಬದುಕುತ್ತಿದ್ದಾರೆ. ಅವರು ಸುಮಾರು 20 ರಿಂದ 22 ಲಕ್ಷ ಐ.ಪಿ.ಸೆಟ್‌ಗಳನ್ನು ಹೊಂದಿದ್ದಾರೆ. ಇವತ್ತು ಕಳಪೆ ಗುಣಮಟ್ಟದ ವಿದ್ಯುತ್ತಿನಿಂದ ರೈತ ಪೂರ್ತಿ ಕಂಗಾಲಾಗಿದ್ದಾನೆ. ಈ ವರ್ಷ ಬರ ಬಂತು, ಮಳೆ ಆಗಲಿಲ್ಲ ಎಂದು ಒಂದು ಕಡೆ ಸಂಕಷ್ಟದಲ್ಲಿದ್ದ ಮತ್ತು ಅಚಾನಕ್ ಆಗಿ ವಿಪರೀತ ಮಳೆಯಿಂದ ರಾಜ್ಯ ಕಂಡರಿಯದಂಥ ನೆರೆಯಿಂದ ಹಾನಿಯಾಗಿ ಇರತಕ್ಕಂಥ ಫಸಲು ಕೊಚ್ಚಿಕೊಂಡು ಹೋಯಿತು,

ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಯಿತು. ಆದರೂ ಅವನು ಬದುಕನ್ನು ಕಟ್ಟಿಕೊಳ್ಳಬೇಕೆಂಬ ಒಂದು ಆಸೆಯನ್ನು ಇಟ್ಟುಕೊಂಡಿದ್ದ. ಅದೇನೆಂದರೆ, ಬೋರ್‌ವೆಲ್‌ನಲ್ಲಿ ಸ್ವಲ್ಪಮಟ್ಟಿಗೆ ನೀರಿದೆ, ಆ ನೀರಿನ ಮುಖಾಂತರ ಮತ್ತೆ ನಾನು ಬೆಳೆಗಳ ಉತ್ಪಾದನೆಯನ್ನು ಮಾಡಬೇಕು, ನನ್ನ ಬದುಕಿನ ಹೊರೆಯನ್ನು ಹೊರಬೇಕು ಎನ್ನುವ ಸಂಕಲ್ಪವನ್ನಿಟ್ಟುಕೊಂಡು I.P. set ಅನ್ನು ಹೊಂದಿರತಕ್ಕಂಥ ರೈತ ಬಿತ್ತನೆಯನ್ನು ಮಾಡಿದ್ದಾನೆ. ಆದರೆ ಸರ್ಕಾರ load sheddingನ ವೇಳಾಪಟ್ಟಿಯನ್ನು ಹೊರಡಿಸಿದೆ. ಆರು ತಾಸು single phase ಮತ್ತು ಆರು ತಾಸು three phase ನಲ್ಲಿ ವಿದ್ಯುತ್ತನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ನಗರಗಳಲ್ಲಿ ಕೂಡ ನಾಲ್ಕು ತಾಸು power cut ಮಾಡುತ್ತಾರೆ ಮತ್ತು ಸಾಯಂಕಾಲ ಕೂಡ 6 ಗಂಟೆಯಿಂದ 7 ಗಂಟೆಯವರೆಗೆ ಒಂದು ತಾಸು ತೆಗೆಯುತ್ತಾರೆ. ಇಂಧನ ಇಲಾಖೆಯ ಅಧಿಕಾರಿಗಳಿರಬಹುದು ಅಥವಾ ಹಿಂದಿನ ಇಂಧನ ಇಲಾಖೆಯ ಮಂತ್ರಿಗಳಾಗಿದ್ದಂಥ ಮಾನ್ಯ ಈಶ್ವರಪ್ಪನವರು ಮತ್ತು ಈಗ ಈ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಮುಖ್ಯಮಂತ್ರಿಗಳು ಎಲ್ಲೋ ಎಡವಿದ್ದಾರೆ ಎನ್ನುವುದು ನನ್ನ ಒಂದು ಭಾವನೆ. ಏಕೆಂದರೆ ಇವತ್ತು ಜಲಾಶಯಗಳು ಸಂಪೂರ್ಣವಾಗಿ ತುಂಬಿವೆ. ಜಲಾಶಯಗಳಲ್ಲಿ ಹಿಂದಿನ ಸಾಲಿನ ಮತ್ತು ಈ ವರ್ಷದ ನೀರಿನ ಸಂಗ್ರಹವನ್ನು ನೋಡಿದಾಗ ನಮಗೆ ಅಷ್ಟೊಂದು deficit ಕಾಣುತ್ತಿಲ್ಲ. ಆದಾಗ್ಯೂ ಕೂಡ ಹೆಚ್ಚು load shedding ಮಾಡುತ್ತಿರುವುದರಿಂದ ಇವರ ಕಾರ್ಯವೈಖರಿಯ ಬಗ್ಗೆ ನಮಗೆ ಸಂಶಯ ಬರುತ್ತದೆ ಎಂದು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಥಮದಲ್ಲಿ ಬಹಳ ಅದ್ದೂರಿಯಾಗಿ ಈ ರಾಜ್ಯದ ಜನ ಆಶೀರ್ವಾದವನ್ನು ಮಾಡಿದರು. JD(S) ಪಕ್ಷದ ಆಡಳಿತವನ್ನು ನೋಡಿದ್ದೇವೆ, ಕಾಂಗ್ರೆಸ್ ಪಕ್ಷದ ಆಡಳಿತವನ್ನು ನೋಡಿದ್ದೇವೆ, ಒಂದು ಸಲ ಭಾರತೀಯ ಜನತಾ ಪಕ್ಷದ ಆಡಳಿತವನ್ನೂ ನೋಡೋಣ ಎಂದು ಹೇಳಿ ಎಲ್ಲ ಜನಾಂಗದವರು ಕೂಡ ಅವರಿಗೆ ಆಶೀರ್ವಾದವನ್ನು ಮಾಡಿದರು. ಅವರೂ ಕೂಡ ರೈತರ ಶಾಲನ್ನು ಹೊದ್ದುಕೊಂಡು ರೈತರ ಹೆಸರಿನ ಮೇಲೆ

ಪ್ರಮಾಣವಚನವನ್ನು ಸ್ವೀಕಾರ ಮಾಡಿದರು. ಎಂದೂ ಕೂಡ ನಾನು ರೈತನಿಗೆ ತೊಂದರೆಯನ್ನು ಕೊಡುವುದಿಲ್ಲ, ರೈತರ ಪರವಾದ ನಿಲುವನ್ನು ತೆಗೆದು ಕೊಳ್ಳುತ್ತೇನೆ ಎಂದು ಶಪಥವನ್ನು ಮಾಡಿದರು. ಆದರೆ ಆ ಶಪಥದ ವಿರುದ್ಧವಾಗಿ ಅವರು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಎನ್ನುವ ಸಂಶಯ ನಮಗೆ ಬರುತ್ತಿದೆ. ಅದಕ್ಕೆ ಕಾರಣವೇನೆಂದರೆ, ಅವರಿಗೆ ಆಸಕ್ತಿ ಇಲ್ಲ, ಇಚ್ಛಾಶಕ್ತಿ ಇಲ್ಲ, ಸಾರ್ವಜನಿಕ ಬದುಕಿನ ಅಭಿವೃದ್ಧಿಯ ಪರವಾದಂಥ ನಿಲುವಿಗೆ ಒತ್ತು ಕೊಡುವುದು ಅವರಿಂದ ಆಗುತ್ತಿಲ್ಲ. ಅವರ ಪಕ್ಷದಲ್ಲಿರುವ ಆಂತರಿಕ ಭಿನ್ನಾಭಿಪ್ರಾಯಗಳು ಕಾರಣವೋ ಅಥವಾ ಹೇಗೆ finance ಅನ್ನು ಕ್ರೋಢೀಕರಿಸಬೇಕು ಎನ್ನುವುದೋ ನಮಗೆ ಅರ್ಥವಾಗುತ್ತಿಲ್ಲ. ಆ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ನೇರವಾದ ಗಮನವನ್ನು ಸೆಳೆಯಲಿಕ್ಕೆ ನಾನು ಬಯಸುತ್ತೇನೆ. ಪಂಪುಸೆಟ್ಟು ಬಳಕೆದಾರರಲ್ಲಿ ನಾನು ಎರಡು ಭಾಗಗಳನ್ನು ಮಾಡಲಿಕ್ಕೆ ಬಯಸುತ್ತೇನೆ. ಒಂದು ವರ್ಗ ಅಧಿಕೃತ ಪಂಪುಸೆಟ್ಟು ಬಳಕೆದಾರರು, ಮತ್ತೊಂದು ವರ್ಗ ಅನಧಿಕೃತ ಪಂಪುಸೆಟ್ಟು ಬಳಕೆದಾರರು. ನಾವು ಎಲ್ಲರಿಗೂ ಉಚಿತವಾಗಿ ವಿದ್ಯುತ್ ಕೊಡುತ್ತೇವೆ ಎಂದು ಸರ್ಕಾರದವರು ಘೋಷಣೆ ಮಾಡಿದರು. ಆ ಒಂದು ಘೋಷಣೆಯ ಹಿನ್ನಲೆಯಲ್ಲಿ ಅನಧಿಕೃತವಾಗಿರತಕ್ಕಂಥ ಪಂಪುಸೆಟ್ಟುಗಳನ್ನು ಸರ್ಕಾರ regularize ಮಾಡಲಿಲ್ಲ. ಅನಧಿಕೃತವಗಾಗಿರತಕ್ಕಂಥ ಎಲ್ಲ ಪಂಪುಸೆಟ್ಟುಗಳನ್ನು ನಾವು ಅಧಿಕೃತ ಎಂದು ಘೋಷಣೆ ಮಾಡುತ್ತೇವೆ ಎಂದು ಹೇಳಿದರು. ಆದರೆ ಅದ್ಯಾವುದೂ ಕಾರ್ಯರೂಪದಲ್ಲಿ ಬರಲಿಲ್ಲ. ಇವತ್ತು overload ಆಗಿರುವ I.P.setಗಳನ್ನು ರೈತ ಹೊಂದಿದ್ದಾನೆ. ಅಧಿಕೃತ ಮತ್ತು ಅನಧಿಕೃತ ಪಂಪುಸೆಟ್ಟುಗಳ ಲೋಡ್ T.C. ಮೇಲೆ ಬೀಳುವುದರಿಂದ, ಮೇಲಿಂದ ಮೇಲೆ T.C.ಗಳು ಸುಟ್ಟುಹೋಗುತ್ತಿವೆ ಮತ್ತು ರೈತನ ಪಂಪುಸೆಟ್ಟುಗಳು ಸುಟ್ಟುಹೋಗುತ್ತಿವೆ. ರೈತನ starter ಮುಂತಾದ ಪರಿಕರಗಳು ಸುಡುತ್ತಿವೆ. ಮಾನ್ಯ ಅಧ್ಯಕರ ಮುಖಾಂತರ ನಾನು ಈ ಸಮಸ್ಯೆಯನ್ನು ಹೇಳಲಿಕ್ಕೆ ಬಯಸುವುದು, ಸರ್ಕಾರದ ಗಮನ ಸೆಳೆಯುವುದೇನೆಂದರೆ, ಅನಧಿಕೃತವಾಗಿರತಕ್ಕಂಥ ಪಂಪುಸೆಟ್ಟುಗಳನ್ನು regularize ಮಾಡಿದ್ದೇವೆ

ಎಂದು ಹೇಳಿದ ಸರ್ಕಾರದವರು, ಒಂದು Detailed Project Report ತಯಾರು ಮಾಡಿ ಪಂಪುಸೆಟ್ಟುಗಳಿಗೆ ಅನುಗುಣವಾಗಿ T.C. ಗಳನ್ನು ಕೂಡಿಸತಕ್ಕಂಥ ಕೆಲಸ ಮಾಡದಿದ್ದರೆ ತೊಂದರೆಯಾಗುತ್ತದೆ. ಇದರಿಂದ ಒಂದು ಕಡೆ ಸರ್ಕಾರ ಕೂಡ ಆರ್ಥಿಕ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಮತ್ತೊಂದು ಕಡೆ ಮೇಲಿಂದ ಮೇಲೆ ರೈತರ ಪಂಪುಸೆಟ್ಟುಗಳು ಸುಟ್ಟುಹೋಗುವುದು, T.C.ಗಳು fail ಆಗುವುದು ಆಗುತ್ತದೆ. ಸಮಸ್ಯೆ ಏನೆಂದರೆ, ರೈತ ಸಾಲಸೋಲ ಮಾಡಿ ಬಂಡವಾಳ ಹಾಕಿರುತ್ತಾನೆ. ಬೇಕಾದವರ ಹತ್ತಿರ ಕೈಗಡ ತಂದುಕೊಂಡಿರುತ್ತಾನೆ. ತನ್ನ ಬದುಕಿಗೋಸ್ಕರ ಏನಾದರೂ ಮಾಡಿ ಆರ್ಥಿಕ ಹೊರೆಯನ್ನು ಹೊರಬೇಕು, ಉತ್ಪಾದನೆಯನ್ನು ತೆಗೆಯುವ ಮೂಲಕ ಬೆಳೆಗಳನ್ನು ಬೆಳೆಯಬೇಕು ಎಂದು ಮಾಡಿರುತ್ತಾನೆ.

ಶ್ರೀ ವೆಂಕಟರಾವ್ ನಾಡಗೌಡ: ಸಂಗಣ್ಣನವರೇ ಒಂದು ನಿಮಿಷ. ಇವರು T.C.ಗಳ ಬಗ್ಗೆ ಹೇಳುತ್ತಿದ್ದಾರೆ. ಪರಿಸ್ಥಿತಿ ಹೇಗಾಗಿದೆ ಎಂದರೆ, ಒಂದು ಕಡೆ ಕರೆಂಟ್ ಇಲ್ಲ, ಇನ್ನೊಂದು ಕಡೆ ಇಲಾಖೆಯ ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆಂದರೆ, ರಾಯಚೂರಿನಲ್ಲಿ ಡೀಸೆಲ್ ಬಿಲ್ ಕೊಟ್ಟಿಲ್ಲ ಎಂದು ಮೂರು ತಿಂಗಳಿಂದ ಲಾರಿಗಳೇ ನಡೆಯುತ್ತಿಲ್ಲ. T.C. ಸುಟ್ಟರೆ ರೈತ ಲಾರಿ ತೆಗೆದುಕೊಂಡು 120 ಕಿ.ಮೀ. ಇರುವ ರಾಯಚೂರಿಗೆ ಹೋಗಬೇಕು. ಮೂರು ದಿನ ಅಲೆದ ಮೇಲೆ ಕೊಡುತ್ತಾರೆ. ಮೊನ್ನೆ ನಮ್ಮಲ್ಲೇ ಒಂದು T.C. ಸುಟ್ಟಿದ್ದು, ನಾನು ಫೋನ್ ಮಾಡಿ T.C. ಕೊಡಿ ಎಂದು ಹೇಳಿದ ಮೇಲೆ, ಅವನು ಮೂರು ದಿನ ಅಲೆದ ಮೇಲೆ ಕೊಟ್ಟ T.C.ಯನ್ನು ತೆಗೆದುಕೊಂಡು ಹೋಗಿ fit ಮಾಡಿ ನೋಡಿದರೆ ಸುಟ್ಟಿರುವ T.C.ಯನ್ನು ಕೊಟ್ಟಿದ್ದಾರೆ. ಹೀಗಾದರೆ ರೈತರು ಬದುಕುವುದು ಹೇಗೆ? ಇವರ ಇಲಾಖೆಯಲ್ಲಿ ಹೇಗಾಗಿದೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ದುಡ್ಡನ್ನು ಕಾರ್ಪೊರೇಷನ್ನಿನವರು ಕಟ್ಟುತ್ತಾರೆ. ಇವರು ಅದಕ್ಕೆ signature ಮಾಡಿ approve ಮಾಡುವುದಕ್ಕೆ 2008ರಿಂದ pending ಇಟ್ಟುಕೊಂಡಿದ್ದಾರೆ. ತಮಗೆ ಈ ಲಿಸ್ಟ್ ಅನ್ನು ಕಳುಹಿಸಿಕೊಡುತ್ತೇನೆ. ಮಾನ್ಯಮುಖ್ಯಮಂತ್ರಿಗಳು ಇದನ್ನು

ನೋಡಬೇಕು. Approve ಮಾಡುವುದಕ್ಕೆ ಎರಡೆರಡು ವರ್ಷವಾದರೆ ಹೇಗೆ? ಗಂಗಾಕಲ್ಯಾಣ ಯೋಜನೆಯನ್ನು ಮಾಡಿದ್ದಾರೆ. ಅವುಗಳಿಗೆ connection ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಡೀಸೆಲ್ ಬಿಲ್ ಇಲ್ಲ ಎಂದು pending ಇಟ್ಟುಕೊಂಡಿದ್ದಾರೆ. ಈ ರೀತಿಯ ವ್ಯವಸ್ಥೆ ಇದೆ. ತಾವು ಇದನ್ನು ನೋಡಬೇಕು. ರೈತರು ಹೋಗಿ T.C.ಗಳನ್ನು ತರಬೇಕಾದಂಥ ಪರಿಸ್ಥಿತಿ ಇದೆ. ದಯವಿಟ್ಟು ಇದನ್ನು ಅಧ್ಯಕ್ಷರಿಗೆ ಕೊಡಪ್ಪ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಾಡಗೌಡರು ಹೇಳಿದ ಹಾಗೆ, ಗಂಗಾಕಲ್ಯಾಣ ಯೋಜನೆಯಲ್ಲಿ ಕೂಡ 2-3 ವರ್ಷಗಳಿಂದ T.C.ಗಳನ್ನು ಕೂಡಿಸಲಿಕ್ಕೆ ಆಗುತ್ತಿಲ್ಲ, ಅಲ್ಲಿ connection ಇಲ್ಲ. ಅಶಕ್ತ ವರ್ಗದವರನ್ನು ಗುರುತಿಸಿ ಅವರಿಗೆ ನೀರಾವರಿಯನ್ನು ಕೊಡಬೇಕು, ನೀರಾವರಿ ಕೊಟ್ಟರೆ ಅವರೂ ಕೂಡ ಸ್ವಾವಲಂಬಿ ಬದುಕನ್ನು, ಸ್ವಾಭಿಮಾನದ ಬದುಕನ್ನು ಹೊಂದುತ್ತಾರೆ ಎಂದು ನೀವು ಯೋಜನೆಗಳನ್ನು ಮಾಡುತ್ತೀರಿ. ಆದರೆ ಅವುಗಳ implementation ಇಲ್ಲ, ಅದಕ್ಕೆ power connection ಇಲ್ಲ. ಹೀಗಾದರೆ ಹೇಗೆ ಉತ್ಪಾದನೆಯನ್ನು ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳಿ. ತಾವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಸರ್ಕಾರದ ಯೋಜನೆಗಳು ಜಾರಿಯಾದಾಗ ಮಾತ್ರ ಅದರ ಲಾಭವನ್ನು ರೈತ ಪಡೆಯಲಿಕ್ಕೆ ಸಾಧ್ಯವಿದೆ. ಆ ಕಾರಣಕ್ಕಾಗಿ, ಗಂಗಾಕಲ್ಯಾಣ ಯೋಜನೆಯ T.C.ಗಳು ಯಾವಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು pending ಇವೆ ಎನ್ನುವುದನ್ನು ತರಿಸಿಕೊಂಡು, ಇಂಧನ ಇಲಾಖೆಯ ಮುಖ್ಯ ಅಧಿಕಾರಿಗಳು ಅಲ್ಲಿಗೆ ತಕ್ಷಣ ಅವುಗಳನ್ನು supply ಮಾಡಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತೇನೆ. ಅನಧಿಕೃತ ಪಂಪುಸೆಟ್ಟುಗಳೇನಿವೆ ಅವುಗಳಿಗೆ connection ಕೊಡಿ ಅಥವಾ T.C. ಕೂಡಿಸಿ ಎಂದು ನಾವು ಅಧಿಕಾರಿಗಳನ್ನು ಸಂಪರ್ಕ ಮಾಡಿದರೆ ಅವರು ಏನು ಹೇಳುತ್ತಾರೆ ಎಂದರೆ, ಅನಧಿಕೃತ ಪಂಪುಸೆಟ್ಟುಗಳಿಗೆ ಇಷ್ಟಿಷ್ಟು ದುಡ್ಡು ತುಂಬಬೇಕು ಎಂದು ಹೇಳುತ್ತಾರೆ. ಅದೇನೆಂದರೆ, meter charge 1,700 ರೂಪಾಯಿ ತುಂಬಬೇಕು, deposit 3,600 ರೂಪಾಯಿ ತುಂಬಬೇಕು, register fees 100 ರೂಪಾಯಿ

ತುಂಬಬೇಕು, penalty 10,000 ರೂಪಾಯಿ ತುಂಬಬೇಕು ಎಂದು ಹೇಳುತ್ತಾರೆ. ಈಗ ರೈತ ಈ ಹಣವನ್ನು ಎಲ್ಲಿಂದ ತುಂಬಲಿಕ್ಕೆ ಆಗುತ್ತದೆ? ಒಂದು ಕಡೆ ನೀವು ಅನಧಿಕೃತವಾಗಿರುವುದು ಅಧಿಕೃತ ಎಂದು ಘೋಷಣೆ ಮಾಡಿದಿರಿ, ನಾವು freeಆಗಿ ಕರೆಂಟ್ ಕೊಡುತ್ತೇವೆ ಎಂದು ಹೇಳಿದಿರಿ. ಸರ್ಕಾರ ಒಳ್ಳೆಯ ನಿರ್ಣಯ ಮಾಡಿದೆ ಎಂದು ರೈತ ಖುಷಿ ಪಟ್ಟರೆ, ಆ ರೈತನಿಗೆ T.C. ಕೊಡಿ, materials ಕೊಡಿ ಎಂದರೆ, ಇಷ್ಟೊಂದು ದುಡ್ಡು ತುಂಬಿ ಎಂದರೆ ಆ ರೈತನಿಗೆ ಎಲ್ಲಿಂದ ತುಂಬಲು ಸಾಧ್ಯ? 15,000 ರೂಪಾಯಿ ತುಂಬಿದಾಗ ಮಾತ್ರ ರೈತನ ಅನಧಿಕೃತ I.P. setಗಳು ಅಧಿಕೃತವಾಗುತ್ತವೆ. ಇದಕ್ಕೆ ಯಾರು ಜವಾಬ್ದಾರರು? ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳುತ್ತೇನೆ, ರೈತರಿಗೆ ಈ ಹಣವನ್ನು ತುಂಬಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ. ಅಲ್ಲಿಯವರೆಗೆ ಅವನಿಗೆ T.C. ಕೊಡುವುದಿಲ್ಲ, ಅವನಿಗೆ voltage ಬರುವುದಿಲ್ಲ. ಆಗ ಏನಾಗುತ್ತದೆ ಎಂದರೆ ಅಧಿಕೃತ ಮತ್ತು ಅನಧಿಕೃತ I.P.setಗಳನ್ನು ಹೊಂದಿರುವ ಇಬ್ಬರೂ ಹೊಡೆತ ತಿನ್ನುತ್ತಾರೆ. Formalities ಪ್ರಕಾರ deposit ಮಾಡಿರುತ್ತಾನೆ, meter charge ತುಂಬಿರುತ್ತಾನೆ, registration fees ತುಂಬಿರುತ್ತಾನೆ, ಅಂಥ ಅಧಿಕೃತರವಾಗಿರುವವನಿಗೂ voltage ಇಲ್ಲ, ಅನಧಿಕೃತವಾಗಿರುವವನಿಗೂ voltage ಇಲ್ಲ. ಹೀಗಾಗಿ ಇಬ್ಬರೂ ಕೂಡ ಬೆಳೆಯನ್ನು ಬೆಳೆಯಲಿಕ್ಕೆ ಆಗುತ್ತಿಲ್ಲ. Horticulture ಬೆಳೆಯನ್ನು ತೆಗೆದುಕೊಂಡರೆ ಅದನ್ನು ಬೆಳೆದ ರೈತ ಸಂಪೂರ್ಣವಾಗಿ ನಾಶವಾಗುತ್ತಿದ್ದಾನೆ. ಏಕೆಂದರೆ, ಒಂದು ಸಲ ಆರು ತಿಂಗಳಲ್ಲಿ ಮಾತ್ರ ಬೆಳೆ ಬೆಳೆಯತಕ್ಕದ್ದಲ್ಲ. ಕೃಷಿಯ ಬಗ್ಗೆ ಅಪಾರ ಜ್ಞಾನವಿರತರಕ್ಕಂಥ, ಹಿರಿಯ ಅನುಭವಿಗಳಾದಂಥ ಬಚ್ಚೇಗೌಡರು ಆ ಕಡೆ ಇದ್ದೀರಿ. ಮುಖ್ಯಮಂತ್ರಿಗಳಿಗೆ ಕಾರ್ಯದ ಒತ್ತಡ ಜಾಸ್ತಿ ಇರುತ್ತದೆ. ತಾವು ಸಲಹೆಯನ್ನು ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಂಗಣ್ಣನವರೇ, ಒಂದು ಮಾತನ್ನು ಹೇಳುತ್ತೇನೆ. ಅನಧಿಕೃತವಾಗಿ connection ತೆಗೆದುಕೊಂಡು, ಕೊಳವೆಬಾವಿ ಮಾಡಿಕೊಂಡು ನೀರನ್ನು ಹೊಡೆಯುವವರು ಈ ರಾಜ್ಯದಲ್ಲಿ

2–3 ಲಕ್ಷ ಇರಬಹುದು. ಅಧಿಕೃತವಾಗಿ ಇರುವವರು 10 ಲಕ್ಷ. ಅವರಿಗೆ 10 ಹೆಚ್.ಪಿ.ವರೆಗೆ ಉಚಿತವಾಗಿ ವಿದ್ಯುತ್ ಕೊಡುವುದಾಗಿದೆ ಎಂದು ಇಟ್ಟುಕೊಳ್ಳೋಣ. ಇವತ್ತು tail end ನಲ್ಲಿರುವವರಿಗೆ, ನಿಜವಾಗಿ ಸಿಗಬೇಕಾದಂಥವರಿಗೆ ನೀರು ಬರುವುದಿಲ್ಲ. ಇದು ತಮಗೆ ಗೊತ್ತಲ್ಲವೇ? ಕಾಲುವೆಯ tail end ನಲ್ಲಿದ್ದು ನೀರನ್ನು ನಿರೀಕ್ಷೆ ಮಾಡುತ್ತಾರೆ. ಮುಂದೆ ಇರುವಂಥವರು ಅನಧಿಕೃತವಾಗಿ ನೀರನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ನೀವು ಏನು suggest ಮಾಡುತ್ತೀರಿ? ಇವರನ್ನು ತೆಗೆದುಹಾಕಿ ಎಂದು ಹೇಳುವಿರಾ? ಅಥವಾ ಉಳಿಸಬೇಕು ಎಂದು ಹೇಳುವಿರಾ? ತಮ್ಮ suggestion ಏನು? ಮಧ್ಯೆಮಧ್ಯೆ ಇರುವ ಆ 2–3 ಲಕ್ಷ ರೈತರ ಗಲಾಟೆಯಾಗುತ್ತದಲ್ಲ, ಇದಕ್ಕೆ ತಾವು ಏನು suggerst ಮಡುತ್ತೀರಿ?

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಮ್ಮ ವಾದ ಏನೆಂದರೆ, ಎಲ್ಲರನ್ನೂ ಅಧಿಕೃತ ಎಂದು ಘೋಷಣೆ ಮಾಡಿ, regularize ಮಾಡಿ. ರೈತರಲ್ಲಿ ಒಬ್ಬರಿಗೆ ಒಂದು ನ್ಯಾಯ, ಇನ್ನೊಬ್ಬರಿಗೆ ಇನ್ನೊಂದು ನ್ಯಾಯ ಎಂದರೆ ಹೇಗೆ? ನಮ್ಮ ಒತ್ತಾಯವೇನೆಂದರೆ, ಅಧಿಕೃತ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆದಾರರಂತೆ ಅನಧಿಕೃತ I.P. Set ಗಳ ವಿದ್ಯುತ್ ಬಳಕೆದಾರರನ್ನು ಅಧಿಕೃತವೆಂದು ಅವರನ್ನು regularize ಮಾಡಿ, ಅವರಿಗೂ ಕೂಡ transformers ಅನ್ನು ಕೂರಿಸತಕ್ಕಂಥದ್ದು ಮಾಡಿದರೆ ಕನಿಷ್ಠಪಕ್ಷ ನೀವು ವೇಳಾಪಟ್ಟಿ ಪ್ರಕಾರ ಏನು 6 ಗಂಟೆ ಕೊಡುತ್ತೀರೋ, 4 ಗಂಟೆ ಕೊಡುತ್ತೀರೋ, ಆ ರೀತಿ ಕೊಡುವ ಅವಧಿಯಲ್ಲಾದರೂ ಅವನು ತನ್ನ ಪರಿಕರಗಳನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಿದೆ. ಒಬ್ಬ ರೈತನ ಒಂದು ಪಂಪ್‌ಸೆಟ್ ಫೇಲ್ ಆದರೆ ಅದನ್ನು ಅವನು rewinding ಮಾಡಿಸಬೇಕಾದರೆ ಅವನು 3–5 ಸಾವಿರ ರೂ. ಖರ್ಚು ಮಾಡಬೇಕಾಗುತ್ತದೆ. ರೈತ T.C. ಗಳನ್ನು ಪಡೆದುಕೊಳ್ಳಬೇಕಾದರೆ 15–20 ಸಾವಿರ ರೂ. ಕೊಡಬೇಕಾಗುತ್ತದೆ. ರೈತನೇ ಹೋಗಿ T.C. ಗಳನ್ನು rewinding ಮಾಡಿಸಿಕೊಂಡು ಬರುತ್ತಾನೆ. ನಾವು ಯಾವ ವ್ಯವಸ್ಥೆಯಲ್ಲಿದ್ದೇವೆ? ಒಂದು ಕಡೆ ರೈತರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದೇವೆ, ರೈತರ ಅಭ್ಯುದಯವೇ ನಮ್ಮ

ಅಭ್ಯುದಯವೆಂದು ನಾವು ಹೇಳುತ್ತೇವೆ. ಇದು ಕೇವಲ ಘೋಷಣೆಯಾದರೆ ಹೇಗೆ? Practical ಆಗಿ ನೀವೇನು think ಮಾಡುತ್ತೀರಿ? ಅವರಿಗೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ. ಆ ಕಾರಣಕ್ಕಾಗಿ ನಾನು ಒತ್ತಾಯವನ್ನು ಮಾಡುತ್ತೇನೆ, ಇವತ್ತು ನಾವು ರೈತರನ್ನು ಬಿಟ್ಟರೆ ಬದುಕಲಿಕ್ಕಾಗುವುದಿಲ್ಲ. ಪವರ್ ಕಡಿಮೆ ಇರುವುದರಿಂದ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ತೊಂದರೆಯಾಗಿದೆ. ತಾವೇ ಮಂತ್ರಿಯಾಗಿದ್ದಾಗ ಕುಡಿಯುವ ನೀರಿನ ಸಲುವಾಗಿ ಕೊಪ್ಪಳ ಜಿಲ್ಲೆಗೆ ಅನುಕೂಲ ಮಾಡಿಕೊಟ್ಟಿದ್ದಿರಿ. 28 ಕಿ.ಮೀ. ದೂರದಲ್ಲಿರುವ ನದಿಯಿಂದ ನೀರನ್ನು ಕುಡಿಯುವ ನೀರು ಸಲುವಾಗಿ ಕೊಪ್ಪಳ ಜಿಲ್ಲೆಗೆ ತರಬೇಕಾಗಿತ್ತು. ನೀವು ಕೊಡತಕ್ಕಂಥ 2 ಗಂಟೆ ಪವರ್‌ನಲ್ಲಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಹಾಗಾಗಿ, ನೀವು 6 ಗಂಟೆ ಪವರ್ ಸಪ್ಲೈ ಮಾಡಿದರೆ ಸಾಕಾಗುವುದಿಲ್ಲ. ಈಗ summer ಬಂದಿದೆ. ಕುಡಿಯುವ ನೀರನ್ನೇ ಕೊಡಲಿಕ್ಕಾಗದಿದ್ದರೆ ಹೇಗೆ? ಕನಿಷ್ಠ ಪಕ್ಷ 10 ಗಂಟೆಯಾದರೂ 3 phase ವಿದ್ಯುತ್ ಕೊಡಬೇಕು. 800 ಮೆ.ವ್ಯಾ. ವಿದ್ಯುತ್ ಖರೀದಿ ಮಾಡುತ್ತೀರೋ, 1000 ಮೆ.ವ್ಯಾ. ವಿದ್ಯುತ್ ಖರೀದಿ ಮಾಡುತ್ತೀರೋ ಅದು ಸರ್ಕಾರಕ್ಕೆ ಬಿಟ್ಟಿರುವ ವಿಚಾರವಾಗಿದೆ. ಆದರೆ, ರೈತನಿಗೆ ಕನಿಷ್ಟ ಪಕ್ಷ ಕುಡಿಯುವ ನೀರಿಗಾದರೂ ಅನುಕೂಲವಾಗುವ ಹಾಗೆ 10 ಗಂಟೆ 3 phase ವಿದ್ಯುತ್ ಅನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕೂಡ ಯೋಚನೆ ಮಾಡಬೇಕು. ನಗರಗಳಲ್ಲಿರುವ ಮಕ್ಕಳಿಗೆ ಅಲ್ಪಸ್ವಲ್ಪವಾದರೂ ವಿದ್ಯುತ್ supply ಇದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಒಂದು ವರ್ಷ ಫೀಸ್ ಕಟ್ಟಿರುವುದಾಗಿರಲಿ, ಆ ಮಗು ಮುಂದೆ ತನ್ನ ಕುಟುಂಬಕ್ಕೆ ಆಧಾರವಾಗುತ್ತಾನೆಂದು ಸಂಕಲ್ಪವಿಟ್ಟುಕೊಂಡು ತಂದೆ ತಾಯಿ ಓದಿಸುತ್ತಿದ್ದಾರೆ, ಅವರ ಗೋಳು ಹೇಳತೀರದು. ಆ ಕಾರಣಕ್ಕಾಗಿ, ಅದರ ಬಗ್ಗೆ ಒಂದು concept ಇಟ್ಟುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತೋಟಗಾರಿಕೆ ಬೆಳೆಯಂತೂ ಸಂಪೂರ್ಣವಾಗಿ ಹಾಳಾಗಿದೆ. ನಮ್ಮ ಉತ್ತರ

ಕರ್ನಾಟಕದಲ್ಲಿ ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ನಾವು ದಾಳಿಂಬೆ, ಪಪ್ಪಾಯಿ, ಮ್ಯಾಂಗೋ, ಬನಾನ ಬೆಳೆಯುವ ಬೆಳೆಗಳಿಗೆ 10–20 ವರ್ಷ life ಇರುತ್ತದೆ. ಆದರೆ, ನಾಲ್ಕಾರು ವರ್ಷ ರೈತ ಕಷ್ಟಪಟ್ಟು ಆ ಬೆಳೆಗಳನ್ನು ಬೆಳೆದಿರುತ್ತಾನೆ. ಆದರೆ, ಕರೆಂಟ್ ಇಲ್ಲದೆ ನೀರಿಲ್ಲವೆಂದರೆ ಬೆಳೆಯನ್ನು ಉಳಿಸಿಕೊಳ್ಳಲಿಕ್ಕೆ ಹೇಗೆ ಸಾಧ್ಯ? ಆ ಕಾರಣಕ್ಕಾಗಿ ಆಹಾರೋತ್ಪಾದನೆ ಕುಂಠಿತವಾಗುತ್ತಿದೆ, ಸಣ್ಣ ಸಣ್ಣ ಉದ್ದಿಮೆದಾರರು ಕೂಡ ತಮ್ಮ ನೋವನ್ನು ಮಾಧ್ಯಮದವರ ಮುಖಾಂತರ ಹೇಳಿಕೊಂಡರು. ತಮಗೆ ಯಾವಾಗ ಕರೆಂಟ್ ಹೋಗುತ್ತದೆನ್ನುವುದೂ ಗೊತ್ತಾಗುವುದಿಲ್ಲ, ನಮಗೆ ಅಲ್ಲಿರುವ ಲೋಹಗಳು ನಿರ್ದಿಷ್ಟ ಪ್ರಮಾಣದಲ್ಲಿ ಉಷ್ಣಾಂಶವನ್ನು ಪಡೆದುಕೊಂಡಿರುತ್ತದೆ, ತಕ್ಷಣ ಇವರು ಪವರ್ ಕಟ್ ಮಾಡಿದಾಗ ಅದು ಮತ್ತೆ ಅದೇ ಉಷ್ಣಾಂಶಕ್ಕೆ ಬರಬೇಕಾದರೆ ಬಹಳಷ್ಟು ವಿದ್ಯುತ್ ಬೇಕಾಗುವುದರಿಂದ ನಮಗೆ ಆರ್ಥಿಕ ನಷ್ಟವಾಗುತ್ತಿದೆ ಎಂದು ಉದ್ದಿಮೆದಾರರು ಹೇಳುತ್ತಿದ್ದರು. ಅಂದರೆ, ಈ ಸರ್ಕಾರ ಯಾರ ಪರವಾಗಿ ಕೆಲಸ ಮಾಡುತ್ತಿದೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಇದು ಬಹಳ ನೋವಿನ ಸಂಗತಿ. ಮಾನ್ಯ ಉಮೇಶ್ ಕತ್ತಿಯವರು ರೈತರ ಪರವಾಗಿ ಬಹಳ ಹೇಳಿದರು. ಇದೇ ಹೌಸ್‌ನಲ್ಲಿ ಕಳೆದ ಬಾರಿ ದಾಳಿಂಬೆ ಬೆಳೆ ಬಗ್ಗೆ ಕೇಂದ್ರ ಸರ್ಕಾರದ ಪ್ಯಾಕೇಜ್ ಹಣವನ್ನು ರಾಜ್ಯ ಸರ್ಕಾರ ಕೊಡುವಂಥದ್ದನ್ನು ಇವರು ಒಪ್ಪಿಕೊಂಡಿದ್ದಾರೆ. ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರ ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿನ ಎಲ್ಲಾ ರೈತರು ಕೂಡಲಸಂಗಮದಲ್ಲಿ ದೊಡ್ಡ procession ಮಾಡಿ ಸರ್ಕಾರ ನಮಗೆ ಬರುವ package ಹಣವನ್ನು ಕೊಡಲಿಲ್ಲವೆಂದು ದೊಡ್ಡ ಹೋರಾಟ ಮಾಡಿದರು. ಆ ಕಾರಣಕ್ಕಾಗಿ, ನೀವು ರೈತರ ಪರವಾಗಿದ್ದವರು ನೀವು, ಅದಕ್ಕೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ನೀವು ರೈತರ ನೆರವಿಗೆ ಬರಬೇಕಾಗುತ್ತದೆ. ಆಗ ಉಮೇಶ್ ಕತ್ತಿಯವರು ಉತ್ತರ ಕರ್ನಾಟಕದವರಾಗಿದ್ದು ಮಂತ್ರಿಯಾಗಿದ್ದಾರೆ ಅವರು ನಮ್ಮ ನೆರವಿಗೆ ಬಂದರೆಂದು ಜನ ಹಾಡಿ ಹರಸುತ್ತಾರೆ. ಇಲ್ಲದಿದ್ದರೆ, ಯಾವ ಮಟ್ಟಕ್ಕಿದೆ ಎಂದರೆ, ನಿನ್ನೆ ಸಿದ್ದರಾಮಯ್ಯನವರು ಹೇಳಿದಹಾಗೆ, ಮಾನ್ಯ ಯಡಿಯೂರಪ್ಪನವರೆ ಬನ್ನಿ

ನಾವು ಗ್ರಾಮೀಣ ಭಾಗಕ್ಕೆ ಹೋಗೋಣ ಆಗ ಅಲ್ಲಿ ನಿಮಗೆ ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆ ಎಂದು ಹೇಳಿ ಕರೆಯುತ್ತಿದ್ದರಲ್ಲ, ಅದೇ ರೀತಿ ಇಂದು ನಾವೂ ನಿಮ್ಮನ್ನು ಕರೆಯುತ್ತಿದ್ದೇವೆ. ನೀವು ಅಲ್ಲಿ ಬಂದು ನೀವು ಹೇಗೆ ಕಾರ್ಯಕ್ರಮಗಳನ್ನು ಮಾಡುತ್ತೀರಿ ಎಂಬುದನ್ನು ನೋಡುವುದಕ್ಕೆ ರೈತರು ತಯಾರಾಗಿದ್ದಾರೆ. ಆ ಕಾರಣಕ್ಕಾಗಿ ಆ ಚಿಂತನೆಯನ್ನು ನೀವು ಮಾಡಿ ನಾನು ಒತ್ತಾಯ ಮಾಡುತ್ತೇನೆ. ಮನುಷ್ಯ ಜೀವಿಸಲು ಗಾಳಿ, ನೀರು, ಬೆಳಕು, ಅನ್ನ ಎಷ್ಟು ಪ್ರಾಮುಖ್ಯವಿದೆಯೋ ಅಷ್ಟೇ ಇವತ್ತು ನಮಗೆ ವಿದ್ಯುತ್ ಸಹ ಪ್ರಾಮುಖ್ಯವಾಗಿದೆ. ಆ ಪರಿಕಲ್ಪನೆಯನ್ನು ಮುಖ್ಯಮಂತ್ರಿಯವರಿರಬಹುದು, ತೋಟಗಾರಿಕೆ ಇಲಾಖೆ ಮಂತ್ರಿ ಇರಬಹುದು, ಕೈಗಾರಿಕೆ ಇಲಾಖೆ ಮಂತ್ರಿಯವರಿರಬಹುದು, ಕೃಷಿ ಇಲಾಖೆ ಮಂತ್ರಿ ಇರಬಹುದು, ಇವರೆಲ್ಲ ಸಭೆಯನ್ನು ಮಾಡಬೇಕಾಗುತ್ತದೆ. Concerned Department Secretaries ಕರೆಸಬೇಕಾಗುತ್ತದೆ. ಮಳೆಗಾಲ ಮುಗಿದ ನಂತರ ನೀವು ಒಂದು plan ಮಾಡಿಕೊಳ್ಳಬೇಕಾಗುತ್ತದೆ. ಜಲಸಂಗ್ರಹ ಎಷ್ಟಾಗಿದೆ, ಜಲದ ಮೂಲಕ ನಾವು ಎಷ್ಟು ವಿದ್ಯುತ್ ಅನ್ನು ಕೊಡಬಲ್ಲೆವು? ಅಥವಾ Thermal ಮೂಲಕ, Coal ಮೂಲಕ ಎಷ್ಟು ವಿದ್ಯುತ್ ಕೊಡಬಲ್ಲೆವು? Wind power ನಿಂದ ಎಷ್ಟು ವಿದ್ಯುತ್ ಕೊಡಬಲ್ಲೆವು? ಎಂಬ calculation ಮಾಡಿಕೊಂಡು ಎಷ್ಟು ವಿದ್ಯುತ್ ಖರೀದಿಸಲು ಹಣಕಾಸಿನ ನೆರವು ನಮ್ಮ ಹತ್ತಿರ ಇದೆ ಎನ್ನುವ ಬಗ್ಗೆ ಪ್ಲಾನ್ ಮಾಡದಿದ್ದರೆ ಕಷ್ಟವಾಗುತ್ತದೆ. ಇವತ್ತು ನೀವೆಲ್ಲರೂ ಅಸಹಾಯಕತೆಯನ್ನು ತೋರಿಸುತ್ತಿದ್ದೀರಿ. ಇಡೀ ರಾಜ್ಯ ಅಭಿವೃದ್ಧಿಯಿಲ್ಲದೆ ಕುಂಠಿತವಾಗುವುದಕ್ಕೆ ಕಾರಣವಾಗುತ್ತಿದ್ದೀರಿ, ಒಂದು ಇತಿಹಾಸವನ್ನು ಸೃಷ್ಟಿಮಾಡುತ್ತೀರಿ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಹಾಗೆಯೇ, ನಿಮಗೇನಾದರೂ ಹೊಸ concept ಇದ್ದರೆ, ರೈತರ ಪರವಾದಂಥ ನಿಲುವು ಇದ್ದರೆ ರಾಜ್ಯವನ್ನು ಅಭಿವೃದ್ಧಿಯ ಕಡೆಗೆ ಒಯ್ಯಬೇಕೆನ್ನುವ ದೃಷ್ಟಿಕೋನ ನಿಮಗಿದ್ದರೆ ಮತ್ತೆ ನೀವು ಸಭೆ ಸೇರಿ ಏನಾದರೂ ಮಾಡಿ 10 ತಾಸು 3 phase ವಿದ್ಯುತ್ ಅನ್ನು ಕೊಡುವುದಕ್ಕೆ ತಾವು ಒಂದು ನಿರ್ಣಯವನ್ನು ಮಾಡಬೇಕೆಂದು ಮಾನ್ಯ

ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಅನೇಕ ನಾಯಕರುಗಳು ಮಾತನಾಡಿರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಒಂದೇ ಒಂದು ವಿನಂತಿ ಏನೆಂದರೆ, ಈಗಿರುವ ಅನಧಿಕೃತ ಪಂಪ್‌ಸೆಟ್ಟುಗಳನ್ನು ಅಧಿಕೃತ ಎಂದು ಸರ್ಕಾರ ಘೋಷಣೆ ಮಾಡಬೇಕು. ಅದಕ್ಕೆ ಸಂಬಂಧಪಟ್ಟವರು ಹಣ ತುಂಬಬೇಕೆಂದು ಆದೇಶ ಮಾಡಿದರೆ ಆ ಹಣವನ್ನು ಆ ರೈತನಿಂದ ತುಂಬಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, 15 ಸಾವಿರ ರೂಪಾಯಿಗಳನ್ನು ತುಂಬಬೇಕಾಗುತ್ತದೆ. ಇಂಥ deposit ಇರಬಹುದು, penalty ಇರಬಹುದು, ಮೀಟರ್ ಚಾರ್ಜ್ ಇರಬಹುದು, ಅವು ಯಾವುದನ್ನೂ ಕೂಡ ಆ ರೈತನಿಂದ ತುಂಬಲಿಕ್ಕೆ ಸಾಧ್ಯವಾಗುವುದಿಲ್ಲ. ನೀವು ಕನಿಷ್ಟ ಪಕ್ಷ TC ಗಳನ್ನು Detailed Project Report ಮಾಡಿ ಅಷ್ಟು TC ಗಳನ್ನು fix ಮಾಡಿದರೆ ಸರ್ಕಾರಕ್ಕೆ ಆರ್ಥಿಕ ಹೊರೆ ಸಹ ಕಡಿಮೆಯಾಗುತ್ತದೆ ಮತ್ತು ರೈತನಿಗೆ ಸಹ ಗುಣಮಟ್ಟದ ವಿದ್ಯುತ್ ಸಿಗುತ್ತದೆ, ಇದ್ದುದರಲ್ಲಿ ಒಂದು ವೇಳಾಪಟ್ಟಿ ಮಾಡಿಕೊಂಡು ತನ್ನ ಜಮೀನಿಗೆ ನೀರನ್ನು ಹರಿಸುವ ಕೆಲಸವನ್ನು ರೈತ ಮಾಡುತ್ತಾನೆ ಅದರ ನೆರವಿಗೆ ನೀವು ಬರಬೇಕು. ಇಲ್ಲದಿದ್ದರೆ ಮುಂದಿನ ದಿನಮಾನದಲ್ಲಿ ರೈತ ಅತ್ಯಂತ ಸಂಕಷ್ಟಕ್ಕೊಳಗಾಗುತ್ತಾನೆ. ಈಗಾಗಲೇ ರೈತ ಸಾಲ ಮಾಡಿ ಇವತ್ತು ಸ್ವಾಭಿಮಾನಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಉದಾಹರಣೆಯನ್ನು ನಾವೆಲ್ಲ ನೋಡಿದ್ದೇವೆ. ಮತ್ತೆ ಅದು ಮರುಕಳಿಸದ ಹಾಗೆ ಸರ್ಕಾರ ಎಚ್ಚರಿಕೆಯ ಹೆಜ್ಜೆಯನ್ನಿಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ತಮ್ಮಲ್ಲಿ ಒತ್ತಾಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು.ಟಿ. ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಈಗಾಗಲೇ ಹಲವಾರು ನಾಯಕರು ಮಾತನಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ವಿದ್ಯುಚ್ಛಕ್ತಿ ಅಭಾವ ಏನು ಕಾಣುತ್ತಿದೆ ರಾಜ್ಯದ ಎಲ್ಲಾ ಜನಸಾಮಾನ್ಯರಿಗೂ ಆ ಸಮಸ್ಯೆ ಮುಟ್ಟಿದೆ. ಪ್ರಪ್ರಥಮವಾಗಿ ಸರ್ಕಾರ ಇವತ್ತು ಆಲೋಚನೆ ಮಾಡಬೇಕು, ಜನಸಾಮಾನ್ಯರು ಬೆಳಗ್ಗೆಯಿಂದ ಸಂಜೆವರೆಗೆ ದುಡಿದು, ಆ ದುಡಿಯುವ

ಸಮಯದಲ್ಲಿ ಅವರು ಬೆವರು ಸುರಿಸಿ ಮನೆಗೆ ಬಂದಾಗ ಈ ವಿದ್ಯುತ್‌ನ ಅಭಾವದಿಂದಾಗಿ ಮತ್ತೆ ರಾತ್ರಿಯಿಡೀ ಬೆವರು ಸುರಿಸಿಕೊಂಡು ಮಲಗಿಕೊಳ್ಳಬೇಕಾದ ಸಮಸ್ಯೆಯಾಗಿದೆ. ಅವರು ಬೆಳಗ್ಗಿನಿಂದ ಸಂಜೆವರೆಗೆ ದುಡಿದು ರಾತ್ರಿಯ ಹೊತ್ತಾದರೂ ಸಮಾಧಾನವಾಗಿ ಜೀವನ ಕಳೆಯುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ಸೂಕ್ತವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅಂಥ ಸಂದರ್ಭದಲ್ಲಿ ಆಗುವಂಥ ಹಲವಾರು ಸಮಸ್ಯೆಗಳ ಬಗ್ಗೆ ಸ್ಪಷ್ಟವಾಗಿ ಆಲೋಚನೆ ಮಾಡಬೇಕು. ಒಬ್ಬ ಇವತ್ತು ಊಟ ಮಾಡಬೇಕಾದರೆ ಅಥವಾ ಒಬ್ಬ ಮನೆ ಕಟ್ಟಬೇಕಾದರೆ ಅಥವಾ ಒಂದು ಬಟ್ಟೆ ಹಾಕಬೇಕಾದರೆ, ರೋಟಿ, ಕಪಡಾ ಔರ್ ಮಕಾನ್, ಇದು ಇರಬೇಕಾದರೆ ಕನಿಷ್ಠ ಅವನಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಮಾತ್ರ ಸಾಧ್ಯ. ಇದಕ್ಕೆ ಬೇಕಾದ ದೃಢವಾದ ಕಾನೂನನ್ನು ಮಾಡಿದರೆ ಮಾತ್ರ ಪ್ರಯೋಜನವಾಗುತ್ತದೆಯೇ ಹೊರತು ಗೋಹತ್ಯೆ ಕಾನೂನು, ಮತಾಂತರ ನಿಷೇಧ ಕಾನೂನು ತಂದರೆ ಯಾರ ಹೊಟ್ಟೆಯೂ ತುಂಬುವುದಿಲ್ಲವೆಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಕಾಲ ಕೂಡಿ ಬಂದಿದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇವತ್ತಿನವರೆಗೆ ವಿಶೇಷವಾದ ಕಾನೂನು, ಯೋಜನೆ ತಯಾರು ಮಾಡಿದ್ದೇವೆಯೇ ಎಂದರೆ ಇಲ್ಲ. ಕಳೆದ ಎರಡು ವರ್ಷಗಳಿಂದ ಕರೆಂಟ್ ಹೆಚ್ಚು ಮಾಡುವುದಕ್ಕೆ ಏನು ಮಾಡಬೇಕು ಇತ್ಯಾದಿ ಬಗ್ಗೆ ಸಲಹೆ ಕೊಡಿ ಎಂದು ಯಾರೂ ಸಹ ಕೇಳಿಲ್ಲ. ಬಹುಶ: ಎರಡು ವರ್ಷಗಳ ಹಿಂದೆ ಈ ಸರ್ಕಾರ ತನ್ನ ಅಧಿಕಾರವನ್ನು ಪ್ರಾರಂಭಿಸಿದಾಗ ನೀವು 50 ವರ್ಷ ಆಡಳಿತ ನಡೆಸಿ ಮಾಡದಿರುವುದನ್ನು ನಾವು ಮಾಡಿ ತೋರಿಸುತ್ತೇವೆಂದು ಹೇಳಿದ್ದೀರಿ ಹೊರತು ನಮ್ಮ ಸಲಹೆ ಕೇಳಿದ್ದರೆ ಏನಾದರೂ ಪ್ರಯೋಜನವಾಗುತ್ತಿತ್ತು ಎಂದು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಕೈಗಾರಿಕೆಗಳು ಈಗ ಯಾವ ಗಂಭೀರವಾದ ಪರಿಸ್ಥಿತಿಯಲ್ಲಿದೆಯೆಂದರೆ, ಯಾವ್ಯಾವ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿವೆಯೋ ಅವೆಲ್ಲ ಇವತ್ತು loss ಆಗಿ ಮುಚ್ಚುವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಯುವಕರು ಸಮಾಜದಲ್ಲಿ ಬಲಿಷ್ಠವಾಗಿ ತಮ್ಮ ಸ್ವಂತ ಕಾಲಿನಲ್ಲಿ ನಿಲ್ಲಬೇಕೆನ್ನುವ ಆಲೋಚನೆ

ಇಟ್ಟುಕೊಂಡು ಕೈಗಾರಿಕೆಯನ್ನು ಪ್ರಾರಂಭಿಸುವುದಕ್ಕೆ ಹೊರಟಾಗಲೂ ಕೂಡ ಇವತ್ತು ಕೈಗಾರಿಕೆಗಳನ್ನು ಪ್ರಾರಂಭಿಸಲಿಕ್ಕೆ ಮುಂದೆ ಬರುವುದಿಲ್ಲ. ಇವತ್ತು KIADB ಮುಖಾಂತರ ಕೈಗಾರಿಕೆಗಳನ್ನು ಪ್ರಾರಂಭಿಸಲು ಸ್ಥಳ ಕೊಡುತ್ತೇವೆಂದರೂ ಮುಂದೆ ಬರುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಕೇವಲ Infosys company ಮಾತ್ರ ಪ್ರಾರಂಭವಾಗಿದೆಯೇ ಹೊರತು ಬೇರೆ ಯಾವ ಕಂಪನಿಗಳೂ ಕೂಡ ಪ್ರಾರಂಭವಾಗಿಲ್ಲ. ಏಕೆಂದರೆ ಅವರಿಗೆ ಬೇಕಾಗುವಷ್ಟು ಕರೆಂಟ್ ಅನ್ನು ಕೊಡುವ ವ್ಯವಸ್ಥೆ ಇಲ್ಲ. ಯಾವ ಕಂಪನಿಗಳಿಲ್ಲದೆ ಇವತ್ತು ಉದ್ಯೋಗ ಸೃಷ್ಟಿಯಾಗುವಂಥ ವಾತಾವರಣವಿಲ್ಲ. ಇದರ ನಡುವೆ ನಾವು ಲಕ್ಷ್ಮೀ ಮಿತ್ತಲ್‌ರವರನ್ನೋ, ಟಾಟಾರವರನ್ನು ಕರೆದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ, ಅವರಿಗೆ ಬರುವುದಕ್ಕೆ ತಲೆ ಕೆಟ್ಟಿದೆಯೇ? ಇರುವಂಥ ಕಂಪನಿಗಳಿಗೇ ಕರೆಂಟ್ ಕೊಡುವುದಕ್ಕೆ ಆಗುತ್ತಿಲ್ಲ. ಇಂಥ ಕಂಪನಿಗಳು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಆಸಕ್ತಿ ತೋರಿಸುತ್ತವೆಯೇ? ಯಾರೋ ವಿದೇಶದಲ್ಲಿದ್ದವರೋ ಅಥವಾ ದೊಡ್ಡ ದೊಡ್ಡ ಕಂಪನಿಗಳು ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸುವುದಕ್ಕೆ ಆಸಕ್ತಿ ವಹಿಸುತ್ತಾರೆಯೇ ಎನ್ನುವ ಬಗ್ಗೆ ಆಲೋಚನೆ ಮಾಡುವ ಕಾಲ ಬಂದಿದೆ. ವಿದ್ಯಾರ್ಥಿಗಳು ಈ ದೇಶದ ಶಕ್ತಿ. ಈ ದೇಶ ಬಲಿಷ್ಠವಾಗಿ ಭಾರತ ನಿರ್ಮಾಣವಾಗಬೇಕಾದರೆ ವಿದ್ಯಾರ್ಥಿಗಳನ್ನು ಬಲಿಷ್ಠರನ್ನಾಗಿ ಮಾಡಬೇಕೆಂದು ನಾವು ಬಹಳಷ್ಟು ಮಾತನಾಡುತ್ತೇವೆ. ಇದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಹಾಗಾಗಿ, ವಿದ್ಯಾರ್ಥಿಗಳ ಪರೀಕ್ಷಾ ಸಮಯದಲ್ಲಿ ಅವರಿಗೆ ಕಲಿಯಲಿಕ್ಕಾಗಿ ವಿದ್ಯುತ್ ಕೊಡುವ ಸ್ಥಿತಿಯಲ್ಲಿ ನಾವಿಲ್ಲದಿದ್ದರೆ ಈ ದೇಶಕ್ಕೆ ಎಷ್ಟು ದೊಡ್ಡ ದ್ರೋಹವನ್ನು ನಾವು ಮಾಡುತ್ತಿದ್ದೇವೆನ್ನುವುದನ್ನು ನಾವು ಇವತ್ತು ಆಲೋಚನೆ ಮಾಡಬೇಕು. ಸೀಮೆ ಎಣ್ಣೆ ಕೂಡ ಸಿಗುತ್ತಿಲ್ಲ. ಸೀಮೆ ಎಣ್ಣೆ ದೀಪದ ಬೆಳಕಿನಲ್ಲಿ ಓದುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇದನ್ನೆಲ್ಲ ಆಲೋಚನೆ ಮಾಡಿ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಬೇಕು, ಉತ್ತಮ ಅಂಕಗಳನ್ನು ಪಡೆಯಬೇಕು, ಸತ್ಪ್ರಜೆಗಳಾಗಿ ಬಾಳುವ ಅವಕಾಶ ಮಾಡಿಕೊಡಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕೆಂದು

ಕೇಳಿಕೊಳ್ಳುತ್ತೇನೆ. ಇನ್ನು, ರೈತರ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಒಬ್ಬ ರೈತ ತನ್ನ ಇಡೀ ಬಂಡವಾಳವನ್ನು ಕೃಷಿಗೆ ಹಾಕಿರುತ್ತಾನೆ. ಸರಿಯಾಗಿ ಕರೆಂಟ್ ಕೊಡದ ಸಂದರ್ಭದಲ್ಲಿ ಅವನಿಗೆ ಹಲವಾರು ರೀತಿ ನಷ್ಟವಾಗುತ್ತದೆ. ಆ ನಷ್ಟವನ್ನು ಸರ್ಕಾರ ಭರಿಸಬೇಕೆಂದು ಹೇಳುತ್ತೇನೆ. ನಾನು ಸ್ಪಷ್ಟವಾಗಿ ಹೇಳುವುದಿಷ್ಟೆ, ರೈತರಿಗೆ ವಿದ್ಯುತ್ ಅಭಾವದಿಂದ ಎಷ್ಟು ನಷ್ಟವಾಗಿದೆ ಅದನ್ನು ನೋಡಿ ಮಾನ್ಯ ಮುಖ್ಯಮಂತ್ರಿಯವರಿಗೆ ರೈತರ ಮೇಲೆ ಕಾಳಜಿ ಇದ್ದರೆ ಪ್ರತಿಯೊಬ್ಬ ರೈತರಿಗೂ ಸರ್ಕಾರ ಸಂಪೂರ್ಣ compensation ಕೊಡುವ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಎಲ್ಲಾ ಕಡೆ ನೀರಿನ ಸಮಸ್ಯೆ ಇದೆ. ಇದ್ದ ಬೋರ್‌ವೆಲ್‌ನಿಂದ ಪಂಪ್ ಮಾಡಲಿಕ್ಕೆ ಹಣವಿಲ್ಲ. ಪಂಪ್ ಇದ್ದವರಿಗೆ ವಿದ್ಯುತ್ ಒದಗಿಸುವ ವ್ಯವಸ್ಥೆ ಇಲ್ಲ. ಒಂದು TC ಗೆ 50 ಸಾವಿರ ರೂ. ಕಟ್ಟಬೇಕು. ಅಷ್ಟು ಹಣ ಕಟ್ಟಿದರೂ ಕೂಡ ಸರಿಯಾದ ವ್ಯವಸ್ಥೆ ಇಲ್ಲ. ಇದು ರಾಜ್ಯದ ಸಂಪೂರ್ಣ ಅಭಿವೃದ್ಧಿಗೆ ಸ್ಪಷ್ಟವಾದ ಏಟು ಕೊಡುತ್ತಿದೆ. ಇದನ್ನು ತಾವು ಪರಿವರ್ತನೆ ಮಾಡಿ ಕನಿಷ್ಠ ದೂರದೃಷ್ಟಿ ಇಟ್ಟುಕೊಂಡು ಆಲೋಚಿಸಿ ದೃಢ ನಿರ್ಣಯ ಮಾಡಬೇಕಾಗುತ್ತದೆ. ಬಹುಶ: ನಾವು ಇವತ್ತು ಡಾ: ಮನಮೋಹನಸಿಂಗ್‌ರವರನ್ನು ಜ್ಞಾಪಿಸಿಕೊಳ್ಳಬೇಕು. ಭಾರತದ ಭವಿಷ್ಯದ ದೃಷ್ಟಿ ಇಟ್ಟುಕೊಂಡು ಕಲ್ಲಿದ್ದಲು ಸಾಕಾಗುವುದಿಲ್ಲವೆಂದು ಯುರೇನಿಯಂ ಮುಖಾಂತರ power ಬೇಕೆನ್ನುವ ಸ್ಪಷ್ಟವಾದ ಉದ್ದೇಶದಿಂದ ತಮ್ಮ ಅಧಿಕಾರ ಹೋಗುತ್ತದೆಂದು ಇದ್ದರೂ ಕೂಡ ಚಿಂತಿಸದೆ ದೇಶಕ್ಕಾಗಿ ಅಣು ಒಪ್ಪಂದ-1, 2, 3 ಗೆ ಸಹಿ ಮಾಡುವ ಯೋಚನೆ ಮಾಡಿದ್ದಾರೆ. ಅಂಥ ದೃಢ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಯವರು ಹಾಕಿಕೊಡಬೇಕು. ಅಧಿಕಾರ ಹೋದರೂ ಚಿಂತೆ ಇಲ್ಲ. ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಈ ರಾಜ್ಯಕ್ಕೆ ತರುವ ಯೋಜನೆ ಹಾಕಿಕೊಳ್ಳಬೇಕು. ನಮ್ಮ ಕಡೆಯಿಂದಲೂ ಬೇಕಾದಷ್ಟು ಸಲಹೆ ಸೂಚನೆಗಳಿವೆ. ಬಹಳಷ್ಟು ಬುದ್ಧಿಜೀವಿಗಳು, ವಿಜ್ಞಾನಿಗಳು ಇದ್ದಾರೆ. ಇದನ್ನೆಲ್ಲ ನೋಡಿ ಕಲಿಯುವಂಥ ಯೋಜನೆಯನ್ನು ಹಮ್ಮಿಕೊಳ್ಳಬೇಕು. ಕೆಲವು ರಾಜ್ಯಗಳಲ್ಲಿ, ದೇಶಗಳಲ್ಲಿ solar system ಮೂಲಕ

4.00 ಪಿ.ಎಂ.

ಉತ್ಪಾದನೆಯಾದ ಕರೆಂಟ್ ಅನ್ನು ಬೆಳಗ್ಗೆ ಮತ್ತು ಸಂಜೆ ಮಾತ್ರ ಉಪಯೋಗಿಸುತ್ತಿದ್ದೇವೆ. ಮಧ್ಯದಲ್ಲಿ ಅದು waste ಆಗುತ್ತಿದೆ. ಯಾವುದಾದರೂ ಒಂದು technology ಮೂಲಕ ಅದಕ್ಕೊಂದು switch ಅಳವಡಿಸಿದರೆ ಆ solar current state grid ಗೆ ಹೋಗುತ್ತದೆ. ಕಡಿಮೆ ದರದಲ್ಲಿ state ಗೂ current ಸಿಗುತ್ತದೆ. ನನ್ನ ಮನೆಯಿಂದ state grid ಗೆ ಹೋದ ಕರೆಂಟ್‌ಗೆ nominal fee ಅನ್ನು ಸರ್ಕಾರ ಕೊಟ್ಟರೆ ಹಲವಾರು ಜನರಿಗೆ ಹಣವೂ ಸಿಗುತ್ತದೆ. ಇಂಥ ಹಲವಾರು technology ಇದೆ. ಬೇಕಾದದ್ದು ಪುರುಸೊತ್ತು ಮಾತ್ರ. ಬಹುಶ: ದಕ್ಷಿಣ ಕನ್ನಡ ಜಿಲ್ಲೆಗೆ MESCOM ಬರುತ್ತದೆ. ಅದರ ವ್ಯಾಪ್ತಿಗೆ ಶಿವಮೊಗ್ಗ, ಉಡುಪಿ, ಮಂಗಳೂರು, ಚಿಕ್ಕಮಗಳೂರು ಬರುತ್ತದೆ. ನನಗೆ ಬಹಳ ಸಂತೋಷವಾಗಿತ್ತು. ಆದರೆ, ಈಗ ನೋಡುವಾಗ ನನಗೆ ತಲೆ ಬಿಸಿಯಾಗಿದೆ. ನಮ್ಮ MESCOM ಗೆ 600 MW ವಿದ್ಯುತ್ ಅಗತ್ಯವಾದರೆ ಇವತ್ತು ನಮಗೆ 409 MW ಪೂರೈಕೆಯಾಗುತ್ತಿತ್ತು, ಈಗ 500 ರಿಂದ 550 MW ಪೂರೈಕೆಯಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಕೈಗಾರಿಕಾ ಕ್ಷೇತ್ರವಾಗಿದೆ, port ಇದೆ, ಆರ್ಥಿಕವಾಗಿ ಬಹಳಷ್ಟು ಅಭಿವೃದ್ಧಿ ಹೊಂದಿದ ಪ್ರದೇಶವಾಗಿದೆ. ಶಿವಮೊಗ್ಗಕ್ಕೆ ಜಾಸ್ತಿ ಕರೆಂಟ್ ಕೊಟ್ಟು ನಮಗೆ ಕಡಿಮೆ ಮಾಡಿದ್ದಾರೆ. ನಮಗೆ ಸಂಖ್ಯೆ ಜಾಸ್ತಿ ಇರಬಹುದು. Ratio ನಮಗೆ ಕಡಿಮೆಯಾಗುತ್ತದೆ. ಈ ತಾರತಮ್ಯವಾಗಬಾರದು. ಅಭಿವೃದ್ಧಿ ಇರುವ ಕಡೆ ಹೆಚ್ಚು ಒತ್ತು ಕೊಡಬೇಕು. ಇದರ ಬಗ್ಗೆ ಸರ್ಕಾರ ವಿಶೇಷವಾದ ಆಲೋಚನೆ ಮಾಡಬೇಕು. ವಿದ್ಯುತ್ ಅಭಾವವನ್ನು ಬಗೆಹರಿಸಲು ಹಲವಾರು ಕ್ರಾಂತಿಕಾರಿ ಹೊಸ ಹೊಸ ಯೋಜನೆಗಳನ್ನು ತರಬೇಕೆಂದು ಕೋರುತ್ತಾ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ನಿಯಮ 69ರ ಮೇಲಿನ ವಿದ್ಯುತ್ ಅಭಾವದ ಕುರಿತ ಚರ್ಚೆಯನ್ನು ಮುಕ್ತಾಯಗೊಳಿಸಲಾಗಿದೆ. ಈಗ ಮುಖ್ಯಮಂತ್ರಿಯವರಿಂದ ಉತ್ತರ. ಆಮೇಲೆ ಸದಸ್ಯರು clarification ಕೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ರಾಜ್ಯದ ವಿದ್ಯುತ್ ಪರಿಸ್ಥಿತಿ ಬಗ್ಗೆ ಸದನದಲ್ಲಿ ಬಹಳ ಆಳವಾದ ಚರ್ಚೆಯಾಗಿದೆ. ವಿರೋಧ ಪಕ್ಷದ ನಾಯಕರೂ ಸೇರಿದಂತೆ ಇತರೆ ಸದಸ್ಯರು ವಿದ್ಯುತ್ ಉತ್ಪಾದನೆ ಸರಬರಾಜು, ಕೊರತೆ ಬಗ್ಗೆ ಮತ್ತಿತರ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದೀರಿ. ಉತ್ತಮವಾದ ಸಲಹೆಗಳನ್ನೂ ಕೊಟ್ಟಿದ್ದೀರಿ. ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸವಿಸ್ತಾರವಾಗಿ ಇವತ್ತಿನ ವಿದ್ಯುತ್ ಪರಿಸ್ಥಿತಿ ಬಗ್ಗೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮದ ಬಗ್ಗೆ ಅನೇಕ ಅಮೂಲ್ಯ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ನಿರಂತರವಾಗಿ ಹೆಚ್ಚಾಗುತ್ತಾ ಹೋಗುತ್ತಿದೆ. 2004–05ರಿಂದ 2009–10ರವರೆಗೆ ವಾರ್ಷಿಕ ಬೇಡಿಕೆಯಲ್ಲಿ ಶೇಕಡ 35.59ರಷ್ಟು ಹೆಚ್ಚಳವಾಗಿದೆ. 2008–09ರಲ್ಲಿ ಬೇಡಿಕೆ ಮತ್ತು ಲಭ್ಯತೆಗಳ ಅಂತರ ಶೇಕಡ 10.45ರಷ್ಟಿದ್ದರೆ 2009–10ರಲ್ಲಿ ಶೇಕಡ 12.68ಕ್ಕೆ ಹೆಚ್ಚಿದೆ. ನಾನು ಅಧಿಕಾರ ವಹಿಸಿಕೊಂಡ ದಿನಾಂಕ: 30.5.2008. RTPS ನಲ್ಲಿ ಕಲ್ಲಿದ್ದಲು ದಾಸ್ತಾನು ಕೇವಲ 2 ದಿನಗಳಿಗೆ ಸಾಕಾಗುವಷ್ಟು ಇತ್ತು. ಆದ್ದರಿಂದ, ವಿದೇಶದಿಂದ ಆಮದು ಮಾಡಿಕೊಳ್ಳುವುದಕ್ಕೆ ನಮ್ಮ ಸರ್ಕಾರ ನಿರ್ಧಾರ ಮಾಡಿತು. ಇವತ್ತು ನಾನು ಹೆಮ್ಮೆಯಿಂದ ಹೇಳುತ್ತೇನೆ. We have got sufficient coal. ಕಲ್ಲಿದ್ದಲು ದಾಸ್ತಾನು ಇದೆ. ಖಾಸಗಿ ಕಂಪನಿಗಳೊಂದಿಗೆ 34 ದಶಲಕ್ಷ ಯೂನಿಟ್ ಉತ್ಪಾದಿಸಲು 1990 ರಿಂದ 2006ರವರೆಗೆ ಆಗ ಇದ್ದ ಸರ್ಕಾರವು ಒಡಂಬಡಿಕೆ ಮಾಡಿಕೊಂಡಿದ್ದರೂ ನಾನು ನೊಂದು ಒಂದು ಮಾತು ಹೇಳುತ್ತೇನೆ, 15 ವರ್ಷಗಳ ಸುದೀರ್ಘ ಅವಧಿಯಲ್ಲಿ ಒಂದೆರಡು ಬಿಟ್ಟರೆ ಉಳಿದ ಯೋಜನೆಗಳು ಜಾರಿಗೆ ಬರಲೇ ಇಲ್ಲ, ಆ ದಿಕ್ಕಿನಲ್ಲಿ ಯಾವುದೇ ಪ್ರಯತ್ನ ಆಗಲಿಲ್ಲ. ಮೊದಲ ಬಾರಿಗೆ ನಮ್ಮ ಸರ್ಕಾರ KPCL ಗೆ ಕಳೆದ ವರ್ಷ 500 ಕೋಟಿ ರೂಪಾಯಿಗಳ ಶೇರು ಬಂಡವಾಳ ಒದಗಿಸಿತ್ತು. ಹೊಸ ಯೋಜನೆಗಳಿಗೆ ಸುಮಾರು 15 ವರ್ಷಗಳ ಕಾಲ ಹಿಂದಿನ ಸರ್ಕಾರಗಳಲ್ಲಿ ಈ KPC ಗೆ ಹಣಕಾಸಿನ ಸಹಾಯ ದೊರೆತಿರಲಿಲ್ಲ ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ನಾವು

ಅಧಿಕಾರಕ್ಕೆ ಬಂದ ನಂತರ ಕಳೆದ ವರ್ಷ 2008-09ರ ಸಾಲಿನಲ್ಲಿ 1252 ಮೆಗಾವ್ಯಾಟ್ ವಿದ್ಯುತ್ ಅನ್ನು ಹೊಸದಾಗಿ ಜಾಲಕ್ಕೆ ಸೇರ್ಪಡೆ ಮಾಡಿದ್ದೇವೆ. ಇದು ಯಾವುದೇ ಒಂದು ವರ್ಷದಲ್ಲಿ ಸೇರ್ಪಡೆಯಾದ ಅತೀ ಹೆಚ್ಚಿನ ವಿದ್ಯುತ್ ಆಗಿರುತ್ತದೆ. ಇದೊಂದು ದಾಖಲೆಯಾಗಿದೆ. ಮುಂದಿನ ವರ್ಷ 2009-10ರಲ್ಲಿ 1300 ಮೆಗಾವ್ಯಾಟ್ ವಿದ್ಯುತ್ ಅನ್ನು ಹೊಸದಾಗಿ ಜಾಲಕ್ಕೆ ಸೇರಿಸುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಬಳ್ಳಾರಿ ಮತ್ತು ಯರಮರಸ್ ಯೋಜನೆಯೂ ಸಹ ಇದರಲ್ಲಿ ಸೇರಿದೆ. ರಾಜ್ಯದ ಹೊರಗಡೆ ಛತ್ತೀಸ್‌ಗಡದಲ್ಲಿ ಮೊದಲ ಬಾರಿಗೆ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದೂ ಸಹ ಒಂದು ದಾಖಲೆ. ತಲಾ 800 ಮೆಗಾವ್ಯಾಟ್ ಸಾಮರ್ಥ್ಯದ 2 ಯೋಜನೆಗಳ ಅನುಷ್ಠಾನದ ಸಂಬಂಧ KPC ಮತ್ತು L&T ನಡುವೆ ಇತ್ತೀಚೆಗಷ್ಟೆ ಒಡಂಬಡಿಕೆಯಾಗಿದೆ. ರಾಜ್ಯದಲ್ಲಿನ ವಿದ್ಯುತ್ ಕೊರತೆ ನೀಗುವುದಕ್ಕೆ ತತ್‌ಕ್ಷಣದ ಕ್ರಮವಾಗಿ ಹೊರರಾಜ್ಯಗಳಿಂದ ವಿದ್ಯುತ್ ಕೊಳ್ಳುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಫೆಬ್ರವರಿಯಲ್ಲಿ 400 ಮೆಗಾವ್ಯಾಟ್ ಮಾರ್ಚಿಯಲ್ಲಿ 1000 ಮೆಗಾವ್ಯಾಟ್ ವಿದ್ಯುತ್ ಅನ್ನು ಖರೀದಿ ಮಾಡುತ್ತಿದ್ದೇವೆ. ನಾನು ಈ ಮನೆಯಲ್ಲಿ ನಿಂತು ಜವಾಬ್ದಾರಿಯಿಂದ ಒಂದು ಭರವಸೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ನಿನ್ನೆಯಿಂದ ಅಥವಾ ಇವತ್ತಿನಿಂದ ಬೆಂಗಳೂರಿನಲ್ಲಿ 23 ಗಂಟೆ ವಿದ್ಯುತ್ ಮತ್ತು ಇತರೆ ನಗರ ಮತ್ತು ಪಟ್ಟಣಗಳಲ್ಲಿ 22 ಗಂಟೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ 6 ಗಂಟೆ 3 ಫೇಸ್‌ನಲ್ಲಿ, ಸಿಂಗಲ್ ಫೇಸ್‌ನಲ್ಲಿ 6 ಗಂಟೆ, ಹಾಗೂ ಸಂಜೆ 7 ರಿಂದ ರಾತ್ರಿ 11 ರ ತನಕ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡುವುದಕ್ಕೆ ಸಮಯವನ್ನು ನಾವು ನಿಗದಿ ಮಾಡಿದ್ದೇವೆ. ನಾನು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಒಂದೆರಡು ಗಂಟೆಗಳ ಕಾಲ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ, ಇದರಲ್ಲಿ ಯಾವುದೇ ಕೊರತೆಯಾಗದಂತೆ ಕಟ್ಟೆಚ್ಚರ ವಹಿಸಬೇಕು ಅಗತ್ಯವಿದ್ದರೆ ಇನ್ನೂ 200, 300, 400 ಮೆ.ವ್ಯಾ. ವಿದ್ಯುತ್ ಖರೀದಿಸಿದರೂ ಪರವಾಗಿಲ್ಲ. ಈ ಸಮಯದಲ್ಲಾದರೂ ವಿದ್ಯುತ್ ಕೊಡಲೇಬೇಕೆನ್ನುವ ತೀರ್ಮಾನಕ್ಕೆ ನಾವು ಬಂದಿದ್ದೇವೆ. ನಿರಂತರ ಜ್ಯೋತಿ ಯೋಜನೆ ಏನು ಇದೆ,

ಇದು ಮೊದಲ ಬಾರಿಗೆ ಪ್ರತ್ಯೇಕ ಫೀಡರ್‌ಗಳಲ್ಲಿ ಕೃಷಿ, ಕೈಗಾರಿಕೆ, ಮನೆ ಬಳಕೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ಸರಬರಾಜಿನಲ್ಲಿ ಗುಣಮಟ್ಟ ಮತ್ತು ಖಾತ್ರಿಯನ್ನು ಕಾಪಾಡಿಕೊಳ್ಳುವುದಕ್ಕೆ ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದೇವೆ. ಈಗಾಗಲೇ ಮಾಲೂರು, ಬೈಲಹೊಂಗಲ, ಮಳವಳ್ಳಿಯಲ್ಲಿ ಈ ಯೋಜನೆ ಒಂದು ರೂಪಕ್ಕೆ ಬಂದಿದೆ. ಸಧ್ಯದಲ್ಲಿ ಶಿಗ್ಗಾಂವಿ, ಕುಷ್ಟಗಿ, ಸವಣೂರು ತಾಲ್ಲೂಕುಗಳಲ್ಲಿ ಪೂರ್ಣಗೊಳ್ಳುತ್ತಿದೆ. 2010–11 ರೊಳಗಾಗಿ 70 ತಾಲ್ಲೂಕುಗಳಲ್ಲಿ ಮತ್ತು 2011–12 ರಲ್ಲಿ ಉಳಿದ 56 ತಾಲ್ಲೂಕುಗಳಲ್ಲಿ ಈ ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ನಾವು ಪ್ರಮಾಣೀಕವಾಗಿ ಪ್ರಯತ್ನಿಸುತ್ತಿದ್ದೇವೆ. ಮತ್ತೆ ನಾವೇನು ಈ power purchase ಮಾಡುತ್ತಿದ್ದೇವೆ cost of power purchase during February and March 2010, around Rs.400 crores ಖರೀದಿಗಾಗಿ ಬೇಕಾಗಬಹುದು. ಈ ಕೆಲಸವನ್ನು ನಾವು ಮಾಡುತ್ತಿದ್ದೇವೆ. ನಾನು ಹೇಳಿದೆ, ಈ ವಿದ್ಯುತ್ ಬೇಡಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ, ಆದರೆ ಬೇಡಿಕೆಗನುಗುಣವಾಗಿ ಉತ್ಪಾದನೆ ಮಾಡುವುದಕ್ಕೆ ಆಗುತ್ತಿಲ್ಲ. ಕಳೆದ 5 ವರ್ಷದ ಉತ್ಪಾದನೆ, ಬೇಡಿಕೆ ಮತ್ತು ಕೊರತೆ ಇವುಗಳನ್ನು ಪರಿಶೀಲಿಸಿದರೆ ವಿಷಯದ ಗಂಭೀರತೆ ತಮಗೆ ಅರ್ಥವಾಗುತ್ತದೆ. 2004–05, 2005–06, 2006–07, 2007–08ರಲ್ಲಿ ಮಾನ್ಯ ಹೆಚ್.ಡಿ.ರೇವಣ್ಣನವರು ಇಂಧನ ಇಲಾಖೆಯ ಸಚಿವರಾಗಿದ್ದರು. 2004–05 ರಲ್ಲಿ ಬೇಡಿಕೆ 37,625 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 33,110 ದಶ ಲಕ್ಷ ಯೂನಿಟ್ ಇತ್ತು. ಅಂದರೆ ಶೇಕಡ 14 ರಷ್ಟು ಕೊರತೆಯಾಯಿತು. 2005–06 ರಲ್ಲಿ ಬೇಡಿಕೆ 39,270 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 34,258 ದಶ ಲಕ್ಷ ಯೂನಿಟ್ ಇತ್ತು. ಅಂದರೆ ಶೇಕಡ 12.76 ಕೊರತೆಯಾಯಿತು. 2006–07 ರಲ್ಲಿ ಬೇಡಿಕೆ 45,160 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 40,708 ದಶ ಲಕ್ಷ ಯೂನಿಟ್ ಇತ್ತು. ಅಂದರೆ ಶೇಕಡ 9.86 ಕೊರತೆಯಾಯಿತು. 2007–08 ರಲ್ಲಿ ಬೇಡಿಕೆ 46,339 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 40,121 ದಶ ಲಕ್ಷ

ಯೂನಿಟ್ ಇತ್ತು. ಅಂದರೆ ಶೇಕಡ 13.42 ಕೊರತೆಯಾಯಿತು. 2008–09 ರಲ್ಲಿ ಸನ್ಮಾನ್ಯ ಈಶ್ವರಪ್ಪನವರು ಇದ್ದಾಗ ಬೇಡಿಕೆ 47,124 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 42,199 ದಶ ಲಕ್ಷ ಯೂನಿಟ್ ಇತ್ತು. ಅಂದರೆ ಶೇಕಡ 10.45 ಕೊರತೆಯಾಯಿತು. 2009–10ರಲ್ಲಿ ಬೇಡಿಕೆ 51,019 ದಶ ಲಕ್ಷ ಯೂನಿಟ್ ಇದ್ದರೆ ಲಭ್ಯತೆ 44,549 ದಶ ಲಕ್ಷ ಯೂನಿಟ್ ಇತ್ತು. ಅಂದರೆ ಶೇಕಡ 12.68 ಕೊರತೆಯಾಯಿತು. ಅಂದರೆ ಇದು ಅವತ್ತಿನಿಂದ ಇವತ್ತಿನವರೆಗೆ ಇರುವ ತುಲನಾತ್ಮಕವಾದ ಪಟ್ಟಿಯನ್ನು ನೋಡಿದಾಗ 2004–05 ರಿಂದ 2009–10 ರವರೆಗೆ ವಾರ್ಷಿಕ ಬೇಡಿಕೆಯಲ್ಲಿ ಶೇಕಡ 35.59 ರಷ್ಟು ಹೆಚ್ಚಳವಾಗಿರುವುದು ನಿಚ್ಚಳವಾಗಿ ಕಾಣುತ್ತದೆ. 2008–09 ರಲ್ಲಿ ಬೇಡಿಕೆ ಮತ್ತು ಲಭ್ಯತೆಗಳ ಅಂತರ ಶೇಕಡ 10.45 ರಷ್ಟು ಇದ್ದರೆ 2009–10 ರಲ್ಲಿ ಇದು ಶೇಕಡ 12.68 ರಷ್ಟು ಹೆಚ್ಚಳವಾಯಿತು. ಅಂದರೆ ಬೇಡಿಕೆ ಅಷ್ಟೊಂದು ಜಾಸ್ತಿಯಾಯಿತೆಂದು ಅರ್ಥ. ಕೇಂದ್ರ ಗ್ರಿಡ್‌ನಿಂದ ರಾಜ್ಯಕ್ಕೆ ಕಡಿಮೆ ವಿದ್ಯುತ್ ಬರುತ್ತಿದೆ. ಕೇಂದ್ರದ ಗ್ರಿಡ್‌ನಿಂದ ರಾಜ್ಯಕ್ಕೆ ನೀಡಲಾಗುತ್ತಿರುವ ವಿದ್ಯುತ್ ಪಾಲಿನ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಇತರರು ಪ್ರಸ್ತಾಪಿಸಿದ್ದಾರೆ. ದುರಾದೃಷ್ಟವಶಾತ್ ಅಂಕಿಅಂಶಗಳ ಪ್ರಕಾರ ಕೇಂದ್ರದಿಂದ ಸ್ವೀಕರಿಸಲಾಗತಕ್ಕಂಥ ವಿದ್ಯುತ್ ಸರಬರಾಜಿನ ಪ್ರಮಾಣದಲ್ಲಿ ನಮ್ಮ ವಾಸ್ತವಿಕ ಸ್ಥಿತಿಗೆ ಬಹಳ ವ್ಯತಿರಿಕ್ತವಾಗಿದೆ. ಕೇಂದ್ರ ಗ್ರಿಡ್‌ನಿಂದ 2007–08ನೇ ಸಾಲಿನಲ್ಲಿ ಜನವರಿವರೆಗೆ 8,645 ಮಿಲಿಯನ್ ಯೂನಿಟ್ ಪಡೆಯಲಾಗಿದೆ. ಇದು 2008–09ರಲ್ಲಿ 7,981 ಮಿಲಿಯನ್ ಯೂನಿಟ್. ಅಂದರೆ ಇಳಿಮುಖವಾಗಿದೆ. ನಾನು ಕೇಂದ್ರದ ಗ್ರಿಡ್‌ನಿಂದ ರಾಜ್ಯಕ್ಕೆ ಕಡಿಮೆ ವಿದ್ಯುತ್ ಬರುತ್ತಿದೆ ಎನ್ನುವುದರ ಬಗ್ಗೆ ಭಾರತ ಸರ್ಕಾರಕ್ಕೆ ಅನೇಕ ಬಾರಿ ಪತ್ರ ಬರೆಯುವುದರ ಜೊತೆಗೆ ಅನೇಕ ಬಾರಿ ಭೇಟಿ ಮಾಡಿ ಹೇಳಿದ್ದರೂ ಏನೂ ಪ್ರಯೋಜನವಾಗುತ್ತಿಲ್ಲ. KPCL ನಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಕಳೆದ ಆರ್ಥಿಕ ವರ್ಷದಲ್ಲಿ ವಿದ್ಯುತ್ ಖರೀದಿಸುವ ಮೂಲಕ ವಿದ್ಯುತ್ ಕೊರತೆ ನೀಗಿಸುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ದುರಾದೃಷ್ಟವಶಾತ್ ಈ ವರ್ಷ ಕೂಡ

ಅಂದರೆ 2009–10 ರಲ್ಲಿ 8,631 ಮಿಲಿಯನ್ ಯೂನಿಟ್ ಮಾತ್ರ ಸ್ವೀಕೃತವಾಗಿದೆ. ಇದು 2007–08 ರಲ್ಲಿ ಸ್ವೀಕರಿಸಲಾದ ವಿದ್ಯುತ್‌ಗಿಂತ ಬಹಳಷ್ಟು ಕಡಿಮೆ ಇದೆ ಎನ್ನುವ ಸಂಗತಿಯನ್ನು ತಮಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಕೇಂದ್ರದ ವಿದ್ಯುತ್ ಜಾಲದಿಂದ ನ್ಯಾಯಯುತವಾದ ಪಾಲು ಕರ್ನಾಟಕಕ್ಕೆ ದೊರೆತಿಲ್ಲ ಎಂಬುವುದಕ್ಕೆ ಈ ಅಂಕಿ–ಅಂಶಗಳು ಸ್ಪಷ್ಟವಾಗಿ ಕಾಣುತ್ತವೆ. ಹಾಗಾದರೆ ಈ ವಿದ್ಯುತ್ ಕೊರತೆಗೆ ಕಾರಣ ಏನು? ರಾಜ್ಯದಲ್ಲಿ ಪ್ರಸ್ತುತ ಉಲ್ಬಣಿಸಿರುವ ತೀವ್ರ ವಿದ್ಯುತ್ ಅಭಾವದ ಪರಿಸ್ಥಿತಿಗೆ ಕಾರಣ ನನ್ನ ಸರ್ಕಾರ ಅಲ್ಲ. ನಾನು ಬಂದು 20–21 ತಿಂಗಳಾಯಿತು ಅಷ್ಟೆ. ಹಿಂದಿನ ಸರ್ಕಾರಗಳು ನನಗೆ ಬಿಟ್ಟು ಹೋಗಿರುವ ಬಳುವಳಿ. ನಾನು ಹೇಳಿದೆ, ನಾವು ಅಧಿಕಾರ ವಹಿಸಿಕೊಂಡ ದಿನವೇ ರಾಜ್ಯದಲ್ಲಿ ಅತ್ಯಂತ ಗಂಭೀರ ಸ್ವರೂಪದ ವಿದ್ಯುತ್ ಅಭಾವ ಪರಿಸ್ಥಿತಿ ಇತ್ತು. ಆ ಸಂದರ್ಭದಲ್ಲಿ ನಾನು ಅಧಿಕಾರವನ್ನು ಸ್ವೀಕರಿಸಿದೆ. ಇದನ್ನು ಮನಗಂಡು ನಮ್ಮ ಸರ್ಕಾರ ತಕ್ಷಣವೇ ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಿ ವಿದ್ಯುತ್ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ಶೀಘ್ರ ಮತ್ತು ಪರಿಣಾಮಕಾರಿಯಾದಂಥ ಕ್ರಮ ಕೈಗೊಳ್ಳುವಂಥ ಪ್ರಯತ್ನ ನಾವು ಮಾಡಿದೆವು. ಇದರ ಒಂದು ಭಾಗವಾಗಿ ದೊಡ್ಡ ಪ್ರಮಾಣದಲ್ಲಿ ಹಣಕಾಸಿನ ಅಭಾವ ಇದ್ದಾಗಲೂ ಸಹ ಸುಮಾರು 2,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿದ್ಯುತ್ ಅನ್ನು ದೇಶದ ಬೇರೆ ಬೇರೆ ರಾಜ್ಯಗಳಿಂದ ಕೊಂಡುಕೊಂಡು ಸರಬರಾಜು ಮಾಡಿ ವಿದ್ಯುತ್‌ನ್ನು ನೀಡುವಂಥ ಪ್ರಯತ್ನ ನಮ್ಮ ಸರ್ಕಾರ ಕಳೆದ ವರ್ಷ ಮಾಡಿತು. ವಿದ್ಯುತ್ ಉತ್ಪಾದನೆ 2007–08 ರಲ್ಲಿ KPC ಮತ್ತು ಕೇಂದ್ರ ಘಟಕಗಳಿಂದ 42,934 ಮೆ.ವ್ಯಾ. ಇದ್ದರೆ 2008–09 ರಲ್ಲಿ KPC ಮತ್ತು ಕೇಂದ್ರ ಘಟಕಗಳಿಂದ 42,122 ಮೆ.ವ್ಯಾ., 2008–09 ರಲ್ಲಿ ಕಡಿಮೆ ಉತ್ಪಾದನೆ 812 ಮೆ.ವ್ಯಾ., 2008–09 ರಲ್ಲಿ ಬೇಡಿಕೆ ಹೆಚ್ಚಳವಾಗಿ 1,188 ಮೆ.ವ್ಯಾ., ಒಟ್ಟು ಕೊರತೆ 2,000 ಮೆ.ವ್ಯಾ. ಆಯಿತು. ಈ ಕೊರತೆ ತುಂಬುವುದಕ್ಕೆ ಬಾಹ್ಯ ಮೂಲಗಳಿಂದ ವಿದ್ಯುತ್‌ನ್ನು ಖರೀದಿಸಲಾಯಿತು. KERC ಕೂಡ ಈ ಕೊರತೆಯನ್ನು ಪರಿಗಣಿಸಿ ಈ ಬಾಹ್ಯ ಮೂಲಗಳಿಂದ ವಿದ್ಯುತ್

ಖರೀದಿಸಿರುವುದನ್ನು ಒಪ್ಪಿದ್ದು ಈ ವೆಚ್ಚವನ್ನು ವಿತರಣಾ ಕಂಪನಿಗಳ ಒಟ್ಟು ವೆಚ್ಚಕ್ಕೆ ಸೇರಿಸುವುದಕ್ಕೆ ಅನುಮೋದನೆಯನ್ನೂ ಕೂಡ ಕೊಟ್ಟಿದ್ದಾರೆ. ವಿದ್ಯುತ್ ಜಾಲಕ್ಕೆ ಕಳೆದ ವರ್ಷ ಸೇರ್ಪಡೆ, ಅವಶ್ಯಕವಾದಂಥ ಹಣವನ್ನು ಒದಗಿಸುವುದರ ಜೊತೆಗೆ ಭೌತಿಕ ಕೆಲಸಗಳ ಅನುಷ್ಠಾನವನ್ನು ತೀವ್ರಗೊಳಿಸುವ ಮೂಲಕ ನಮ್ಮ ಸರ್ಕಾರ ಹಿಂದಿನ ಎಲ್ಲಾ ವರ್ಷಗಳಿಗಿಂತ ಹೆಚ್ಚಾಗಿ 2008-09 ರಲ್ಲಿ, ನಾನು ಹೇಳಿದಂತೆ 1,252 ಮೆ.ವ್ಯಾ. ವಿದ್ಯುತ್‌ನ್ನು ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಯಿತು. ವರಾಹಿ ಪ್ರಾಜೆಕ್ಟ್‌ನಿಂದ 230 ಮೆ.ವ್ಯಾ. ಮತ್ತು ಬಳ್ಳಾರಿ ಸ್ಥಾವರದಿಂದ 500 ಮೆ.ವ್ಯಾ. ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ 522 ಮೆ.ವ್ಯಾ. ಇದರಲ್ಲಿ ಸೇರಿದೆ. ಇದು ಯಾವುದೇ ಒಂದು ವರ್ಷದಲ್ಲಿ ಸ್ಥಾಪಿತ ಸಾಮರ್ಥ್ಯಕ್ಕೆ ಸೇರಿಸಲಾದ ಅತ್ಯಂತ ಹೆಚ್ಚಿನ ಪ್ರಮಾಣದ ವಿದ್ಯುತ್ ಇದಾಗಿದೆ ಎಂದು ಹೇಳುವುದಕ್ಕೆ ನಾನು ಅತ್ಯಂತ ಸಂತೋಷ ಪಡುತ್ತೇನೆ. ಇದಲ್ಲದೆ ಈ ವರ್ಷ ಅಂದರೆ, 2009-10ರಲ್ಲಿ ಒಟ್ಟು 700 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಿದ್ದು, ಇದರಲ್ಲಿ ರಾಯಚೂರಿನ 8ನೇ ಘಟಕದಲ್ಲಿ 250 ಮೆ.ವ್ಯಾ., ನವೀಕರಿಸಬಹುದಾದ ಇಂಧನ ಮೂಲಗಳಿಂದ 450 ಮೆ.ವ್ಯಾ. ಇದರಲ್ಲಿ ಸೇರಿದೆ. ಇದರ ಜೊತೆಗೆ ಬಹಳ ಪ್ರಮುಖವಾಗಿ ಮುಂದಿನ ನಾಲ್ಕು ತಿಂಗಳಲ್ಲಿ ಉಡುಪಿ ಪವರ್ ಕಾರ್ಪೋರೇಷನ್ ನಿಂದ 1200 ಮೆ.ವ್ಯಾ. ಉತ್ಪಾದನೆ ಕಾರ್ಯ ಪೂರ್ಣಗೊಳ್ಳುತ್ತಿದೆ. ಈಗಾಗಲೇ ಅಲ್ಲಿ ಪ್ರಯೋಗಾತ್ಮಕ ಉತ್ಪಾದನೆ ಕಾರ್ಯ ಚಾಲನೆಯಲ್ಲಿದೆ. ಈ ವರ್ಷ ಏಪ್ರಿಲ್ ಅತ್ಯಂಕ್ಕೆ 600 ಮೆ.ವ್ಯಾ. ವಿದ್ಯುತ್ ಮತ್ತು ಈ ವರ್ಷದ ಅತ್ಯಂದೊಳಗೆ ಉಳಿದ 600 ಮೆ.ವ್ಯಾ. ವಿದ್ಯುತ್ ಅಂದರೆ ಒಟ್ಟು 1200 ಮೆ.ವ್ಯಾ. ವಿದ್ಯುತ್ ಸಿಗುತ್ತದೆ. ಈಗಿದ್ದರೂ ಸಹ ನಮ್ಮ ಸರ್ಕಾರ ಒಂದು ಮೆ.ವ್ಯಾ. ವಿದ್ಯುತ್‌ನ್ನು ಸೇರಿಸಿಲ್ಲವೆಂದು ಪ್ರತಿಪಕ್ಷದ ನಾಯಕರು ಮತ್ತು ಇತರೇ ನಾಯಕರು ಹೇಳಿದ್ದಾರೆ. ಕಳೆದ 10 ವರ್ಷಗಳಲ್ಲಿ ಉತ್ಪದಾನೆಯ ಹೆಚ್ಚಳ ಯಾವ ರೀತಿಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ರಾಜ್ಯದ ಜನತೆಗೆ ವಾಸ್ತವಿಕ ಸ್ಥಿತಿ ಗೊತ್ತಾಗಬೇಕು. 1999-2000ರಲ್ಲಿ 621 ಮೆ.ವ್ಯಾ.

ಉತ್ಪಾದನೆ ಸಾಮರ್ಥ್ಯ, 2000-01ರಲ್ಲಿ 255 ಮೆ.ವ್ಯಾ., 2001-02ರಲ್ಲಿ 548 ಮೆ.ವ್ಯಾ., 2002-03ರಲ್ಲಿ 381 ಮೆ.ವ್ಯಾ., 2003-04ರಲ್ಲಿ 415 ಮೆ.ವ್ಯಾ., 2004-05ರಲ್ಲಿ 639 ಮೆ.ವ್ಯಾ., 2005-06ರಲ್ಲಿ 322 ಮೆ.ವ್ಯಾ., 2006-07ರಲ್ಲಿ 373 ಮೆ.ವ್ಯಾ., 2007-08ರಲ್ಲಿ 276 ಮೆ.ವ್ಯಾ., 2008-09ರಲ್ಲಿ 1,251.95 ಮೆ.ವ್ಯಾ., 2009-10ರಲ್ಲಿ 1,300 ಮೆ.ವ್ಯಾ ವಿದ್ಯುತ್ ಉತ್ಪಾದನೆ ಸಾಮರ್ಥ್ಯದಲ್ಲಿ ಹೆಚ್ಚಳವಾಗಿದೆ. ಪ್ರತಿಪಕ್ಷದ ನಾಯಕರು ಮತ್ತು ಇತರೇ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ವಿದ್ಯುತ್ ಕಳ್ಳತನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿದ್ಯುತ್ ವಿತರಣೆಯಲ್ಲಿ ದೋಷವನ್ನು ಸರಿಪಡಿಸುವುದಕ್ಕೆ ಮತ್ತು ವಿದ್ಯುತ್ ಕಳ್ಳತನವನ್ನು ನಿವಾರಿಸುವುದಕ್ಕೆ ಅತ್ಯಂತ ಪರಿಣಾಮಕಾರಿಯದ ಕ್ರಮವನ್ನು ನನ್ನ ಸರ್ಕಾರ ತೆಗೆದುಕೊಂಡಿದೆ. ಮತ್ತೆ ನನ್ನ ಅಧಿಕಾರಿಗಳು ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಅಂಕಿ-ಅಂಶಗಳ ಸಮೇತ ಹೇಳುವುದಕ್ಕೆ ಬಯಸುತ್ತೇನೆ. ಐಜಿಪಿ ಮಟ್ಟದ ಅಧಿಕಾರಿಯನ್ನು enforcement wingಗೆ ನೇಮಿಸಿ ಕಠಿಣ ಕ್ರಮಗಳನ್ನು ಕೈಗೊಂಡಿರುವ ಫಲವಾಗಿ ವಿದ್ಯುತ್ ಕಳ್ಳತನವನ್ನು ಗಣನೀಯವಾಗಿ ತಪ್ಪಿಸಿದ್ದೇವೆ. ಮತ್ತೆ 115 ಕೋಟಿ ರೂಪಾಯಿಗಳಷ್ಟು ದಂಡವನ್ನು ಸಹ ವಸೂಲ್ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರೆ, ತಾವು ದಂಡವನ್ನು ವಸೂಲ್ಮಾಡತಕ್ಕಂಥದ್ದನ್ನು ಜಾಸ್ತಿ ಮಾಡಿರುವುದರಿಂದ ಕಳ್ಳತನ ಜಾಸ್ತಿಯಾಗುತ್ತಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಯಾರು ಏನು ಬೇಕಾದರು ಕಲ್ಪನೆ ಮಾಡಿಕೊಳ್ಳಬಹುದು. ಆದರೆ, ವಿದ್ಯುತ್ ಕಳ್ಳತನ ಆಗಿರುವಂಥದ್ದನ್ನು ನಾವು ತಡೆದಿದ್ದೇವೆ. ಮತ್ತೆ 115 ಕೋಟಿ ರೂಪಾಯಿಗಳಷ್ಟು ದಂಡವನ್ನು ವಸೂಲ್ಮಾಡಿದ್ದೇವೆ. ಒಂದು ತಿಂಗಳಲ್ಲಿ ಪ್ರತಿ ವಾರ ಕಡ್ಡಾಯವಾಗಿ ಪರಿಶೀಲನೆ ಮತ್ತು ತಪಾಸಣೆ ಮಾಡಿಸುತ್ತಿದ್ದೇವೆ. ಈ ಸಾರಿ ಒಂದೇ ವರ್ಷದಲ್ಲಿ 5.8 ಲಕ್ಷ ಪ್ರಕರಣಗಳಲ್ಲಿ ತಪಾಸಣೆ ಕೈಗೊಂಡಿದ್ದೇವೆ. ಇವುಗಳಲ್ಲಿ 88 ಸಾವಿರ ಪ್ರಕರಣಗಳಲ್ಲಿ 115 ಕೋಟಿ ರೂಪಾಯಿ ದಂಡವನ್ನು ವಸೂಲ್ಮಾಡಿದ್ದೇವೆ. 2004-05ರಲ್ಲಿ ಕೈಗೊಂಡ ತಪಾಸಣೆ ಮತ್ತು 20 ಕೋಟಿ ದಂಡವನ್ನು

ವಸೂಲ್ಮಾಡಿರತಕ್ಕಂಥದಕ್ಕೆ ಹೋಲಿಸಿದಾಗ ನಮ್ಮ ಸರ್ಕಾರ ಕೈಗೊಂಡಿರುವಂಥ ಕ್ರಮದ ತೀವ್ರತೆ ಮತ್ತು ಪರಿಣಾಮ ಎಷ್ಟಿದೆ ಎಂಬುದನ್ನು ಅಂಕಿ-ಅಂಶಗಳ ಮೂಲಕ ಸದನದ ಸದಸ್ಯರು ಗಮನಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ವಿದ್ಯುತ್ ಕಳ್ಳತನ ನಿವಾರಿಸಿರುವುದರಲ್ಲಿ ನಾವು ರಾಷ್ಟ್ರದಲ್ಲಿಯೇ ಮೊದಲನೇ ಸ್ಥಾನದಲ್ಲಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ 2006-07ನೇ ಸಾಲಿನ ಬಗ್ಗೆ ಕೂಡ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮೊದಲನೇ ಸ್ಥಾನದಲ್ಲಿ ನಾವಿದ್ದೇವೆ ಮತ್ತು ಎರಡನೇ ಸ್ಥಾನದಲ್ಲಿ ಆಂಧ್ರಪ್ರದೇಶ ಇದೆ. ಇದನ್ನು ಮಾನ್ಯ ಸದಸ್ಯರು ಗಮನಿಸಿರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ರೇವಣ್ಣನವರೆ, ನಾನು ಯೀಲ್ಡ್ ಆಗಿಲ್ಲ. ಆದ್ದರಿಂದ, ತಾವು ಆನಂತರ ಮಾತನಾಡಿ. ತಾವು ಅಮೇಲೆ ಕೇಳಿ, ನಾನು ಇಲ್ಲಿಯೇ ಇರುತ್ತೇನೆ. ಸಾಯಂಕಾಲ 8 ಗಂಟೆಯವರೆಗೂ ಸಹ ಮಾತನಾಡೋಣ. ವಿದ್ಯುತ್ ಕಳ್ಳತನ ನಿವಾರಿಸುವಲ್ಲಿ ನಾವು ರಾಷ್ಟ್ರದಲ್ಲಿಯೇ ಮೊದಲನೇ ಸ್ಥಾನದಲ್ಲಿದ್ದೇವೆ. ಎರಡನೇ ಸ್ಥಾನದಲ್ಲಿ ಆಂಧ್ರಪ್ರದೇಶ ಇದೆ. ಆದ್ದರಿಂದ, ನಾವು ಸಾಧನೆ ಮಾಡಿದ್ದೇವೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಸನ್ಮಾನ್ಯ ರೇವಣ್ಣರವರೆ, ಸುಧಾರಣೆ ಬಗ್ಗೆ ಏನು ಕ್ರಮ ಕೈಗೊಂಡಿದ್ದೇವೆಂದರೆ, ಸಾಮಾನ್ಯವಾಗಿ ಮಾನ್ಯ ಸದಸ್ಯರಿಗೆಲ್ಲಾ ತಿಳಿದಿರುವಂತೆ ನಾವು ಎಷ್ಟು ಹಣವನ್ನಾದರು ಖರ್ಚು ಮಾಡಬಹುದು. ಮಾನ್ಯ ಸಿದ್ದರಾಮಯ್ಯನವರೆ, ನಾನೊಂದು ನಿರ್ಧಾರ ಮಾಡಿದ್ದೇನೆ. ಅದೇನೆಂದರೆ, ಬೇರೆಯವರು ಮಾತನಾಡಬೇಕಾದರೆ ಮಧ್ಯ ಪ್ರವೇಶ ಮಾಡಬಾರದು ಮತ್ತೆ ನಾನು ಮಾತನಾಡುವ ಸಂದರ್ಭದಲ್ಲಿ ತಾವು ಸಹಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ವಿದ್ಯುತ್ ಉತ್ಪಾದನೆ ಒಂದು ದಿವಸದಲ್ಲಿ ಆಗುವುದಿಲ್ಲವೆಂಬುದು ನನ್ನ ಸ್ನೇಹಿತರಿಗೆಲ್ಲಾ ಗೊತ್ತಿದೆ. ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದರೆ ಅದನ್ನು ಮುಗಿಸಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸುಮಾರು 48 ತಿಂಗಳು

ಅಂದರೆ 4 ವರ್ಷಗಳು ಬೇಕು. ಮತ್ತೆ ಅನಿಲ ಆಧಾರಿತ ವಿದ್ಯುತ್ ಉತ್ಪಾದನೆ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಬೇಕಾದರೆ ಕನಿಷ್ಟ 24 ತಿಂಗಳು ಅಂದರೆ 2 ವರ್ಷಗಳು ಬೇಕಾಗುತ್ತದೆ. ಇದಕ್ಕೂ ಕೂಡ ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ಮತ್ತು ಇತರೇ ಕಡೆಯಿಂದ ಅನುಮತಿಯನ್ನು ಪಡೆದು ಟೆಂಡರ್ ಪ್ರಕ್ರಿಯೆ ಅವಧಿ ಪೂರ್ಣಗೊಳಿಸಿದ ನಂತರ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಗೆ ನಾಲ್ಕು ವರ್ಷ ಮತ್ತು ಅನಿಲ ಆಧಾರಿತ ವಿದ್ಯುತ್ ಉತ್ಪಾದನೆಗೆ 2 ವರ್ಷ ಬೇಕು. ಇದಕ್ಕೆ ಇಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ಗೊತ್ತಿದ್ದರೂ ಸಹ ಹಿಂದೆ ಅಧಿಕಾರದಲ್ಲಿದ್ದಂಥ ಸರ್ಕಾರಗಳು ಮುಂದೆ 25 ರಿಂದ 50 ವರ್ಷಗಳವರೆಗೆ ರಾಜ್ಯಕ್ಕೆ ವಿದ್ಯುತ್‌ನ ಅಗತ್ಯತೆ ಏನಿದೆ ಎಂದು ಯೋಚನೆ ಮಾಡಿ ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ರೂಪಿಸಿದ್ದರೆ ಇವತ್ತು ನಾವುಗಳು ಯಾವ ಪರಿಸ್ಥಿತಿಯಲ್ಲಿ ನಿಂತಿದ್ದೇವೆಯೋ ಅ ಪರಿಸ್ಥಿತಿ ಈಗ ಇರುತ್ತಿರಲಿಲ್ಲ. ಆದರೆ, ನಮ್ಮ ಸರ್ಕಾರ ಬಂದ ಕೂಡಲೇ ನಾವು ಮಾಡಿದ ಮೊದಲನೇ ಕೆಲಸ ಏನೆಂದರೆ, ವಿಳಂಬ ಮಾಡದೆ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಹೆಚ್ಚು ಗಮನ ಕೊಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ರಾಯಚೂರು ಘಟಕದಲ್ಲಿ ಕಲ್ಲಿದ್ದಲ್ಲಿನ ಕೊರತೆ ನೀಗಿಸುವುದಕ್ಕೆ ನಾವು ಏನು ಕ್ರಮ ಕೈಗೊಂಡಿದ್ದೇವೆಂದರೆ, ನಾನು ಅಧಿಕಾರವನ್ನು ವಹಿಸಿಕೊಂಡಂಥ ದಿನ ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಕೇವಲ ಒಂದೆರಡು ದಿನಗಳಿಗೆ ಬೇಕಾಗುವಷ್ಟು ಮಾತ್ರ ಕಲ್ಲಿದ್ದಲ್ಲಿನ ದಾಸ್ತಾನು ಇತ್ತು. ಇದಕ್ಕೆ ಸಂಬಂಧಪಟ್ಟಂಥ ಅಂಕಿ-ಅಂಶಗಳು ಸಿಗುತ್ತವೆ. ತಾವು ಗಮನಿಸಬಹುದು. ಇದನ್ನು ನಾನು ಗಮನಿಸಿ ವಿದೇಶದಿಂದ ತಕ್ಷಣವೇ ಕಲ್ಲಿದ್ದಲ್ಲನ್ನು ಆಮದು ಮಾಡಿಕೊಳ್ಳುವುದಕ್ಕೆ ನಿರ್ಧಾರ ಮಾಡಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಮಗೂ ಕೂಡ ಅವಕಾಶ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಆನಂತರ ಮಾತನಾಡಲಿ, ಅದಕ್ಕೆ ನಾನು

ಉತ್ತರ ಕೊಡುತ್ತೇನೆ. This is not correct. ತಾವು ದಯಮಾಡಿ ಅವರಿಗೆ ಹೇಳಿ.

ಅಧ್ಯಕ್ಷರು : ಮಾನ್ಯ ರೇವಣ್ಣರವರೆ, ದಯಮಾಡಿ ಕುಳಿತುಕೊಳ್ಳಿ. ಅವರು ಮಾತನಾಡಿ ಮುಗಿಸಿದ ನಂತರ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಲ್ಲಿದ್ದಲ್ಲಿನ ವಿಷಯದಲ್ಲಿ ಕೋಟ್ಯಾಂತರ ರೂಪಾಯಿ ಲೂಟಿಯಾಗಿರುವ ಬಗ್ಗೆ ಪ್ರೂವ್ ಮಾಡುವುದಕ್ಕೆ ನಾನು ರೆಡಿ ಇದ್ದೇನೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಆನಂತರ ಕೇಳಿ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಹಿಂದೆ ರೂಲಿಂಗ್ ಕೊಟ್ಟಿದ್ದೀರಿ. ಆದ್ದರಿಂದ, ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಇನ್ವಾಲ್ವ್ ಆಗಿದ್ದಾರೆಂದು ಹೇಳಿದ್ದೇನೆ.

ಅಧ್ಯಕ್ಷರು : ಇದಕ್ಕೆ ಪ್ರತ್ಯೇಕವಾಗಿ ನೋಟೀಸ್ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಹೇಳಿರುವಂಥ ಅಂಕಿ-ಅಂಶಗಳಲ್ಲಿ ಏನಾದರು ಸಣ್ಣ ದೋಷ ಇದೆ ಎಂದು ನಿಮಗೆ ಅನಿಸಿದರೆ ಅದಕ್ಕೆ ತಾವು ಕ್ಲಾರಿಫಿಕೇಷನ್ ಕೇಳಬಹುದು. ನಾನು ಸಹ ದಾಖಲೆಗಳನ್ನು ತೋರಿಸುತ್ತೇನೆ. ಇಲ್ಲಿಂದ ನೇರವಾಗಿ ಕಛೇರಿಗೆ ಹೋಗಿ ಕುಳಿತುಕೊಳ್ಳೋಣ. ನಿಮಗೆ ವಿಶ್ವಾಸ ಇಲ್ಲದಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಜೊತೆಗೆ ಕರೆದುಕೊಳ್ಳುತ್ತೇನೆ. ತಾವುಗಳು ಕಛೇರಿಗೆ ಬಂದು ಈ ಅಂಕಿ-ಅಂಶಗಳು ಸರಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಿ. ಈ ಎಲ್ಲಾ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ಏನು ಸ್ವಾಮಿ. ಇದರಲ್ಲಿ ಮುಚ್ಚುಮರೆ ಮಾಡತಕ್ಕಂಥದ್ದು ಏನಿದೆ? ಅಲ್ಲಿರತಕ್ಕಂಥ ಲೆಕ್ಕವನ್ನು ತಿದ್ದುವುದಕ್ಕೆ ಅಥವಾ ಸರಿಪಡಿಸುವುದಕ್ಕೆ ಆಗುತ್ತದೆಯೇ? ಇರುವ ವಾಸ್ತವಿಕ ಸ್ಥಿತಿಯನ್ನು ನಾನು ಹೇಳಿದರೆ ನೀವೇಕೆ ಬೇಸರ ಮಾಡಿಕೊಳ್ಳುತ್ತೀರಾ? ಆಗ

ಕಲ್ಲಿದ್ದಲು ತಂದು ಮಾಡಬೇಕೆಂಬುದರ ಬಗ್ಗೆ ನಿಮಗೆ ಪುರಸೊತ್ತು ಇರಲಿಲ್ಲ. ನಾನೇ ಗಟ್ಟಿಯಾಗಿ ,ಶಾಶ್ವತವಾಗಿ ಇರುತ್ತೇನೆಂದು ತಿಳಿದುಕೊಂಡು ಕಲ್ಲಿದ್ದಲಿನ ಸಂಗ್ರಹದ ಕಡೆಗೆ ಗಮನ ಕೊಡಲಿಲ್ಲ. ಆದರೆ, ಸಂಗ್ರಹ ಮಾಡುವ ಕಡೆ ನಾವು ಗಮನ ಕೊಟ್ಟೆವು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ರೇವಣ್ಣರವರು ಹೇಳಿದ್ದನ್ನು ತಾವು ಗಮನಿಸಿದ್ದೀರೋ ಅಥವಾ ಇಲ್ಲವೋ ನನಗೆ ಗೊತ್ತಾಗಲಿಲ್ಲ. ಅವರು ನೇರವಾಗಿ ನಿಮ್ಮ ಮೇಲೇ ಆಪಾದನೆ ಮಾಡುತ್ತಿದ್ದಾರೆ. ಈ ಎಲ್ಲ ಅಕ್ರಮಕ್ಕೆ ತಾವು ನೇರವಾಗಿ ಹೊಣೆ ಇದ್ದೀರೆಂದು ಅವರು ಈಗ ತಾನೆ ಹೇಳಿದರು. ಮತ್ತೆ ದಾಖಲೆ ಸಮೇತ ಮಾಹಿತಿ ನೀಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ತೋರಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಶಿವಕುಮಾರ್‌ರವರೆ, ಒಂದು ನಿಮಿಷ ಯೀಲ್ಡ್ ಆಗಿ. ಮಾತು ಹೃದಯದಿಂದ ಬರಬೇಕು, ಮಾತು ಪಾರದರ್ಶಕವಾಗಿರಬೇಕು, ಮಾತು ಶುದ್ಧವಾಗಿರಬೇಕು, ಮಾತು ಬದುಕಿಗೆ ಬೆಳಕನ್ನು ನೀಡುವಂತಿರಬೇಕು. ಇದ್ಯಾವುದು ಅವರಿಗೆ ಗೊತ್ತಿಲ್ಲದೆ ಇರುವುದರಿಂದ ನಾವೇನು ಮಾಡಬೇಕಾಗುತ್ತದೆ? ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಮಾನ್ಯ ಜಯಚಂದ್ರರವರಿಗೆ ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೆ ಹೇಳುವುದೇನೆಂದರೆ, ಮಾನ್ಯ ರೇವಣ್ಣರವರು ಆರೋಪ ಮಾಡಿರುವ ವಿಷಯದ ಬಗ್ಗೆ ನಾನು ಕೊನೆಗೆ ಬರುತ್ತೇನೆ. ಇದರಲ್ಲಿ ಮುಚ್ಚಿಡುವಂಥದ್ದು ಏನಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೆ, ಅವರು ಪದೇ ಪದೇ ನಿಮ್ಮ ಮೇಲೆ ನೇರವಾದ ಆರೋಪವನ್ನು ಮಾಡುತ್ತಿದ್ದಾರೆ. You are involved. You are responsible. ನೀವು ಲೂಟಿ ಹೊಡೆದಿದ್ದೀರಿ ಎಂದು ಅವರು ಹೇಳುತ್ತಿದ್ದಾರೆ. You are keeping quiet ಅಂದರೆ silence amounts to consent.

4.30 ಪಿ.ಎಂ.

ಶ್ರೀ ಬಸವರಾಜ ಬೊಮ್ಮಾಯಿ : ಬಹಳ ದೊಡ್ಡ ಧ್ವನಿಯಲ್ಲಿ ಹೇಳಿದರೆ ಸುಳ್ಳು ಸತ್ಯವಾಗುವುದಿಲ್ಲ. Who is involved? ಎನ್ನುವುದಕ್ಕೆ ಬರುತ್ತಾರೆ. ಸುಳ್ಳನ್ನು 3 ಸಲ ಅಲ್ಲ 10 ಸಲ ಹೇಳಿದರು ಸತ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು involve ಆಗಿದ್ದಾರೆಂದು ಅವರು ನೇರವಾಗಿ ಆರೋಪ ಮಾಡುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಅವರು ಹೇಳಿದ್ದಕ್ಕೆ ಎನ್‌ಕ್ವಾಯರಿ ನೇಮಿಸಿದ್ದೇವೆ. ಅವರ ಕಾಲದ್ದು ನಮ್ಮ ಕಾಲದ್ದು ಸೇರಿಸಿ ಎನ್‌ಕ್ವಾಯರಿಗೆ ನೇಮಿಸಿದ್ದೇವೆ.

ಅಧ್ಯಕ್ಷರು : ಅವರು ಉತ್ತರವನ್ನು ಕೊಡುತ್ತಾರೆ. Don't interfere. ಮಧ್ಯೆದಲ್ಲಿ ಏಕೆ? ನೀವು ಆಮೇಲೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಂತಾಗ ನೀವು ಏಕೆ ಮಾತನಾಡುತ್ತೀರಾ? ದೇವರ ದಯೆಯಿಂದ ರಾಜ್ಯದ ಜನ ಎಲ್ಲವನ್ನು ಗಮನಿಸುತ್ತಿದ್ದಾರೆ. ಯಾರು ಏನು ಆರೋಪ ಮಾಡುತ್ತಾರೆ. ನಾನು ಅಧಿಕಾರಕ್ಕೆ ಬಂದ 24 ಗಂಟೆಯಲ್ಲಿಯೆ ಯಡಿಯೂರಪ್ಪ ಖುರ್ಚಿಯಿಂದ ಇಳಿಯಬೇಕೆಂದು ಸುರು ಮಾಡಿದರು ಅಲ್ಲವೆ? ಇವತ್ತು ಅವರ ಮಾತಿನಲ್ಲಿ ನನ್ನ ರಾಜೀನಾಮೆಯನ್ನೆ ಕೇಳುತ್ತಿರುವುದು. ಅಪ್ಪ ಮಕ್ಕಳು ಅದನ್ನು ಬಿಟ್ಟು ಇನ್ನು ಏನು ಮಾಡುತ್ತಾರೆ?

ಶ್ರೀ ಹೆಚ್.ಡಿ.ರೇವಣ್ಣ : ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಿಮಗೆ ನೈತಿಕತೆ ಇಲ್ಲ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಶಿವಕುಮಾರ್‌ರವರೆ ನಾನು ಬಹುಮತವನ್ನು ಕಳೆದುಕೊಂಡ ಮೇಲೆ, ಬೆಂಬಲವನ್ನು ವಾಪಸ್ಸು ತೆಗೆದುಕೊಂಡ ಮೇಲೆ ಬಿಜೆಪಿ ಸಚಿವರು ಯಾರು ಇಲ್ಲದೆ ಇದ್ದಾಗ ದಿನಾಂಕ: 5ನೇ ಅಕ್ಟೋಬರ್ 2007 ರಂದು ಬೆಳಗ್ಗೆ: 9.30 ಗಂಟೆಗೆ ಕೇವಲ 13 ಜನ

ಸಚಿವರು ಮಾತ್ರ ಸೇರಿ ಕ್ಯಾಬಿನೆಟ್ ನಿರ್ಧಾರ ಮಾಡಿ ನಮಗೆ ಖುಷಿಗೆ ಬಂದ ತೀರ್ಮಾನವನ್ನು ನಾವು ಮಾಡಿಕೊಳ್ಳಲಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸತ್ಯಹರಿಶ್ಚಂದ್ರರು ನೀವು ಅವರೋ ಅದು ಬೇರೆ ವಿಚಾರ. ಈ ನಾಡಿನ ಮುಖ್ಯಮಂತ್ರಿಗಳು ಈ ರೀತಿ ಕ್ಯಾಬಿನೆಟ್‌ನಲ್ಲಿ ನಡೆಯಿತು, 13 ಜನ ಸೇರಿ ಈ ರೀತಿ ತೀರ್ಮಾನ ಮಾಡಿದ್ದಾರೆಂದು, ಅದನ್ನು ಹಾಗೆ ಸುಮ್ಮನೆ ಗೌಪ್ಯವಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮಗೆಲ್ಲಾ ಗೊತ್ತಲ್ಲರಿ. ನಿಮಗೆ ಗೊತ್ತಿಲ್ಲದೆ ಇರುವುದು ಯಾವುದು.

(ಗೊಂದಲ)

SRI D.K.SHIVAKUMAR : Why are you keeping quiet? Come out. Otherwise we will suspect you. ಏನು ಹೇಳಬೇಕು ಅದನ್ನೆ ಹೇಳಿ. You cannot suppress. You have got all the powers to give consent for CBI enquiry. Give consent. First you please come out. ಅದು ಏನು ಹೇಳುತ್ತೀರಾ ಹೇಳಿ. ಆಮೇಲೆ decide ಮಾಡೋಣ.

ಶ್ರೀ ಸಿದ್ದರಾಮಯ್ಯ : ನೀವು ರಾಜ್ಯದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. If you are aware of it, if you are convinced that there is a clear case of corruption, you cannot keep quiet. As a Chief Minister of this State it is your primary duty to get the matter enquired into. ಅದನ್ನು ಮಾಡದೇ ಹೋದರೆ ನೀವು ರಾಜ್ಯದ ಜನರಿಗೆ ದ್ರೋಹ ಮಾಡಿದಂತಾಗುತ್ತದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ನೀವು ಇಡೀ ರಾಜ್ಯದ ಜನತೆಗೆ ತಿಳಿಸಿ ಸ್ವಾಮಿ. ಜನರಿಗೆ ಏನಾಯಿತು ಎನ್ನುವುದನ್ನು ತಿಳಿಸುವುದನ್ನು ಬಿಟ್ಟು, ಸುಮ್ಮನೆ ಪುಸ್ತಕ ತೆಗೆದು ಬಿಟ್ಟು ಗುಮ್ಮ ಗುಮ್ಮ ಎಂದು ಹೆದರಿಸಿ ಬಿಟ್ಟರೆ.

ಶ್ರೀ ಹೆಚ್.ಡಿ.ರೇವಣ್ಣ : 13 ಜನ ಮಂತ್ರಿಗಳು ಸೇರಿಕೊಂಡು ನಾವು ಏನು ಮಾಡಿದ್ದೇವೆ, ಇವರು 18 ತಿಂಗಳಲ್ಲಿ ಏನು ಮಾಡಿದ್ದಾರೆ, ದಾಖಲೆ ಸಮೇತ ಕೊಡಿ. ಒಂದು line resolution ಮಾಡುವುದಕ್ಕೆ ಮುಖ್ಯಮಂತ್ರಿಗಳು ರೆಡಿ ಇದ್ದಾರಾ ಕೇಳಿ? ಇಲ್ಲದಿದ್ದರೆ ಅವರಿಗೆ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಅರ್ಥವಾಗುತ್ತಿಲ್ಲ, ಇವರು ಇಷ್ಟು ಏಕೆ ಆಕ್ರೋಶಗೊಳ್ಳುತ್ತಿದ್ದಾರೆ. ನಾನು ಏನು ಹೇಳಿದೆ ಸ್ವಾಮಿ. ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ವಿಶ್ವಾಸವಿದ್ದವರು ಈ ಕೆಲಸವನ್ನು ಮಾಡುತ್ತಿರಲಿಲ್ಲ. ಬಹುಮತ ಕಳೆದುಕೊಂಡ ಮೇಲೆ ಕೊಟ್ಟ ಬೆಂಬಲವನ್ನು ನಾವು ವಾಪಸ್ಸು ಪಡೆದಿದ್ದೇವೆಂದು ರಾಜ್ಯಪಾಲರಿಗೆ ಹೇಳಿದ ಮೇಲೆ ವೆಂಕ, ನಾನಿ, ಸೀನಾ ಉಳಿದವರು 13 ಜನ ಕ್ಯಾಬಿನೆಟ್ ಮೀಟಿಂಗ್ ಮಾಡಿದರು ಎಂದು ನಾನು ಹೇಳಿದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ತಾವು ರಾಜ್ಯದ ಮುಖ್ಯಮಂತ್ರಿಗಳಾಗಿ ಏನು ಮಾತನಾಡುತ್ತೀರಿ?

ಶ್ರೀ ಡಿ.ಕೆ.ಶಿವಕುಮಾರ್ : ನೀವು ರಾಜ್ಯದ ಮುಖ್ಯಮಂತ್ರಿಗಳಾಗಿ you cannot suppress it.

ಶ್ರೀ ಸಿದ್ದರಾಮಯ್ಯ : ಮುಚ್ಚಿಡುವುದಕ್ಕಾಗುವುದಿಲ್ಲ. ಆಮೇಲೆ ನಿಮ್ಮ ಮೇಲೆ ಅನುಮಾನ ಶುರು ಆಗಿ ಬಿಡುತ್ತದೆ. ನಿಮ್ಮ ಮೇಲೆ ಸಂಶಯ ಬರುತ್ತದೆ.

ಅಧ್ಯಕ್ಷರು : ಒಂದು ನಿಮಿಷ, ಮಾನ್ಯ ಜಯಚಂದ್ರರವರೇ, ಉತ್ತರವನ್ನು ಮುಗಿಸಿ ಬಿಡಲಿ.

ಶ್ರೀ ಟಿ.ಬಿ.ಜಯಚಂದ್ರ : CBI ಗೆ ರೆಫರ್ ಮಾಡಿ ಎಂದು ವಾಲೆಂಟರಿಯಾಗಿ ಹೇಳುವುದರಿಂದ ಅವರನ್ನು ಮೆಚ್ಚಬೇಕಾಗುತ್ತದೆ. ಏಕೆ ಅನುಮಾನ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಒಂದು ಮಾತನ್ನು ಈ ಮನೆಯಲ್ಲಿ ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ನೀವು ಉತ್ತರವನ್ನು ಕೊಡುವುದಕ್ಕೆ ಬಿಡುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : 13 ದಿವಸ NDA Government ಇದ್ದು ವಿಶ್ವಾಸ ಮತ ಗಳಿಸದೆ 1400 ಕೋಟಿ ರೂ.ಗಳ ಪ್ರಾಜೆಕ್ಟ್ ಅನ್ನು Enron ಗೆ ಅಪ್ರೂವಲ್ ಮಾಡಿದ್ದು ಯಾರು ಎಂದು ಕೇಳಿ. ದಯಮಾಡಿ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಹೇಳಿ.

ಅಧ್ಯಕ್ಷರು : Please, ನೀವು ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಉತ್ತರವನ್ನು ಮುಗಿಸಲಿ. ಆಮೇಲೆ ಏನು ಕೇಳಬೇಕೋ ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ದಾಖಲೇ ಸಮೇತ ಕೊಡುತ್ತೇನೆ

ಅಧ್ಯಕ್ಷರು : ಆಮೇಲೆ ಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಈ ಕನ್ನಡ ನಾಡಿನ ಜನರಿಗೆ ಕೊಟ್ಟಿದ್ದೇನೆ. ಈ ಅಧಿವೇಶನದಲ್ಲಿ ನನ್ನ ಈ 21 ತಿಂಗಳ ಆಡಳಿತಾವಧಿಯಲ್ಲಿ ಮತ್ತು ಹಿಂದೆ ಅವರು ಮಾಡಿದ ಆಡಳಿತದ ಬಗ್ಗೆ ಯಾರಿಗೆ ಏನು ಮಾಹಿತಿ ಬೇಕೋ ಅದನ್ನು ಸವಿಸ್ತಾರವಾಗಿ ಈ ಮನೆಯಲ್ಲಿ ಬಿಚ್ಚಿಡುತ್ತೇನೆಂದು ಹೇಳಿದ್ದೇನೆ. ಇನ್ನು ಒಂದು ತಿಂಗಳು ಇರುತ್ತೇವೆಲ್ಲಾ?

ಶ್ರೀ ಡಿ.ಕೆ. ಶಿವಕುಮಾರ್ : No no. ಈ ಮನೆಯಲ್ಲಿ ವಿಷಯವನ್ನು ತಂದಿದ್ದೀರಿ. ನೀವು ಅದನ್ನು ಮುಗಿಸದೇ ನೀವು ಮುಂದಿನದನ್ನು ತೆಗೆದುಕೊಳ್ಳಬೇಡಿ.

ಅಧ್ಯಕ್ಷರು : ಅವರು ಉತ್ತರವನ್ನು ಮುಗಿಸಿ ಬಿಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಸಂಬಂಧಪಟ್ಟ ದಾಖಲೆಗಳು ನಿಮ್ಮ ಹತ್ತಿರ ಇದೆ ಅದನ್ನು ನಿಮ್ಮಿಂದ ತೆಗೆದುಕೊಂಡು ನಾನು ಆಮೇಲೆ ಬಹಿರಂಗ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಜನರು ಈಗ ನಿಮ್ಮನ್ನು ನೋಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲವನ್ನು ಈಗಲೇ ಹೇಳಬೇಕೆ?

ಶ್ರೀ ಡಿ.ಕೆ. ಶಿವಕುಮಾರ್ : ಹೌದು.

ಶ್ರೀ ಟಿ.ಬಿ. ಜಯಚಂದ್ರ : ಈಗ ಮಾತನಾಡಿ ಹೋಗಿ ಬಿಟ್ಟರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ರೇವಣ್ಣನವರ style.

ಶ್ರೀ ಡಿ.ಕೆ. ಶಿವಕುಮಾರ್ : ನಾನು ರೆಡಿ ಇದ್ದೇನೆ. CBI ಗೆ ಹಾಕಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ನಾನೇ CBI ಗೆ ಹಾಕಿ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದನ್ನು ಎನ್‌ಕ್ವಾಯರಿ ಮಾಡಿಸಬೇಕು. Mr.Revanna is ready. He is telling that he is agreed for CBI enquiry. Please give your consent.

ಶ್ರೀ ಹೆಚ್.ಡಿ. ರೇವಣ್ಣ : ಒಂದು ಲೈನ್ ರೆಸ್‌ಲ್ಯೂಷನ್ ಮಾಡಿ, ಚರ್ಚೆಯೆ ಬೇಡ.

ಅಧ್ಯಕ್ಷರು : ಶಿವಕುಮಾರ್ ಅವರು ಉತ್ತರವನ್ನು ಹೇಳಲಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರದು ಇವರದು ಏನಿದೆ ಹೊರಗೆ ಬರಲಿ.

ಶ್ರೀ ಸಿದ್ದರಾಮಯ್ಯ : ರಾಜ್ಯದ ಜನರಿಗೆ ಇದನ್ನು ತಿಳಿದುಕೊಳ್ಳಲಿಕ್ಕೆ ಹಕ್ಕಿದೆ. ಈ ಸದನಕ್ಕೆ ಹಕ್ಕಿದೆ, ನೀವು ಹೀಗೆ ತೋರಿಸಿ ಮುಚ್ಚಿಟ್ಟುಕೊಳ್ಳುವುದಕ್ಕಾಗುತ್ತದೆಯೇ? ತೋರಿಸಿ ಮುಚ್ಚಿಟ್ಟುಕೊಳ್ಳುವುದಕ್ಕೆ ಅದು ಹಿಪ್ನಾಟಿಸಂ ಅಲ್ಲ ?

ಅಧ್ಯಕ್ಷರು : ಮುಖ್ಯಮಂತ್ರಿಗಳು ಉತ್ತರ ಮುಗಿಸಲಿ ಆಮೇಲೆ ಕೇಳೋಣ.

ಶ್ರೀ ಸಿದ್ದರಾಮಯ್ಯ : ಅವರು ಹೇಳಲಿ. ನಮಗೆ ಏನೂ ಇಲ್ಲ. I am not interfering.

ಶ್ರೀ ಬಿ.ಎಸ್. ಯಡಿಯೂರಪ್ಪ : (ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಿದ್ದೇನೆಂಬುದರ ಬಗ್ಗೆ ಬೇಕಾದರೆ ದಾಖಲೆಯನ್ನು ತೆಗೆಸಿ ನೋಡಲಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ನೀತಿ ರೀತಿ ಇದೆ. ಬಹುಮತವನ್ನು ಕಳೆದುಕೊಂಡ ಮೇಲೆ ಒಂದು ಕ್ಷಣ ಅವರು ಕ್ಯಾಬಿನೆಟ್‌ನಲ್ಲಿ ಇರುವುದು ಇರಲಿ, ಕ್ಯಾಬಿನೆಟ್ ಮೀಟಿಂಗ್ ಮಾಡುವುದಕ್ಕೆ ಬರುತ್ತಿರಲಿಲ್ಲ. ತರಾತುರಿಯಲ್ಲಿ ಇದ್ದಂತಹ 13 ಜನರು ಸೇರಿಕೊಂಡು Cabinet decision ತೆಗೆದುಕೊಂಡಿದ್ದಾರೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಸರಿಯಲ್ಲ ಇದು ಮಾರಕವಾದಂತಹದ್ದು.

SRI SIDDARAMAIAH : What is the decision we want to know?

SRI B.S. YEDIYURAPPA : Whatever may be the decision......

SRI SIDDARAMAIAH : Whatever may be the decision you cannot take.

ಶ್ರೀ ಬಿ.ಎಸ್.ಯಡಿಯೂರಪ್ಪ : We cannot take when . . .

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಮತವನ್ನು ಕಳೆದುಕೊಂಡ ಮೇಲೆ ...

SRI SIDDARAMAIAH : What is the implication of it on the State? I am the exchequer of the State. ಅದನ್ನು ಅವರು ಹೇಳಲಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ ಅದು ಸರಿಯಿಲ್ಲ. ಅ ಡಿಸಿಷನ್‌ಗಳು ಒಳ್ಳೆಯದಲ್ಲ.

ಶ್ರೀ ಹೆಚ್.ಸಿ. ಮಹದೇವಪ್ಪ : ರಾಜ್ಯದ ಮೇಲೆ ಅದರ implications ಏನು?

ಅಧ್ಯಕ್ಷರು : ಸರಿಯಿಲ್ಲ ಎಂದು ಹೇಳಲಿಲ್ಲ. ಡಿಸಿಷನ್‌ಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ಅಷ್ಟೆ. Implication ಏನು ಎಂದು how can you imply?

SRI D.K. SHIVAKUMAR : What are the decisions? You cannot hide it.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ ಅವರು ಹಾಗೆ ಹೇಳುವುದಕ್ಕೆ ಬರುವುದಿಲ್ಲ. ರಾಜ್ಯದ ಹಿತವನ್ನು ಕಾಪಾಡಬೇಕೆಂದು ಹೇಳಿ ನಾವೆಲ್ಲಾ ಇಲ್ಲಿ ಬಂದಿದ್ದೇವೆ. 13 ರಿಂದ 14 ಜನ reduce ಆದ ಮೇಲೆ ನಾವು Cabinet Minister's ಬೆಂಬಲ ವಾಪಸ್ಸು ತೆಗೆದುಕೊಂಡ ಮೇಲೆ ಅವರು ಕ್ಯಾಬಿನೆಟ್ ಮೀಟಿಂಗ್ ಮಾಡಿ ಒಂದು ಡಿಸಿಷನ್ ತೆಗೆದುಕೊಂಡಿದ್ದಾರೆ. It is an undemocratic ಅಷ್ಟೇ ತಾನೇ ತಾವು ಹೇಳಿರುವುದು. Undemocratic ಅಂದ ತಕ್ಷಣವೇ ಅದನ್ನು ಜನರಿಗೆ ಅಷ್ಟಕ್ಕೆ ಹೇಳುವುದಾದರೆ ನೀವು ಲೂಟಿ ಹೊಡೆದಿದ್ದಾರೆಂದು ಅವರು ಆರೋಪ ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು wait ಮಾಡಿ ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಎಲ್ಲಿ ಕೊಟ್ಟಿದ್ದೀರಿ?

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : Wait ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಿದ್ದರಾಮಯ್ಯನವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿ ಇನ್ನು 10 ನಿಮಿಷಗಳು ಆಗಲಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಉತ್ತರ ಹೇಳಿ ಎಂದು ಕೇಳಿದ್ದೇವೆ ಸ್ವಾಮಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಿದ್ದರಾಮಯ್ಯನವರೆ, ಪ್ರಶ್ನೆ ಎಲ್ಲಿ ಬಂತು? ನೈತಿಕತೆ ಪ್ರಶ್ನೆ ಬಂದಾಗ ಸಿ.ಎಂ.ರವರು ಏನು

ಹೇಳಿದ್ದಾರೆಂದರೆ majority ಇಲ್ಲದೆಯೇ ಒಂದು ಕ್ಯಾಬಿನೆಟ್ ಮೀಟಿಂಗ್ ನಡೆಸುವುದು ನೈತಿಕತೆಯೇ?

ಶ್ರೀ ಸಿದ್ದರಾಮಯ್ಯ : ತಾವು democracy ಬಗ್ಗೆ ಮಾತನಾಡುತ್ತಿದ್ದೀರಾ?

ಶ್ರೀ ಎಸ್. ಸುರೇಶ್‌ಕುಮಾರ್ : ಹೌದು.

ಶ್ರೀ ಸಿದ್ದರಾಮಯ್ಯ : Parliamentary systmemನ democracyಯ ಬಗ್ಗೆ ತಾವು ಮಾತನಾಡುತ್ತಿದ್ದೀರಿ.

ಶ್ರೀ ಎಸ್. ಸುರೇಶ್‌ಕುಮಾರ್ : ಹೌದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ರೇವಣ್ಣನವರು ನಿಮ್ಮ ಮೇಲೆ ಆರೋಪವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಅವರು ದುಡ್ಡು ಹೊಡೆದಿದ್ದಾರೆ ಎಂದು ಆರೋಪವನ್ನು ಮಾಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವು ಅವರಿಗೆ ಏಕೋ Attorney General ಆಗುತ್ತಿದ್ದಿರಲ್ಲಾ?

ಶ್ರೀ ಸಿದ್ದರಾಮಯ್ಯ : ನಾನು ಯಾರಿಗೂ ಆಗುತ್ತಿಲ್ಲ. ನನಗೆ ಮಾತ್ರ ಆಗುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ yield ಆಗಬೇಕು. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಾಜಪೇಯಿಯವರು 13 ದಿನಗಳ ನಂತರ ವಿಶ್ವಾಸಮತವನ್ನು ಸದನದಲ್ಲಿ ತೆಗೆದುಕೊಳ್ಳಲಿಲ್ಲ...

ಅಧ್ಯಕ್ಷರು : ನೀವು ಆಮೇಲೆ clarification ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : 1400 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅನ್ನು enron ಗೆ ಕೊಟ್ಟರು ಅದರಲ್ಲಿ ಭ್ರಷ್ಟಾಚಾರ ಇತ್ತು ಎನ್ನುವುದರ ಬಗ್ಗೆ ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು : ನೀವುಗಳು ಮಧ್ಯದಲ್ಲಿ ಎದ್ದು ನಿಂತುಕೊಂಡು ಮಾತನಾಡಿದರೆ ಅದು ಯಾವುದು ದಾಖಲೆಗೆ ಹೋಗಬಾರದು. ತಾವು ಹೇಳುವುದು ಯಾವುದು ದಾಖಲೆಗೆ ಹೋಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಅವರಂತು ಹೇಳುವುದಿಲ್ಲ, ನೀವಾದರೂ ಕೂಡ ಏನು ಮಾಹಿತಿ ಇದೆ ಎಂದು ಹೇಳಿಬಿಡಿ.

ಅಧ್ಯಕ್ಷರು : ಯಾವುದು ಕೂಡ ದಾಖಲೆಗೆ ಹೋಗುವುದಿಲ್ಲ. ಇದು ಯಾವುದು ಕೂಡ ದಾಖಲೆಗೆ ಹೋಗಬಾರದು. ನಾನು ಯಾವುದು ದಾಖಲೆಗೆ ಹೋಗಬಾರದು ಎಂದು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುವವರೆಗೆ ಯಾವುದು ಕೂಡ ದಾಖಲೆಗೆ ಹೋಗುವುದಿಲ್ಲ. ಆಮೇಲೆ ಬೇಕಾದರೆ ತಾವು ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಿದ ಮೇಲೆ ಕೇಳಿ. ಅದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರೇವಣ್ಣನವರೆ, ಇಲ್ಲಿ ಪ್ರಶ್ನೆ ಏನು ಬಂತೆಂದರೆ, ನಾನು ಅಧಿಕಾರವನ್ನು ವಹಿಸಿಕೊಂಡ ದಿವಸ ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಕೇವಲ ಒಂದೆರಡು ದಿನಗಳಿಗೆ ಸಾಕಾಗುವಷ್ಟು ಮಾತ್ರ ಕಲ್ಲಿದ್ದಲು ದಾಸ್ತಾನು ಇತ್ತು. ಇದನ್ನು ಗಮನಿಸಿ ವಿದೇಶದಿಂದ ತಕ್ಷಣ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವಂತಹ ನಿರ್ಧಾರವನ್ನು ನಾವು ಮಾಡಿದೆವು. ಅವತ್ತು ಅಧಿಕಾರದಲ್ಲಿದ್ದವರಿಗೆ ಕಲ್ಲಿದ್ದಲನ್ನು stock ಇಟ್ಟು ವಿದ್ಯುತ್ ಉತ್ಪಾದನೆಯ ಕಡೆಗೆ ಗಮನವನ್ನು ಕೊಡಬೇಕೆಂಬ ಕಳಕಳಿ ಇದ್ದಿದ್ದರೆ ಈ ಪರಿಸ್ಥಿತಿ ಇರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ ....

ಶ್ರೀ ಬಿ.ಎಸ್. ಯಡಿಯೂರಪ್ಪ : ನೋಡಿ ಸಾರ್ ಇದೆಲ್ಲಾ too much. You cannot interfere like that. ಈ ಮಾತುಗಳನ್ನು ನಾನು ಹೇಳಿದಾಗ ಅಂಕಿಅಂಶದಲ್ಲಿ ಸತ್ಯಾಂಶ ಇಲ್ಲವೆಂದರೆ prove ಮಾಡಿ. ಎಲ್ಲಾ ದಾಖಲೆಗಳು ನಿಮ್ಮ ಹತ್ತಿರವೆ ಇದೆ. ನನ್ನ ಹತ್ತಿರ ಇರುವುದಕ್ಕಿಂತ ಹೆಚ್ಚು ದಾಖಲೆಗಳು ರೇವಣ್ಣನವರ ಹತ್ತಿರ ಇದೆ.

ಶ್ರೀ ಸಿದ್ದರಾಮಯ್ಯ : ಅದನ್ನು ನೀವು ಕೊಟ್ಟಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ ; ಅವರು ತರಿಸಿಕೊಳ್ಳುತ್ತಾರೆ ಸಾರ್. ಅವರಿಗೇನು ವ್ಯವಸ್ಥೆ ಕಡಿಮೆ ಇದೆಯೇ. ನಿಮಗೂ, ನಮಗೂ ಸಿಗದೇ ಇರುವಂತಹ ದಾಖಲೆಗಳು ಅವರಿಗೆ ಸಿಗುತ್ತದೆ. ಅವರನ್ನು ನೀವು ಏನು ಕಡಿಮೆ ಅಂದುಕೊಂಡಿದ್ದೀರಾ?

ಶ್ರೀ ಸಿದ್ದರಾಮಯ್ಯ : ನಿಮ್ಮ ಸರ್ಕಾರ ಅಷ್ಟು weak ಇದೆಯಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಇದ್ದರೂ ಅಷ್ಟೇ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಷ್ಟು weak Government. ನಿಮ್ಮದು. ನಿಮ್ಮ ಸರ್ಕಾರದಲ್ಲಿರುವಂತಹ ಅಧಿಕಾರಿಗಳ ಮೇಲೆ ನಿಮಗೆ ಹಿಡಿತವಿಲ್ಲ. ಅಧಿಕಾರಿಗಳು ಎಲ್ಲರೂ weak ಆಗಿಬಿಟ್ಟಿದ್ದಾರೆಯೆ?

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಮುಗಿಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿದ್ದರಾಮಣ್ಣನವರೆ, ಈ ನಾಡಿನ ...

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಎಲ್ಲಾ ಕಡತಗಳನ್ನು ತೆಗೆದುಕೊಂಡು ಹೋಗಿ ರಾತ್ರಿ ಹೊತ್ತು ಪರಿಶೀಲನೆ ಮಾಡುತ್ತಿದುದು ತಮಗೆ ಗೊತ್ತಾಗಲಿಲ್ಲವೇ?

ಅಧ್ಯಕ್ಷರು : ಆಯಿತು. Please.

ಶ್ರೀ ಸಿದ್ದರಾಮಯ್ಯ : ನನ್ನ ಫೈಲ್‌ಗಳನ್ನು ತೆಗೆದುಕೊಂಡು ಹೋಗಿಲ್ಲಾ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಯಾರ ಜೊತೆಗೆ ಇದ್ದರೋ ಅವರು.

ಶ್ರೀ ಸಿದ್ದರಾಮಯ್ಯ : ನಾನು ಅಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ತಾವಲ್ಲಾ ಸ್ವಾಮಿ, ನಾನು ತಮಗೆ ಹೇಳಲಿಲ್ಲ. ಇದೇನೋ ಹೊಸದು ಎಂದು ಹೇಳುತ್ತೀರಲ್ಲಾ. ಅವತ್ತು ಬಾಲಬ್ರೂಯಿ ಗೆಸ್ಟ್ ಹೌಸ್‌ಗೆ ಫೈಲ್‌ಗಳನ್ನು ಯಾರ್ಯಾರು ತರಿಸಿಕೊಂಡರು ಎಂಬುದು ಗೊತ್ತಿಲ್ಲವೇ?

ಶ್ರೀ ಸಿದ್ದರಾಮಯ್ಯ : ಈ ತರಹ ನಮ್ಮ ಕಾಲದಲ್ಲಿ ಇರಲಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಏನು ನಡೆದಿದೆ ಎಂಬುದು ತಮಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಇವೆಲ್ಲವೂ ನಿಮ್ಮ ಕಾಲದಲ್ಲಿ ಶುರುವಾಗಿದೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಅವೆಲ್ಲವೂ ನಮಗೆ ಗೊತ್ತಿದೆ.

ಅಧ್ಯಕ್ಷರು : Please.

ಶ್ರೀ ಸಿದ್ದರಾಮಯ್ಯ : ನಮ್ಮ ಕಾಲದಲ್ಲಿ ಇಲ್ಲಾ. ನಮ್ಮ ಇಲಾಖೆಯ ಫೈಲ್‌ಗಳನ್ನು ಯಾರು ಕೂಡ ನೋಡುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ಸಿದ್ದರಾಮಣ್ಣನವರೆ. ನನ್ನ ಸರ್ಕಾರ ಪಾರದರ್ಶಕವಾದಂತಹ ಸರ್ಕಾರ ಯಾರು ಯಾವ ದಾಖಲೆಯನ್ನು ಬೇಕಾದರೂ ಕೇಳಿದ 24 ಗಂಟೆಗಳಲ್ಲಿ ನಾನು ಕಳುಹಿಸಿಕೊಡುತ್ತೇನೆ. ನನ್ನ ಹತ್ತಿರ ಮುಚ್ಚಿಡುವುದು ಏನೂ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಾಖಲಾತಿಗಳನ್ನು ಕೇಳುವುದಕ್ಕೆ ಬರುತ್ತಾರೆಂದು 144 ಸೆಕ್ಷನ್ ಹಾಕಿದರೆ ದಾಖಲಾತಿಗಳನ್ನು ಹೇಗೆ ಕೇಳುವುದು. ಇವತ್ತು ಜನರು ದಾಖಲಾತಿಗಳನ್ನು ಕೇಳದ ಹಾಗೆ ಮಾಡಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಾನು ಅಧಿಕಾರವನ್ನು ವಹಿಸಿಕೊಂಡಾಗ ರಾಜ್ಯದಲ್ಲಿ 1,500 ಮೆಗಾವ್ಯಾಟ್‌ನಿಂದ 2000 ಮೆಗಾವ್ಯಾಟ್‌ನಷ್ಟು ವಿದ್ಯುತ್ ಕೊರತೆ ಇತ್ತು. ಪ್ರತಿವರ್ಷ ಕೊರತೆಯ ಪ್ರಮಾಣ ಶೇಕಡ 8 ರಿಂದ 10 ರಷ್ಟು ಹೆಚ್ಚಾಗುತ್ತಿರುವುದನ್ನು ನಾವು

ಗಮನಿಸಿದೆವು. ಈ ವಿದ್ಯುತ್ ಅಭಾವವನ್ನು ಸರಿದೂಗಿಸಬೇಕಾದರೆ ಹೆಚ್ಚು ವಿದ್ಯುತ್‌ನ್ನು ಉತ್ಪಾದಿಸುವುದು ಅನಿವಾರ್ಯವಾಗಿರುವುದರಿಂದ ವಿದ್ಯುತ್ ಉತ್ಪಾದನೆಗೆ ಹಲವು ಕ್ರಮಗಳನ್ನು ನಾವು ಕೈಗೊಂಡಿದ್ದೇವೆ. 1990 ರಿಂದ 2006ರವರೆಗೆ ಹಿಂದಿನ ಸರ್ಕಾರ 34 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯ ಸಂಬಂಧ ಖಾಸಗಿ ಕಂಪನಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದರು. ಆದರೆ ಇವುಗಳಲ್ಲಿ ಒಂದೆರಡು ಯೋಜನೆಗಳನ್ನು ಬಿಟ್ಟರೆ 15 ವರ್ಷಗಳ ಈ ಸುದೀರ್ಘ ಅವಧಿಯಲ್ಲಿ ಬಹುತೇಕ ಯೋಜನೆಗಳು ಅನುಷ್ಠಾನಕ್ಕೆ ಬಂದಿರಲಿಲ್ಲ. ಕೇವಲ ಖಾಸಗಿ ಕ್ಷೇತ್ರದ ಮೇಲೆ ಅವಲಂಬನೆಯಾದರೆ ಹೆಚ್ಚು ವಿದ್ಯುತ್ ಉತ್ಪಾದನೆಯು ಸಾಧ್ಯವಿಲ್ಲವೆಂಬುದನ್ನು ನಮ್ಮ ಸರ್ಕಾರ ಮನಗಂಡು ಕೆಪಿಸಿಎಲ್‌ಗೆ ಪೂರ್ಣ ಪ್ರೋತ್ಸಾಹ ನೀಡುವುದಕ್ಕೆ ನಾವು ನಿರ್ಧಾರವನ್ನು ಮಾಡಿದೆವು. ಈ ಕ್ರಮದ ಮೊದಲ ಹೆಜ್ಜೆಯಾಗಿ ನಮ್ಮ ಸರ್ಕಾರ ಕೆಪಿಸಿಎಲ್‌ಗೆ ಮೊದಲ ಬಾರಿಗೆ 500 ಕೋಟಿ ರೂಪಾಯಿಗಳ ಷೇರು ಬಂಡವಾಳವನ್ನು ಒದಗಿಸಿದೆವು. ಕೆಪಿಸಿಎಲ್ ವತಿಯಿಂದ 5 ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ನಮ್ಮ ಸರ್ಕಾರವು ಅನುಮೋದನೆಯನ್ನು ನೀಡಿತು. ಅವುಗಳಲ್ಲಿ ಈಗಾಗಲೇ ಯೋಜನೆಗಳ ಅನುಷ್ಠಾನದ ಸಂಬಂಧ ಎಲ್ಲಾ ಅನುಮೋದನೆಗಳನ್ನು ಪಡೆದು ಟೆಂಡರ್ ಕರೆಯಲಾಗಿದೆ. 5 ಯೋಜನೆಗಳಲ್ಲಿ 3 ಯೋಜನೆಗಳಿಗೆ ಅನುಷ್ಠಾನದ ಸಂಬಂಧ ಎಲ್ಲಾ ಅನುಮತಿಯನ್ನು ಕೇಂದ್ರದಿಂದ ಪಡೆದು ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. Eramarus, ರಾಯಚೂರು ಸಮೀಪದಲ್ಲಿರುವಂತಹ Eramaurusನಲ್ಲಿ 1600 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣ ಸ್ಥಾವರದ ಕಾಮಗಾರಿಗಳಿಗೆ ಒಟ್ಟು ಸುಮಾರು 9000 ಕೋಟಿ ರೂಪಾಯಿಗಳು ಖರ್ಚಾಗುವುದರಲ್ಲಿದ್ದು ಈಗಾಗಲೇ ಟೆಂಡರ್‌ನ್ನು ಕರೆದಿದ್ದೇವೆ. ಮುಂದಿನ 4 ವರ್ಷಗಳಲ್ಲಿ ಈ ಯೋಜನೆಯು ಪೂರ್ಣಗೊಳ್ಳಲಿದೆ. ಆಗ ರಾಜ್ಯಕ್ಕೆ ಪ್ರತಿದಿನ 35 ರಿಂದ 38 ದಶಲಕ್ಷ ಯೂನಿಟ್ ವಿದ್ಯುತ್ ಯಡ್ಲಾಪುರದಿಂದ ಲಭ್ಯವಾಗಲಿದೆ RTPS ಪಕ್ಕದಲ್ಲಿರುವಂತಹ ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ

ಉಷ್ಣ ಸ್ಥಾವರದ ಕಾಮಗಾರಿಗೆ ಈಗಾಗಲೇ ಟೆಂಡರನ್ನು ಕರೆದಿದ್ದೇವೆ. ಈ ಯೋಜನೆಯು 4 ವರ್ಷದಲ್ಲಿ ಪೂರ್ಣವಾಗುವುದರಲ್ಲಿದೆ. ಸುಮಾರು 4,800 ಕೋಟಿ ರೂಪಾಯಿಗಳು ಖರ್ಚಾಗಲಿದೆ. ಈ ಯೋಜನೆಯಿಂದ ಪ್ರತಿದಿನ 800 ಮೆಗಾವ್ಯಾಟ್ ಅಂದರೆ 17 ರಿಂದ 18 ದಶಲಕ್ಷ ಯೂನಿಟ್ ವಿದ್ಯುತ್ ರಾಜ್ಯಕ್ಕೆ ಲಭ್ಯವಾಗಲಿದೆ. ಬಳ್ಳಾರಿ 3 ನೇಯ ಘಟಕದ ಕೆಲಸಕ್ಕೆ ಟೆಂಡರ್‌ನ್ನು ಪ್ರಕಟಿಸಲಾಗಿದೆ. 600 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಯೋಜನೆಗೆ 3000 ಕೋಟಿ ರೂಪಾಯಿಗಳು ವೆಚ್ಚವಾಗಲಿದೆ. ಅದು 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಇದರಿಂದಾಗಿ ಪ್ರತಿದಿನ 11 ರಿಂದ 12 ದಶಲಕ್ಷ ಯೂನಿಟ್ ವಿದ್ಯುತ್ ದೊರೆಯುತ್ತದೆ. ಬಿಡದಿ ಅನಿಲ ಘಟಕ ಇಲ್ಲಿ 1400 ಮೆಗಾವ್ಯಾಟ್ ಸಾಮರ್ಥ್ಯದ ಅನಿಲ ವಿದ್ಯುತ್ ಘಟಕ ಸ್ಥಾಪಿಸುವುದಕ್ಕೆ ಟೆಂಡರ್‌ನ್ನು ಈಗಾಗಲೇ ಕರೆದಿದ್ದೇವೆ. ಈ ಯೋಜನೆಗೆ 3500 ಕೋಟಿ ರೂಪಾಯಿಗಳು ವೆಚ್ಚವಾಗಲಿದೆ. ಈ ಯೋಜನೆಯು 3 ವರ್ಷಗಳಲ್ಲಿ ಪೂರ್ಣಗೊಳ್ಳಲಾಗುತ್ತದೆ. ಇದರಿಂದ ಪ್ರತಿದಿನ ರಾಜ್ಯಕ್ಕೆ 30 ದಶಲಕ್ಷ ಯೂನಿಟ್‌ನಷ್ಟು ವಿದ್ಯುತ್ ದೊರೆಯಲಿದೆ. ಛತ್ತಿಸ್‌ಗಡ್ ಯೋಜನೆಯ ಬಗ್ಗೆ ಹೇಳುವುದಾದರೆ, ನಾನು ಪ್ರಾಮಾಣಿಕವಾಗಿ ಈ ಮನೆಯಲ್ಲಿ ಮಾನ್ಯ ಸದಸ್ಯರ ಮೂಲಕ ಈ ನಾಡಿನ ಜನರಿಗೆ ಅತ್ಯಂತ ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಛತ್ತಿಸ್‌ಗಡದಲ್ಲಿ ವಿದ್ಯುತ್ ಉತ್ಪಾದನೆಯ ಕಡೆಗೆ ನಮ್ಮ ಅಧಿಕಾರಿಗಳು day and night ಓಡಾಟವನ್ನು ಮಾಡಿ ಒಂದು ರೂಪಕ್ಕೆ ತಂದಿಟ್ಟಿದ್ದಾರೆ. ರಾಜ್ಯದಲ್ಲಿ ಕಲ್ಲಿದ್ದಲಾಗಲಿ ಅಥವಾ ನೈಸರ್ಗಿಕ ಅನಿಲ ಆಗಲಿ ದೊರೆಯುವಂತಹ ಅವಕಾಶ ಈಗ ಇಲ್ಲ. ಮೊಟ್ಟ ಮೊದಲನೆ ಬಾರಿಗೆ ರಾಜ್ಯದ ಹೊರಗಡೆ ಯಥೇಚ್ಛವಾಗಿ ಕಲ್ಲಿದ್ದಲು ದೊರೆಯುವ ಛತ್ತೀಸ್‌ಗಡದಲ್ಲಿ ಉಷ್ಣ ವಿದ್ಯುತ್ ಯೋಜನೆ ಪ್ರಾರಂಭಿಸಿ ರಾಜ್ಯದ ವಿದ್ಯುತ್ ಕೊರತೆ ನೀಗಿಸಿಕೊಳ್ಳುವಂಥ ಐತಿಹಾಸಿಕ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ದೇಶದಲ್ಲಿ ಯಾರೂ ಯಾವುದೇ ಸಂದರ್ಭದಲ್ಲಿ ಬೇರೆ ರಾಜ್ಯಗಳಿಗೆ ಹೋಗಿ ಈ ರೀತಿ ಒಂದು ಯುನಿಟ್ ಅನ್ನು ಪ್ರಾರಂಭ ಮಾಡುವಂಥ ಸಾಹಸ ಮಾಡಿರಲಿಲ್ಲ. ಕರ್ನಾಟಕ ರಾಜ್ಯದ ಜನರ ಹಿತವನ್ನು

ಮನಸ್ಸಿನಲ್ಲಿಟ್ಟುಕೊಂಡು ಈ ಧೈರ್ಯವನ್ನು ಮಾಡಿದೆವು. ಈ ಛತ್ತೀಸ್‌ಗಡ ಉಷ್ಣ ವಿದ್ಯುತ್ ಸ್ಥಾವರ ಯೋಜನೆಯನ್ನು ಸ್ಥಾಪಿಸುವ ಸಂಬಂಧ ಈಗಾಗಲೇ ಎಲ್ಲಾ ಪ್ರಕ್ರಿಯೆಗಳು ಮುಗಿಯುತ್ತಾ ಬಂದಿದೆ. ಈ ವರ್ಷ ಜೂನ್ ವೇಳೆಗೆ ಟೆಂಡರ್ ಅನ್ನು ಕರೆಯುತ್ತಿದ್ದೇವೆ. ಈ ಯೋಜನೆಗೆ 9000 ಕೋಟಿ ರೂಪಾಯಿಗಳ ವೆಚ್ಚ ಆಗಲಿದೆ. ಪ್ರತಿ ನಿತ್ಯ 16 ದಶಲಕ್ಷ ಯುನಿಟ್ ವಿದ್ಯುತ್ ದೊರೆಯಲಿದೆ. 5 ಯೋಜನೆಗಳಿಂದ ಒಟ್ಟು 5900 ಮೆಗಾವ್ಯಾಟ್ ಇದೆ. ಇದನ್ನು ಮುಂದಿನ ಮೂರರಿಂದ ನಾಲ್ಕೂವರೆ ವರ್ಷಗಳ ಒಳಗಾಗಿ ಒಟ್ಟು 5900 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಸಾಮರ್ಥ್ಯ ಈ ರಾಜ್ಯದ ಜಾಲಕ್ಕೆ ಸೇರ್ಪಡೆಯಾದರೆ ಪ್ರತಿನಿತ್ಯ 109 ದಶಲಕ್ಷ ಯೂನಿಟ್ ವಿದ್ಯುತ್ ದೊರೆಯುತ್ತದೆ. ಇದರ ಜೊತೆಗೆ ಮುಂದಿನ ವರ್ಷ ಉತ್ಪಾದನೆಯಾಗಲಿರುವ ಬಳ್ಳಾರಿಯ ಎರಡನೇ ಘಟಕ ಹಾಗೂ ಇದೇ ತಿಂಗಳೂ ಉದ್ಘಾಟನೆ ಆಗಲಿರುವ ರಾಯಚೂರು ಎಂಟನೆ ಘಟಕದಿಂದ ಒಟ್ಟು 6,650 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ರಾಜ್ಯಕ್ಕೆ ದೊರೆತು ಪ್ರತಿನಿತ್ಯ 125 ದಶಲಕ್ಷ ಯೂನಿಟ್ ವಿದ್ಯುತ್ ಅನ್ನು ಸರಬರಾಜು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆಗ ವಿದ್ಯುತ್ ಕೊರತೆ ಅಂತ್ಯಗೊಳಿಸಿ ಹೆಚ್ಚುವರಿ ವಿದ್ಯುತ್ ಅನ್ನು ಅಂದರೆ ಎರಡು ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಹೊರಗಡೆ ಮಾರಾಟ ಮಾಡಲಿಕ್ಕೂ ಸಹ ಇದು ಅನುಕೂಲವಾಗುತ್ತದೆನ್ನುವ ದೃಷ್ಟಿಯಿಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಇದಲ್ಲದೆ ತದಡಿಯಲ್ಲಿ 2100 ಮೆಗಾವ್ಯಾಟ್ ಸಾಮರ್ಥ್ಯದ ಇನ್ನೊಂದು ಅನಿಲ ವಿದ್ಯುತ್ ಸ್ಥಾವರ, ಗುಂಡ್ಯಾ ಹಾಗೂ ಶಿವನಸಮುದ್ರ ಜಲವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಜೊತೆಗೆ ಸಾರ್ವಜನಿಕ ವಲಯದ NTPC ವತಿಯಿಂದ 4,000 ಮೆಗಾವ್ಯಾಟ್ ಸಾಮರ್ಥ್ಯ ಉಷ್ಣ ವಿದ್ಯುತ್ ಸ್ಥಾವರವನ್ನು ಬಿಜಾಪುರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಥಾಪಿಸುವುದಕ್ಕೆ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ. ಸಾರ್ವಜನಿಕ ವಲಯದ ಈ NTPC ಸಹಯೋಗದೊಂದಿಗೆ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸುವ ಯೋಜನೆಯನ್ನು ಹಿಂದಿನ ಸರ್ಕಾರಗಳು ಮಾಡಿದ್ದರೂ ಸಹ ಯಶಸ್ವಿಯಾಗಿರಲಿಲ್ಲ. ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಒಂದು ಯಶಸ್ವಿ

ಹಂತಕ್ಕೆ ಬಂದಿದೆ. ನಾಲ್ಕುಸಾವಿರ ಮೆಗಾವ್ಯಾಟ್ ಸಾಮರ್ಥ್ಯ ಯೋಜನೆಯ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಿಂದುಳಿದ ಬಿಜಾಪುರ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿದೆ. ಕೇಂದ್ರದ ವಿದ್ಯುತ್ ಖಾತೆ ಸಚಿವರಾದ ಶ್ರೀ ಸುಶೀಲ್ ಕುಮಾರ್ ಶಿಂಧೆಯವರು ಈ ತಿಂಗಳ 27ನೇ ತಾರೀಖು ಈ ಯೋಜನೆಗೆ ಅಡಿಗಲ್ಲನ್ನು ಹಾಕುವವರಿದ್ದಾರೆ. ಅವರು ಬಂದು ನೋಡಿ ಒಪ್ಪಿಕೊಂಡು ಹೋಗಿದ್ದಾರೆ. ಅವರು ಬಂದು ಈ ಯೋಜನೆಗೆ ಅಡಿಗಲ್ಲನ್ನು ಹಾಕುವವರಿದ್ದಾರೆ. 2009ನೇ ಜನವರಿಯಲ್ಲಿ ಒಡಂಬಡಿಕೆ ಮಾಡಿಕೊಂಡು 3,500 ಎಕರೆ ಭೂಸ್ವಾಧೀನಪಡಿಸಿಕೊಂಡು ಇತರೆ ಎಲ್ಲಾ ಪ್ರಕ್ರಿಯೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲಿಕ್ಕೆ ನಾವು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದೇವೆ. NTPC ಜೊತೆ ಕೆ.ಪಿ.ಸಿ ಹಾಗೂ ರಾಜ್ಯ ಸರ್ಕಾರ ನಿರಂತರ ಸಂಪರ್ಕದಲ್ಲಿದ್ದು 2013 ರ ವೇಳೆಗೆ ಕನಿಷ್ಠ 800 ಮೆಗಾವ್ಯಾಟ್ ಸಾಮರ್ಥ್ಯದ ಮೊದಲ ಹಂತದ ಘಟಕವನ್ನು ಪೂರ್ಣಗೊಳಿಸುವುದಕ್ಕೆ ಎಲ್ಲಾ ರೀತಿಯ ಭರವಸೆ ನಮಗೆ ಸಿಕ್ಕಿದೆ. ಹೊಸ ಯೋಜನೆಗಳಿಗೆ ಹಣಕಾಸನ್ನು ಎಲ್ಲಿಂದ ತರುತ್ತೀರಿ ಎಂದು ಯಾರಾದರೂ ಕೇಳಬಹುದು. ಸುಮಾರು 20 ವರ್ಷಗಳ ನಂತರ ಕೆ.ಪಿ.ಸಿ.ಎಲ್.ಗೆ ನಮ್ಮ ಸರ್ಕಾರ ಈಗಾಗಲೇ ಹೇಳಿದಂತೆ 500 ಕೋಟಿ ರೂಪಾಯಿಗಳ ಷೇರುಬಂಡವಾಳವಾಗಿ ಬಿಡುಗಡೆ ಮಾಡಿದೆ. ಅವಶ್ಯಕತೆ ಇದ್ದರೆ ಕೆ.ಪಿ.ಸಿ.ಯ ಹೊಸ ಯೋಜನೆಗಳಿಗೆ ಹೆಚ್ಚಿನ ಒಂದು ಷೇರು ಬಂಡವಾಳವನ್ನು ಬಿಡುಗಡೆ ಮಾಡಲಿಕ್ಕೆ ನಮ್ಮ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಕೆ.ಪಿ.ಸಿ.ಯ ಹೊಸ ಯೋಜನೆಗಳಿಗೆ ಕಳೆದ 15 ವರ್ಷಗಳಿಂದ ಯಾವುದೇ ಸರ್ಕಾರಗಳು ಧನಸಹಾಯವನ್ನು ನೀಡಿಲ್ಲ. ಈಗಲೂ ಸಹ ಸಂಸ್ಥೆ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಳ್ಳುವಂಥ ಸಾಮರ್ಥ್ಯ ಹೊಂದಿದೆ. ಈಗಾಗಲೇ ಹೊಸ ಯೋಜನೆಗಳಿಗೆ ಒಟ್ಟು 25,000 ಕೋಟಿ ರೂಪಾಯಿಗಳ ಹಣ ತೆಗೆದುಕೊಳ್ಳುವ ದಿಶೆಯಲ್ಲಿ ಎಲ್ಲಾ ಕ್ರಮವನ್ನು ನಾವು ಕೈಗೊಂಡಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಕೆ.ಪಿ.ಸಿ. ಬ್ಯಾಂಕ್‌ನಿಂದ ಸರ್ಕಾರದ ಗ್ಯಾರಂಟಿ ಇಲ್ಲದೇನೆ 2600 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದೆ. ಆದ್ದರಿಂದ ಹೊಸ ಯೋಜನೆಗಳ ಅನುಷ್ಠಾನಕ್ಕೆ

ಹಣಕಾಸಿನ ಕೊರತೆ ಬರುವುದಿಲ್ಲ. ಜೊತೆಗೆ ಕೆ.ಪಿ.ಸಿ. ಹಣಕಾಸಿನ ಭಾರವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಹೆಚ್ಚಿನ ತಾಂತ್ರಿಕತೆ, ಪರಿಣತಿ, ಅನುಭವ ಹೊಂದಿರುವಂಥ ದೊಡ್ಡ ಕಂಪೆನಿಗಳೊಂದಿಗೆ ಸಹಭಾಗಿತ್ವಕ್ಕೆ ಮುಂದಾಗಿದೆ. ಈಗಾಗಲೇ BHEL, L&T ಈ ಕಂಪೆನಿಗಳೊಂದಿಗೆ ಈ ಸಂಬಂಧ ಒಡಂಬಡಿಕೆ ಮಾಡಿಕೊಳ್ಳಲು ನಾವು ಮುಂದಾಗಿದ್ದೇವೆ. ತಕ್ಷಣ ವಿದ್ಯುತ್ ಕೊರತೆಯನ್ನು ನೀಗಿಸುವುದಕ್ಕೆ ಮೇಲ್ಕಂಡ ದೀರ್ಘಾವಧಿ ಯೋಜನೆಗಳಲ್ಲದೆ ಪ್ರಸ್ತುತ ವಿದ್ಯುತ್ ಕೊರತೆಯನ್ನು ನೀಗಿಸಲು ನಾವು ತಾತ್ಕಾಲಿಕವಾಗಿ ವಿದ್ಯುತ್ ಖರೀದಿ ಮಾಡಲು ಕ್ರಮ ಕೈಗೊಂಡಿದ್ದೇವೆ. ನಾನು ಈಗಾಗಲೇ ಫೆಬ್ರವರಿ ತಿಂಗಳಿನಲ್ಲಿ ಉಂಟಾದ ವಿದ್ಯುತ್ ಕೊರತೆ ನೀಗಿಸುವುದಕ್ಕೆ 400 ಮೆಗಾವ್ಯಾಟ್ ವಿದ್ಯುತ್ ಖರೀದಿಸಿದ್ದೇವೆ. ಮಾರ್ಚ್ ತಿಂಗಳಿನಲ್ಲಿ ಒಟ್ಟು 1000 ಮೆಗಾವ್ಯಾಟ್ ವಿದ್ಯುತ್ ಅನ್ನು ಖರೀದಿ ಮಾಢಲಿಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಖರೀದಿ ಮಾಡುವಂಥ ವಿವರ ಹೀಗಿದೆ: ಜಿಂದಾಲ್ ಪವರ್‌ನಿಂದ 200 ಮೆಗಾವ್ಯಾಟ್, PPC ಯಿಂದ 450 ಮೆಗಾವ್ಯಾಟ್, NTPCಯಿಂದ 100 ಮೆಗಾವ್ಯಾಟ್ ಅದು barterನಲ್ಲಿ, NTPC ಖರೀದಿ 250 ಮೆಗಾವ್ಯಾಟ್, ಒಟ್ಟು ದಿನಂಪ್ರತಿ 21 ಮಿಲಿಯನ್ ಯುನಿಟ್ಸ್ ಪ್ರಮಾಣದ ವಿದ್ಯುತ್ ಖರೀದಿಯನ್ನು ಮಾರ್ಚ್‌ನಲ್ಲಿ ಒಟ್ಟು ಸುಮಾರು 323 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಲಿಕ್ಕೆ ನಿಶ್ಚಯ ಮಾಡಿದ್ದೇವೆ. ಈಗಾಗಲೇ ನಾವು ಹೇಳಿದಂತೆ ಮೇಲ್ಕಂಡ ಪ್ರಮಾಣದ ವಿದ್ಯುತ್ ಖರೀದಿಯಿಂದ ರಾಜ್ಯದಲ್ಲಿ ಈ ಕೆಳಗಿನ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡುತ್ತೇವೆಂದು ನಾವು ಈಗಾಗಲೇ ಹೇಳಿದ್ದೇವೆ. ಬೆಂಗಳೂರು ನಗರ 23 ಗಂಟೆ, ನನ್ನ ಅಪೇಕ್ಷೆಯಂತೆ 24 ಗಂಟೆಗಳು ವಿದ್ಯುತ್ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇತರೆ ನಗರ ಪಟ್ಟಣಗಳಲ್ಲಿ 21 ಗಂಟೆ, ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಆರು ಗಂಟೆಗಳ ಕಾಲ 3 ಫೇಸ್, 6 ಗಂಟೆಗಳ ಕಾಲ ಸಿಂಗಲ್ ಫೇಸ್, ಸಂಜೆ 7 ರಿಂದ 11 ರವರೆಗೆ ಸಿಂಗಲ್ ಫೇಸ್. 2010 ರ ಏಪ್ರಿಲ್‌ನಿಂದ ಆಗಸ್ಟ್ ತಿಂಗಳಿನವರೆಗೆ 750 ಮೆಗಾವ್ಯಾಟ್‌ವರೆಗೆ ವಿದ್ಯುತ್ ಖರೀದಿಗಾಗಿ ಅಲ್ಪ ಕಾಲದ ಟೆಂಡರ್ ಕರೆದಿದ್ದೇವೆ. ಅದನ್ನು ಈ ತಿಂಗಳು

5ನೇ ತಾರೀಖು bid open ಮಾಡುತ್ತಿದ್ದೇವೆ. ವಿದ್ಯುತ್ ಕ್ಷೇತ್ರದಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಕ್ಕೆ ಪ್ರಸರಣ ಮತ್ತು ವಿತರಣ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಹಲವಾರು ಕ್ರಮವನ್ನು ಕೈಗೊಂಡಿದ್ದೇವೆ. ಇದನ್ನು ನಮ್ಮ ಮಾಧ್ಯಮದ ಸ್ನೇಹಿತರು ಮತ್ತು ಶಾಸಕ ಮಿತ್ರರು ಗಮನಿಸಬೇಕು. 2004-05 ರಲ್ಲಿ ಶೇಕಡ 26.49 ರಷ್ಟು ಇದ್ದ ನಷ್ಟ, 2008-09 ವರ್ಷಕ್ಕೆ ನಮ್ಮ ಅಧಿಕಾರಿಗಳ ವಿಶೇಷ ಶ್ರಮದಿಂದ ಶೇಕಡ 20.67 ಕ್ಕೆ ಇಳಿಸಲಾಗಿದೆ. 2007-08 ಮತ್ತು 2008-09 ವರ್ಷಗಳ ಅವಧಿಯಲ್ಲಿ ಈ ಕೆ.ಪಿ.ಸಿ. ಹಾಗೂ ವಿದ್ಯುತ್ ವಿತರಣಾ ಕಂಪೆನಿಗಳು ವಿದ್ಯುತ್ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ 7,750 ಕೋಟಿ ರೂಪಾಯಿಗಳ ಬಂಡವಾಳ ಹೂಡಿ ಒಟ್ಟು 288 ಉಪ ಸ್ಥಾವರಗಳನ್ನು ಹಾಗೂ 2791 circuit ಕಿಲೋಮೀಟರ್ ಪ್ರಸರಣ ಮಾರ್ಗಗಳನ್ನು ನಿರ್ಮಿಸಿದ್ದೇವೆ. ಇದರಿಂದಾಗಿ ಈ ಪ್ರಸರಣ ನಷ್ಟ ಶೇಕಡ 4.3 ರಷ್ಟು ದಾಖಲೆ ಪ್ರಮಾಣದಲ್ಲಿ ಇಳಿಮುಖವಾಗಿದೆ. ವಿತರಣ ನಷ್ಟ ಕೇವಲ 19.7 ರ ಮಟ್ಟಕ್ಕೆ ಬಂಡವಾಳ ವೆಚ್ಚ ಹಾಗೂ ಕಾಮಗಾರಿ ವಿವರಗಳು ಕೆಳಗಿವೆ. ಪರಿವರ್ತಕಗಳಿಗೆ ಮೀಟರ್ ಅಳವಡಿಸುವುದು ಮತ್ತು energy, audit, ನಗರ ಹಾಗೂ ಪಟ್ಟಣಪ್ರದೇಶದ ಎಲ್ಲಾ ಪರಿವರ್ತಕ ವಿತರಕರಿಗೆ ಮೀಟರ್‌ಗಳನ್ನು ಅಳವಡಿಸುವಂಥದ್ದು ಭಾರತ ಸರ್ಕಾರದ RAPD ಯೋಜನೆಗಳಿಗೆ ಒಳಪಡಲಿದೆ. ಈ ಯೋಜನೆಯಡಿ 30,000 ಜನಸಂಖ್ಯೆಗಿಂತ ಮೇಲ್ಪಟ್ಟ ನಗರ ಪಟ್ಟಣಗಳನ್ನೊಳಪಟ್ಟು ಕರ್ನಾಟಕದ ನೂರು ನಗರ ಪಟ್ಟಣಗಳು ಈ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟಿವೆ. ಇಂಥ ಎಲ್ಲಾ ನಗರ ಪಟ್ಟಣ ವಿತರಣ, ಪರಿವರ್ತನೆಗಾಗಿ DTC meter ಅಳವಡಿಕೆ ಯೋಜನೆ ಭಾಗವಾಗಿದೆ. ಈ ಯೋಜನೆಯಡಿಯಲ್ಲಿ ನಗರ ಹಾಗು ಪಟ್ಟಣದ ಎಲ್ಲಾ DTC meter ಅಳವಡಿಸಿ 2011 ರ ಮಾರ್ಚ್ ಅಂತ್ಯದ ವೇಳೆಗೆ ಈ ಕಾರ್ಯಕ್ರಮವನ್ನು ಪೂರ್ಣಗೊಳಿಸುತ್ತಿದ್ದೇವೆ. ಕ್ರಮೇಣ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ DTC meter ಗಳಿಗೆ ಅಗತ್ಯವಾದ ನಿಯಮಾವಳಿಗಳು, ನಗರಪ್ರದೇಶಗಳ ಮೀಟರ್‌ಗಳನ್ನು ಆಧರಿಸಿ ಮಾಡಬೇಕಾಗಿದೆ ಮತ್ತು ಮೀಟರ್‌ಗಳ ಸಮಾನತೆಯನ್ನು ಕಾಯ್ದುಕೊಳ್ಳುವ

ಅಗತ್ಯವಿರುವುದರಿಂದ ಈ ಯೋಜನೆಗೆ ಮಾರ್ಚ್ 2012ರ ಅಂತ್ಯದ ವೇಳೆಗೆ ಪೂರ್ಣ ಮಾಡುತ್ತೇವೆ. ಎಲ್ಲಾ ಹಂತಗಳಲ್ಲಿ energy, audit ಪ್ರಕ್ರಿಯೆ ಈ ಮೀಟರ್ ಅಳವಡಿಕೆಯ ಪೂರ್ಣಗೊಂಡ ನಂತರವಷ್ಟೇ ಸಾಧ್ಯವಾಗುತ್ತದೆ. ನಿರಂತರ ಜ್ಯೋತಿ ಬಗ್ಗೆ ನಾನು ಹೇಳಿದ್ದೇನೆ. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಕೃಷಿ ಮತ್ತು ಕೃಷಿಯೇತರ ವಲಯಗಳನ್ನಾಗಿ ಬೇರ್ಪಡಿಸುವುದಕ್ಕೆ, ಗುಣಮಟ್ಟದ ವಿದ್ಯುತ್ ಪೂರೈಸುವುದಕ್ಕೆ ಈ ಯೋಜನೆ ಮಾಡುತ್ತಿದ್ದೇವೆ. ಪ್ರಾರಂಭಿಕ ಯೋಜನೆಯಾಗಿ ಈಗಾಗಲೇ ಹೇಳಿದಂತೆ ಮಾಲೂರು, ಮಳವಳ್ಳಿ, ಬೈಲಹೊಂಗಲ, ಕುಷ್ಟಗಿ, ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಕೈಗೊಂಡಿದ್ದೇವೆ. ಇವುಗಳಲ್ಲಿ ಮಾಲೂರು, ಬೈಲಹೊಂಗಲ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಈ ಯೋಜನೆ ಪೂರ್ಣವಾಗುತ್ತಿವೆ. ಕುಷ್ಟಗಿ, ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಈ ಯೋಜನೆ ಪೂರ್ಣಗೊಳ್ಳಲಿವೆ. ಈ ನಿರಂತರ ಯೋಜನೆಯನ್ನು ಒಟ್ಟು 2 ಕಂತುಗಳಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮೊದಲ ಹಂತದಲ್ಲಿ ಒಟ್ಟು 70 ತಾಲ್ಲೂಕುಗಳಲ್ಲಿ 12,689 ಹಳ್ಳಿಗಳಿಗೆ ಒಟ್ಟು 927 ಫೀಡರ್‌ಗಳ ಮೂಲಕ ವಿದ್ಯುತ್ ಒದಗಿಸುತ್ತೇವೆ. ಇದಕ್ಕೆ ಒಟ್ಟು 1203 ಕೋಟಿ ರೂಪಾಯಿಗಳಷ್ಟು ವೆಚ್ಚವಾಗಲಿದೆ. ಈ ಯೋಜನೆಯ ಪ್ರಥಮ ಹಂತ ಮಾರ್ಚ್ 2011ಕ್ಕೆ ಮುಗಿಯುತ್ತಿದೆ. ಯೋಜನೆಯ ಎರಡನೇ ಹಂತ ಒಟ್ಟು 56 ತಾಲ್ಲೂಕುಗಳಲ್ಲಿ 10,297 ಹಳ್ಳಿಗಳಿಗೆ ಒಟ್ಟು 687 ಫೀಡರ್‌ಗಳ ಮೂಲಕ ವಿದ್ಯುತ್ ಒದಗಿಸುವುದಕ್ಕೆ 920 ಕೋಟಿ ರೂಪಾಯಿಗಳಷ್ಟು ವೆಚ್ಚವಾಗುತ್ತಿದೆ. ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ ಆಗಾಗ ರಿಪೇರಿಗೆ ಬರುತ್ತಿದೆ. ಇದರ ಬಗ್ಗೆ ತಾವೆಲ್ಲಾ ಸಾಕಷ್ಟು ನಮ್ಮ ಗಮನವನ್ನು ಸೆಳೆದಿದ್ದೀರಿ. ಇದು ಸತ್ಯವಾದ ಮಾತು. ಆಗಾಗ ಏನು ತೊಂದರೆ ಆಗುತ್ತಿತ್ತು ಇದನ್ನು ಮನಗಂಡು BHEL company ಯಿಂದ ಸುಮಾರು 240 ಕೋಟಿ ರೂಪಾಯಿಗಳಷ್ಟು ದಂಡ ವಸೂಲು ಮಾಡಿದ್ದೇವೆ. ಕಳೆದ ಮೂರು ತಿಂಗಳುಗಳಿಂದ ಅದರ ಕಾರ್ಯ ಸುಧಾರಿಸುತ್ತಿದೆ. ಕಳೆದ ಎರಡು ದಿನಗಳಲ್ಲಿ ಸಣ್ಣ ರಿಪೇರಿ ಬಂದಿತ್ತು.

5.00 ಪಿ.ಎಂ.

ನಿನ್ನೆಯಿಂದ 100% efficient ಆಗಿ ಕೆಲಸ ನಿರ್ವಹಿಸುತ್ತಿದೆ. ಮಾನ್ಯ ಜಯಚಂದ್ರರವರೆ, ದಿನವೂ 12 ಮಿಲಿಯನ್ ವಿದ್ಯುತ್ ಅನ್ನು ಉತ್ಪಾದನೆ ಮಾಡುತ್ತಿದ್ದೇವೆ improve ಆಗಿದೆ. ರಾಯಚೂರಿನಲ್ಲಿ ಹಳೆದಾದಂಥ ಯೂನಿಟ್-1 ಮತ್ತು ಯೂನಿಟ್-2 ಅನ್ನು ಆಧುನೀಕರಣಕ್ಕಾಗಿ ತೆಗೆದುಕೊಂಡು BHEL ನಿಂದ ಅಧ್ಯಯನ ನಡೆದಿದೆ. ಅದರ ಮೂಲ ಉಪಕರಣಗಳನ್ನು ಒದಗಿಸಿದ್ದರೂ ಆಧುನೀಕರಣಗೊಳಿಸಲು ಎರಡು ವರ್ಷಗಳು ಬೇಕಾಗುತ್ತದೆ. ಸುಮಾರು 300 ಕೋಟಿ ರೂ.ಗಳು ಖರ್ಚಾಗಬಹುದು. ಅದಕ್ಕೂ ನಾವು ಸಿದ್ಧತೆಯನ್ನು ಮಾಡುತ್ತಿದ್ದೇವೆ. KPCL ನಿಂದ ಕಳೆದ ವರ್ಷ imported coalಗೆ ನೀಡಿದ ದರ ಪ್ರತಿ ಟನ್‌ಗೆ ರೂ. 7,899 ಆಗಿದೆ. ನಾನು ಭಾಟಿಯಾ ಕಂಪನಿಯ ವಿಷಯಕ್ಕೆ, ನಮ್ಮ ರೇವಣ್ಣನವರ ವಿಷಯಕ್ಕೆ ಬರುವವನಿದ್ದೇನೆ. ಅದರ details ಅನ್ನು ಹೇಳುತ್ತೇನೆ. ಭಾಟಿಯಾ ಕಂಪನಿಯಿಂದ ಕಲ್ಲಿದ್ದಲು ಖರೀದಿಸಬಾರದು ಎಂದು ತೀರ್ಮಾನ ಆಗಿರಲಿಲ್ಲ. ಆದರೆ ಅವರು 6 ಲಕ್ಷ ಟನ್ ತಡವಾಗಿ ಪೂರೈಸಲು ಬಯಿಸಿದ ಕಾರಣ, ಪೂರೈಸದೇ ಇದ್ದಂತಹ ಉಳಿದ ಸುಮಾರು 68 ಸಾವಿರ ಟನ್ ಮಾತ್ರ ಮುಂದುವರೆಸುವುದು ಬೇಕಾಗಿಲ್ಲ ಎಂದು ಸೂಚಿಸಿದ್ದರು. ಅಂದರೆ, ಸುಮಾರು 4 ಕೋಟಿ ಹಾನಿಯಾಗಬಹುದೆಂದು ಅಂದಾಜು ಮಾಡಲಾಗಿತ್ತು. ಕಲ್ಲಿದ್ದಲು ಕೊರತೆಯಾಗುವುದನ್ನು ತಡೆಯುವುದಕ್ಕೆ ಅದನ್ನು ಖರೀದಿ ಮಾಡುವುದು ಅನಿವಾರ್ಯವಾಯಿತು. ಈ ವಿಷಯದಲ್ಲಿ ವಿಚಾರಣೆಗೆ ಆದೇಶ ಮಾಡಿದ್ದೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಈಗಾಗಲೇ enquiryಗೆ order ಮಾಡಿದ್ದೇವೆ. ಶರಾವತಿ ಯೋಜನೆ ಜಲಾಶಯಗಳಲ್ಲಿ ಮಾತ್ರ ಈ ವರ್ಷ ನೂರಕ್ಕೆ ನೂರರಷ್ಟು ನೀರು ಸಂಗ್ರಹವಾಗಿದೆ. ಕಾಳಿಯಲ್ಲಿ 66%, ವರಾಹಿಯಲ್ಲಿ 78% ಮಾತ್ರ ನೀರು ಸಂಗ್ರಹವಾಯಿತು. ಆದುದರಿಂದ ಎಲ್ಲಾ ಜಲಾಶಯಗಳು ತುಂಬಿ ತುಳುಕುತ್ತಿವೆ ಎಂಬುದು ಸತ್ಯ ಅಲ್ಲ. ನೀರಾವರಿ ಜಲಾಶಯಗಳಿಂದ ನಮಗೆ ದೊರೆಯುವ ವಿದ್ಯುತ್ ಕೇವಲ 10 ಪ್ರತಿಶತ ಮಾತ್ರ ಇದೆ. ಕಳೆದ ವರ್ಷಕ್ಕಿಂತ

ಈ ವರ್ಷ ಸುಮಾರು 11%ರಷ್ಟು ಹೆಚ್ಚು ನೀರು ಸಂಗ್ರಹವಾಗಿದೆ. ಮಳೆಯು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ, ಪಶ್ಚಿಮ ಘಟ್ಟದಲ್ಲಿ ಕಡಿಮೆ ಇತ್ತು. ಹಾಗಾಗಿ ಈ ವರ್ಷ ಜಲ ವಿದ್ಯುತ್ ಸ್ಥಾವರಗಳಿಂದ ಹೆಚ್ಚು ವಿದ್ಯುತ್ ಅನ್ನು ಪಡೆಯುತ್ತಿದ್ದೇವೆ. ರಾಯಚೂರು ಮತ್ತು ಬಳ್ಳಾರಿಯಲ್ಲಿ ಈ ವರ್ಷ ಸಾಕಷ್ಟು ಕಲ್ಲಿದ್ದಲು ದಾಸ್ತಾನು ಮಾಡಲಾಗಿದೆ. ಆ ಕಾರಣಕ್ಕಾಗಿ ಉತ್ಪಾದನೆಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಸುಮಾರು ಒಂದು ತಿಂಗಳ stock KPCL ನಲ್ಲಿ ನಾವು ಇಟ್ಟುಕೊಂಡಿದ್ದೇವೆ. ಈ ವಿಷಯದಲ್ಲಿ KPCL ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂದು ನಾನು ಹೆಮ್ಮೆಯಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಉಷ್ಣ ಸ್ಥಾವರಗಳ ಕಾರ್ಯದಕ್ಷತೆಯನ್ನು 80% ನಿಂದ 95% ನವರೆಗೆ ಏರಿಸಿರುವುದರಿಂದ ಪ್ರತಿ ದಿನ ರಾಜ್ಯಕ್ಕೆ 43 ಮಿಲಿಯನ್ ಯೂನಿಟ್ ವಿದ್ಯುತ್ ಲಭ್ಯವಾಗುತ್ತಿದೆ. ರಾಷ್ಟ್ರದಲ್ಲಿಯೇ ಉಷ್ಣ ಸ್ಥಾವರಗಳ ಸರಾಸರಿ ಕಾರ್ಯಕ್ಷಮತೆ, efficiency PLF 78% ಪ್ರತಿಶತ ಇದ್ದರೆ, KPCL ನಲ್ಲಿ 80% ಪ್ರತಿಶತ ಇದೆ. ಅದನ್ನು ಈಗ 95 ಕ್ಕೆ ಏರಿಸುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದ್ದರಿಂದ ಪ್ರತಿದಿನ ಇಂದಿನಿಂದ 88 ಮಿಲಿಯನ್ ಯೂನಿಟ್ ವಿದ್ಯುತ್ KPCL ನಿಂದ ರಾಜ್ಯಕ್ಕೆ ದೊರೆಯಬಹುದು ಮಾನ್ಯ ಜಯಚಂದ್ರರವರೆ, 'ನಿರಂತರ ಜ್ಯೋತಿ ಯೋಜನೆ'ಯ ಮೂಲಕ ಫೀಡರ್‌ಗಳ ವಿಂಗಡಣೆಯೊಂದಿಗೆ ಕೃಷಿ, ಕೈಗಾರಿಕೆ ಮತ್ತು ಮನೆ ಬಳಕೆ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ತರುವಂತಹ ಒಂದು ಹೆಜ್ಜೆಯನ್ನು ನಾವು ಇಟ್ಟಿದ್ದೇವೆ. ಗುಜರಾತ್‌ನಲ್ಲಿ 'ಜ್ಯೋತಿ ಗ್ರಾಮ' ಯಶಸ್ವಿಯಾಗಿ ಮಾಡಿದ್ದಾರೆ. ನಾವು 'ಪೈಲಟ್ ಯೋಜನೆ' ಯನ್ನು ಮಾಲೂರಿನಲ್ಲಿ ಚಾಲನೆಗೊಳಿಸಿದ್ದೇವು, ಇತ್ತೀಚೆಗಷ್ಟೆ ಹೊಸಕೋಟೆಯಲ್ಲಿ ಇಡೀ ಯೋಜನೆಗೆ ನಮ್ಮ ಕೇಂದ್ರದ ವಿದ್ಯುತ್ ಸಚಿವರು ಮಾನ್ಯ ಸುಶೀಲ್ ಕುಮಾರ್ ಸಿಂಧೆ ಅವರು ಹಸಿರು ನಿಶಾನೆಯನ್ನು ತೋರಿಸಿದ್ದಾರೆ. ಇಲ್ಲಿ 2–3 ಪ್ರಮುಖವಾದ ವಿಷಯಗಳನ್ನು ನಾನು ಈ ಮನೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಜಸ್ಟೀಸ್ ಮೋಹನ್ ಕುಮಾರ್ ಅವರಿಂದ enquiry ನಡೆಯುತ್ತಿದೆ ಮಾನ್ಯ ಸಿದ್ದರಾಮಯ್ಯನವರೆ,

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು clarification ಕೇಳಿದ ಮೇಲೆ ಮೋಹನ್ ಕುಮಾರ್‌ರವರ enquiry ವಿಷಯ ಆಮೇಲೆ ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿದ ಮೇಲೆ ನೀವು clarification ಕೇಳಿ.

ಅಧ್ಯಕ್ಷರು : ತಾವು ನಂತರ clarification ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸಾಯಂಕಾಲದವರೆಗೂ ಇಲ್ಲೇ ಕುಳಿತು ಕೇಳುತ್ತೇನೆ. ನಿಮ್ಮ clarificationಗೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳಿದ ಮೇಲೆ ಬೇಕಾದರೆ ಅವರು ಹೇಳಲಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಈಗ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ನಾನು ಹೇಳಿದ್ದು ಮುಗಿದ ಮೇಲೆ ಅಲ್ಲವೇ ಅವರು clarification ಕೇಳುವುದು.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಅವರು ಹೇಳುವುದು ಇನ್ನೂ ಮುಗಿದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ರೂಲ್ 60 ಅಡಿಯಲ್ಲಿ ನಾವು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ನೋಟೀಸ್ ಕೊಟ್ಟಿದ್ದೇವೆ. ನಾವು ಕೊಟ್ಟರೂ, ಅವರು ಸುಮ್ಮನೆ ಮೋಹನ್ ಕುಮಾರ್ ಎಂದು announce ಮಾಡಿ ಎದ್ದು ಹೋದರು.

ಅಧ್ಯಕ್ಷರು : ಆಯಿತು, ಅವರು ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ : ಏನು clarification ಹೇಳುವುದು ? ತಾವು ದಯಮಾಡಿ ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ಮೋಹನ ಕುಮಾರ್ ಅವರು ಯಾವ್ಯಾವ ತನಿಖೆ ಮಾಡಿದ್ದಾರೆ ?

ಶ್ರೀ ಡಿ.ಎನ್. ಜೀವರಾಜ್ : ರೇವಣ್ಣನವರು ಭಾಷಣವನ್ನು ಎರಡು ಗಂಟೆ ಮಾಡುತ್ತಾರೆ. ಆದರೆ ಉತ್ತರವನ್ನು 20 ನಿಮಿಷದಲ್ಲಿ ಕೊಡಬೇಕೆಂದು ಹೇಳುತ್ತಾರೆ ಅದು ಹೇಗೆ ಸಾಧ್ಯ ? ತಾವು ಸ್ವಲ್ಪ ಹೊತ್ತು ತಾಳ್ಮೆಯಿಂದ ಉತ್ತರವನ್ನು ಕೇಳಬೇಕು. ಉತ್ತರವನ್ನೇ ಕೇಳುವುದಿಲ್ಲವೆಂದರೆ ಹೇಗೆ ?

ಶ್ರೀ ಹೆಚ್.ಡಿ. ರೇವಣ್ಣ : ಹಾಲಿ Judge ಕೊಟ್ಟಿರುವ report ಮೇಲೆ ಒಬ್ಬ retaired Judge enquiry ಮಾಡುವುದಕ್ಕೆ ಅವಕಾಶ ಇದೆಯೇ ? ಹಾಲಿ Judge ಕೊಟ್ಟಿರುವ ಆದೇಶದ ಕಾಪಿಯನ್ನು ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ಏಕೆ ಈ ತರಹ ಚೀರುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲವಲ್ಲ.

ಅಧ್ಯಕ್ಷರು : ಆಯಿತು, ಅವರ ಉತ್ತರವನ್ನು ಕೇಳಿ, ಆನಂತರ clarification ಏನು ಬೇಕಾದರೂ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಸದನದಲ್ಲಿ announce ಮಾಡುವುದಕ್ಕೆ ಮುಂಚೆ. ..

ಅಧ್ಯಕ್ಷರು : ನೀವು ಈ ತರಹ ಮಧ್ಯೆ ಮಧ್ಯೆ ಹೇಳುವುದು ಸರಿ ಕಾಣುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ತಾವು ಈ ತರಹ one side ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ತಾವು ಹಿರಿಯ ಸದಸ್ಯರು ಈ ರೀತಿ ಮಧ್ಯೆ ಮಧ್ಯೆ interfere ಆದರೆ ಹೇಗೆ ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಮುಖ್ಯಮಂತ್ರಿಗಳ ಪರವಾಗಿ ನಿಂತುಕೊಳ್ಳಬೇಕಾಗಿಲ್ಲ. ಮೋಹನ್ ಕುಮಾರ್ ಅವರು retired judge...

ಅಧ್ಯಕ್ಷರು : ಸರಿ ಅವರು ಹೇಳಿದ ಮೇಲೆ ನೀವು ಕೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. ಈ ರೀತಿಯೇ ಉತ್ತರವನ್ನು ಕೊಡಬೇಕೆಂದು ಅವರಿಗೆ insist ಮಾಡುವುದಕ್ಕಾಗುವುದಿಲ್ಲ. clarification ಕೇಳುವುದಕ್ಕೆ ಹೇಳಿ. ಇದಕ್ಕೆ

clarification ಕೊಟ್ಟಿಲ್ಲವೆನ್ನುವುದನ್ನು ಕೇಳಿ. ನನಗೆ ಬೇಕಾದ ರೀತಿಯಲ್ಲೇ ಉತ್ತರ ಕೊಡಬೇಕೆಂದರೆ ಹೇಗೆ ?

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಬೇಕಾದ ರೀತಿಯಲ್ಲಿ ಉತ್ತರ ಕೊಡಿ ಎಂದು ಹೇಳುತ್ತಿಲ್ಲ. ಅವರು ಹೇಳುತ್ತಿರುವುದನ್ನು ನಾವು ಇಲ್ಲಿ ನೋಡುತ್ತಿಲ್ಲವೇ? ಉದಾಹರಣೆಗೆ MMTC ದು ಏನು ಹೇಳಿದರು ? ತನಿಖೆ ಮಾಡುತ್ತಿದ್ದೇವೆ ಎಂದು ಹೇಳಿದರು. ಮುಖ್ಯಮಂತ್ರಿಗಳೇ ನೇರವಾಗಿ involve ಆಗಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಬೇಕಾದರೆ ದಾಖಲೆಯನ್ನು ಇಲ್ಲೇ ಕೊಡುತ್ತೇನೆ.

ಶ್ರೀ ಆರ್. ಅಶೋಕ್ : ಮೊದಲು ಅವರು ಏನು ಹೇಳುತ್ತೀದ್ದಾರೆ ಎನ್ನುವುದನ್ನು ಕೇಳಿ ಆನಂತರ ತಾವು ಮಾತನಾಡಿ.

ಅಧ್ಯಕ್ಷರು : ಆಯಿತು, ಆಮೇಲೆ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ನಿಮಗೆ ಏನೇನು ಬೇಕೂ ಅದನ್ನೆಲ್ಲಾ ಆಮೇಲೆ enquiry ಎಂದು ಹೇಳುವುದಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಬೆಳಿಗ್ಗೆ ಮಾನ್ಯ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಇಂಧನದ ಬಗ್ಗೆ, ಇಲ್ಲೇ ಸಿದ್ದರಾಮಯ್ಯನವರು ಇದ್ದಾರೆ ಬೆಳಿಗ್ಗೆ ಏನು ರೂಲಿಂಗ್ ಕೊಟ್ಟಿದ್ದಾರೆ ?

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮೋಹನ್ ಕುಮಾರ್ ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಸಾರ್. ಒಂದು ಗಂಟೆ ಇಲ್ಲದಿದ್ದರೆ ಎರಡು ಗಂಟೆ ಕೊಡಿ ಅವಕಾಶ ಕೊಡಿ. ಚರ್ಚೆ ಮಾಡಲು ರೆಡಿ ಇದ್ದೇನೆ. Law Minister ರವರೇ ಬೆಳಿಗ್ಗೆ ತಾವೇನು ಹೇಳಿದಿರಿ? ಸಿದ್ದರಾಮಯ್ಯನವರು ನಿಲುವಳಿ ಸೂಚನೆ ಕೊಟ್ಟಿರುವುದು ನಿಯಮ 69ರಡಿಯಲ್ಲಿ, ರಾಜ್ಯದಲ್ಲಿ ಇಂಧನ ಸಮಸ್ಯೆಯ ಬಗ್ಗೆ ಎಂದು ತಾವು ಹೇಳಿ ಈಗ ಮೋಹನ್ ಕುಮಾರ್ enquiry ಗೆ ಹೋಗುತ್ತಿದ್ದೀರಿ. ನಾಚಿಕೆಯಾಗಬೇಕು Law Minister ಅವರಿಗೆ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಕೊಡುವುದು ಆಗಲಿ, ಆನಂತರ ತಾವು ಕೇಳಿ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ನೀವು ಆರೋಪ ಮಾತ್ರ ಮಾಡಬಹುದು, ಅವರು ವಿವರಣೆಯನ್ನು ಕೊಡುವುದು ಕೇಳಬಾರದೇ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಕಟ್ಟಾ ಸುಬ್ರಮಣ್ಯನಾಯ್ಡು ಅವರೆ, ಬೆಳಿಗ್ಗೆ Law Minister ಅವರೆ ಹೇಳಿದ್ದಾರೆ, ಅವರು ಏನು ಹೇಳಿದ್ದಾರೆ ಎನ್ನುವುದನ್ನು ಕೇಳಿ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ನೀವು hit and run case ಮಾಡುವುದಲ್ಲ. ಅವರು ಹೇಳುವುದನ್ನು ಕೇಳಿಸಿಕೊಳ್ಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : Hit and run case ಅಲ್ಲ, ಸ್ವಾಮಿ ದಾಖಲೆ ಸಮೇತ ಕೊಡುವುದಕ್ಕೆ ನಾನು ರೆಡಿ ಇದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಅವರೂ ದಾಖಲೆಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಅದನ್ನು ಐದು ನಿಮಿಷ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರೇವಣ್ಣನವರೆ, ನಾನು ನಿಮ್ಮ ಪ್ರಶ್ನೆಗಳಿಗೆ ಶಾಂತವಾಗಿ ಉತ್ತರವನ್ನು ಕೊಟ್ಟು ಹೋಗುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು discussion ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : Discussion ಇಲ್ಲದೇ, ತಾವು ಮೋಹನ್ ಕುಮಾರ್, ಮೋಹನ್ ಕುಮಾರ್ ಎಂದು ಭೂತ ಬಿಡುತ್ತಿದ್ದೀರಾ ? ನೀವು ಭೂತ ಬಿಡುವುದಕ್ಕೆಲ್ಲಾ ನಾವು ಹೆದರುವುದಿಲ್ಲ.

ಶ್ರೀ ಎಸ್. ಸುರೇಶಕುಮಾರ್ : ಮೋಹನ್ ಕುಮಾರ್ ಎಂದು ಹೇಳಿದರೆ ನಿಮಗೆ ಏಕೆ ತೊಂದರೆಯಾಗುತ್ತದೆ ? ಒಂದು ನಿಮಿಷ ಕೇಳಿ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಆಧಾರವಿಲ್ಲದ ಆರೋಪ ಮಾಡಿದಾಗಲೂ ನಾವು ಸುಮ್ಮನೆ ಕುಳಿತುಕೊಂಡಿರಲಿಲ್ಲವೇ ?

ಶ್ರೀ ಹೆಚ್.ಡಿ. ರೇವಣ್ಣ : ಇದು KPTCL M.D. ಅವರು ಬರೆದಿರುವ ಪತ್ರವನ್ನು ತೆಗೆದುಕೊಂಡು ಓದಿ, ಮುಖ್ಯಮಂತ್ರಿಗಳು ಬರೆದಿರುವ letter, ಒಂದು ಸಲ ಓದಿ. ಈ ಪತ್ರವನ್ನು ನಾನು ಬರೆದಿಲ್ಲ.

ಶ್ರೀ ಆರ್. ಅಶೋಕ್ : ತಾವು ಹಿಂದಿನ ಸದನದಲ್ಲಿ ಹೇಳಿದ್ದೀರಿ.

ಅಧ್ಯಕ್ಷರು : ಆಯಿತು ಅದನ್ನು ಹೇಳಿದ್ದೀರಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ : ದಾಖಲೆ ಬೇಕಾದರೆ ಕೊಡುತ್ತೇನೆ ನೋಡಿ.

ಶ್ರೀ ಆರ್. ಅಶೋಕ್ : ಆಗಲೇ ಈ ವಿಷಯ ಪ್ರಸ್ತಾಪವಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ : ತನಿಖೆಗೆ ಕೊಟ್ಟಿದ್ದೇನೆ ಎಂದು ಹೇಳಿದರೆ, ಹಾಗಾದರೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಉಮೇಶ್ ವಿ. ಕತ್ತಿ : ಈ ರೀತಿ ಪದೇ ಪದೇ ಎದ್ದರೆ ಏನು ಮಾಡುವುದು? ಒಬ್ಬ ಶಾಸಕಾಂಗ ಪಕ್ಷದ ನಾಯಕರ ವರ್ತನೆ ಹೇಗಿರಬೇಕು? ಪದೇ ಪದೇ ಏಳುವುದು ಸರಿಯಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇವರು ಕೇಳಬೇಕು. ಆನಂತರ ಪ್ರಶ್ನೆಯನ್ನು ಕೇಳುವುದಾದರೆ ಕೇಳಿ ಅದರಲ್ಲಿ ತೊಂದರೆ ಏನಿದೆ ?

(ಗೊಂದಲ)

ಶ್ರೀ ಸುರೇಶ್‌ಗೌಡ : ಇವರು ಮಾತನಾಡುವುದೆಲ್ಲಾ ಮಾತನಾಡಬೇಕು, ಮುಖ್ಯಮಂತ್ರಿಗಳ ಉತ್ತರ ಕೇಳುವುದಿಲ್ಲ ಎಂದರೆ ಯಾವ ನ್ಯಾಯ ? ಮುಖ್ಯಮಂತ್ರಿಗಳು ಉತ್ತರ ಹೇಳುವುದನ್ನು ಕೇಳಿಸಿಕೊಳ್ಳಬಾರದೇ?

ಶ್ರೀ ಅಧ್ಯಕ್ಷರು : ಮಾನ್ಯ ಸುರೇಶ್‌ಗೌಡರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ನಿಯಮ 69 ರಡಿ ಇದನ್ನು ಚರ್ಚೆ ಮಾಡಿ.

ಅಧ್ಯಕ್ಷರು : ಆಯಿತು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಗೊಂದು ನನಗೊಂದು ನಿಯಮ ತರಬೇಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಚರ್ಚೆ ಮಾಡಲು ಪೂರ್ತಿ ರೆಡಿ ಇದ್ದೇನೆ.

ಅಧ್ಯಕ್ಷರು : ತಾವು ಹಿರಿಯ ಸದಸ್ಯರಿದ್ದೀರಿ ಯಾವುದನ್ನು ಯಾವುದರಲ್ಲಿ ತರಬೇಕೆನ್ನುವುದು ಗೊತ್ತಿರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : Law Minister ಬೆಳಿಗ್ಗೆ ಏನು ಹೇಳಿದ್ದಾರೆ ಅದನ್ನು ಕಡತದಿಂದ ತರಿಸಿ ನೋಡಿ. ಅವರು ಏನು ಹೇಳಿದ್ದಾರೆಂದರೆ ....

ಅಧ್ಯಕ್ಷರು : ನೀವು ಈ ರೀತಿ ಮಾತನಾಡುವುದಾದರೆ ಯಾವುದೂ ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡದಿದ್ದರೆ ಬೇರೆ ರೀತಿಯಲ್ಲಿ ಕೊಡಿ ಎಂದು ಹೇಳಿದ್ದೀರಿ. ಬೇರೆ ರೀತಿಯಲ್ಲಿ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ಉಮೇಶ್ ವಿ. ಕತ್ತಿ : ಉತ್ತರ ಕೊಡದೇ ಹೇಗೆ clarification ಕೇಳುವುದು ಎನ್ನುವುದನ್ನು ಮೊದಲು ಹೇಳಿ. ಉತ್ತರ ಕೊಡಲಿ ನಂತರ clarification ಕೇಳಿ. ಉತ್ತರ ಕೊಡದೇ clarify ಮಾಡಿ ಎಂದರೆ ಹೇಗೆ clarify ಮಾಡುವುದು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರಿಗೆ ಮಾತನಾಡಲು ಅವಕಾಶ ಕೊಡದೇ ಇದ್ದರೆ ಹೇಗೆ ?

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಮೊದಲು ಉತ್ತರ ಕೇಳಲಿ ನಂತರ clarification ಕೇಳಲಿ.

ಒಬ್ಬ ಮಾನ್ಯ ಸದಸ್ಯರು : ನಾನು ಕೇಳುವುದಕ್ಕೆ ಉತ್ತರ ಕೊಡಲಿ ಎಂದರೆ ಹೇಗೆ ?

ಅಧ್ಯಕ್ಷರು : ದಯವಿಟ್ಟು ನೀವು ಕುಳಿತುಕೊಳ್ಳಿ, ಅವರು ಕುಳಿತುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಎಂ.ಎ.ಎಂ. ರಾಮಸ್ವಾಮಿ ಹಾಗೂ ಇವರ ಸಂಬಂಧ ಏನು ಎನ್ನುವುದನ್ನು ಹೇಳುತ್ತೇನೆ ಎನ್ನುವ ಭಯ ಅವರಿಗೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಲ್ಲಿದ್ದಲು ಖರೀದಿ ಕುರಿತು ರೇವಣ್ಣನವರ ಹೇಳಿಕೆ ಸತ್ಯಕ್ಕೆ ದೂರವಾದದ್ದು, ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ KPC ವತಿಯಿಂದ ಆಮದು ಮಾಡಿಕೊಳ್ಳುವಂಥ ವಿಷಯದಲ್ಲಿ ನಾನು ನಿರ್ದೇಶನ ನೀಡಿದ್ದರಿಂದ ಆ ಕಂಪನಿಗೆ ಹಾಗೂ ಸರ್ಕಾರಕ್ಕೆ 477 ಕೋಟಿ ನಷ್ಟವಾಗಿದೆ ಎಂದು ಮಾನ್ಯ ರೇವಣ್ಣನವರು ಆಪಾದಿಸಿದ್ದಾರೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರು ಮಾತನಾಡಲು ಪುನಃ ಎದ್ದು ನಿಂತರು)

ಅಧ್ಯಕ್ಷರು : ರೇವಣ್ಣನವರೆ, ಮುಖ್ಯಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ನೀವು ಅವಕಾಶ ನೀಡುತ್ತಿಲ್ಲವಲ್ಲ, ದಯಮಾಡಿ ಕುಳಿತುಕೊಳ್ಳಿ.

Sri B.S. Yediyurappa : There is a limit for everything.

ಅಧ್ಯಕ್ಷರು : ಇದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವುದಕ್ಕಿಂತಲೂ ಮುಂಚಿತವಾಗಿಯೇ ಎದ್ದು ನಿಂತುಕೊಂಡರೆ ಹೇಗೆ ? ಅವರ ಆರೋಪದಲ್ಲಿ ಹುರುಳಿಲ್ಲ. ಸತ್ಯಾಂಶವಿಲ್ಲ. ನನ್ನ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಅಂದರೆ, ದಿನಾಂಕ: 28.3.2008ರಂದು ಕೆಪಿಸಿಎಲ್ ಕಂಪನಿಯು 6 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲ್ಲನ್ನು ಆಮದು ಮಾಡಿಕೊಳ್ಳುವುದಕ್ಕೆ ಆದೇಶಿಸಲಾಗಿತ್ತು. ಶಿವಕುಮಾರ್‌ರವರೆ, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 12 ಕಂಪನಿಗಳು ಭಾಗವಹಿಸಿದ್ದವು. ಅವುಗಳ ಪೈಕಿ ನಾಲ್ಕು ಕಂಪನಿಗಳು ಎಲ್ಲಾ ಷರತ್ತುಗಳನ್ನು ಪೂರೈಸಿದ್ದವು. ಈ ನಾಲ್ಕರಲ್ಲಿ ಮೂರು ಕಂಪನಿಗಳು ಅಂತಿಮವಾಗಿ financial bid ಸಲ್ಲಿಸಿದ್ದವು. ಆ ಮೂರರಲ್ಲಿ Bhatia International Company ಯು ಅತ್ಯಂತ ಕಡಿಮೆ ದರ ನಿಗದಿಪಡಿಸಿತ್ತು. L–1 ಅವರದಾಗಿತ್ತು. ಅಂದರೆ, ಪ್ರತಿ ಟನ್ನಿಗೆ 7,967 ರೂ. ದರ ನೀಡಿತ್ತು. ಅದನ್ನು ಮಾತುಕತೆ ಮೂಲಕ ಇನ್ನಷ್ಟು ಕಡಿಮೆ ಮಾಡಬೇಕೆಂದು ಹೇಳಿದ್ದೆವು. ಆ ಪ್ರಕಾರ ನಡೆದ ಮಾತುಕತೆಯಲ್ಲಿ ಸದರಿ ಕಂಪನಿಯು ಪ್ರತಿ ಟನ್ನಿಗೆ 68 ರೂ.ಗಳಷ್ಟು ರಿಯಾಯಿತಿ ನೀಡಿತು. ಹೀಗೆ ಕಡಿಮೆ ಮಾಡಿದ್ದರಿಂದ ಕೆಪಿಸಿಎಲ್‌ಗೆ ಸುಮಾರು 4 ಕೋಟಿ 8 ಲಕ್ಷ ರೂ. ಉಳಿತಾಯವಾಯಿತು, ಮತ್ತು ಪ್ರತಿ ಟನ್ನಿಗೆ 7,899 ರೂ.ಗಳೆಂದು ನಿಶ್ಚಯವಾಯಿತು. ಆ ದರದಲ್ಲಿ 6 ಲಕ್ಷದಷ್ಟು ಅಂದರೆ, 15 ಪರ್ಸೆಂಟ್‌ನಷ್ಟು ಪೂರೈಸುವುದಕ್ಕೆ Bhatia International Companyಗೆ ದಿನಾಂಕ: 12.8.2008ರಂದು ಆದೇಶ ನೀಡಿದೆವು. ಆ ಪ್ರಕಾರ ಕಂಪನಿಯು ಕಲ್ಲಿದ್ದಲನ್ನು ಪೂರೈಕೆ ಮಾಡಿತು.

ಆದರೆ, ಇದೇ Bhatia International Companyಯು ಪಕ್ಕದ ಆಂಧ್ರಪ್ರದೇಶಕ್ಕೆ ಟನ್ನಿಗೆ 9,165 ರೂ.ನಂತೆ ಸಪ್ಲೈ ಮಾಡುತ್ತಿದೆ ! ನಾವು ಕೊಟ್ಟಿದ್ದು 7,899 ರೂ. ಇದೇ Bhatia International Companyಯಿಂದ ಆಂಧ್ರಪ್ರದೇಶ ಸರ್ಕಾರವು ಟನ್ನಿಗೆ 9,165 ರೂ.ಗಳಂತೆ ಕಲ್ಲಿದ್ದಲನ್ನು ಖರೀದಿಸುತ್ತಿದೆ. ಇದರ ದಿನಾಂಕ: 12.8.2008, ಅಂತಿಮ ಪ್ರಮಾಣದ ಕಲ್ಲಿದ್ದಲ್ಲನ್ನು ಪೂರೈಸುವ ಮೊದಲು ದಿನಾಂಕ 17.4.2009, ಅಂದರೆ, 8 ತಿಂಗಳ ನಂತರ ಕೆಪಿಸಿಎಲ್ ವತಿಯಿಂದ ಗರಿಷ್ಠ ಪ್ರಮಾಣದಲ್ಲಿ 6 ಲಕ್ಷ

ಟನ್‌ಗಳಷ್ಟು ಅಂದರೆ, ಶೇಕಡ 15ರಷ್ಟು ಖರೀದಿಸಿ ಕೇವಲ 5 ಲಕ್ಷ 10 ಸಾವಿರ ಟನ್‌ಗಳಷ್ಟು ಮಾತ್ರ ಪೂರೈಸಿ ಟೆಂಡರ್ ಪೂರ್ಣಗೊಳಿಸಿ Bhatia International Companyಗೆ ತಿಳಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಕಂಪನಿಯು ಪತ್ರವೊಂದನ್ನು ಬರೆದು, ತಾನು ಈಗಾಗಲೇ ಕೆಪಿಸಿಎಲ್‌ನಿಂದ ಪಡೆದ ಆದೇಶದಿಂದ 6 ಲಕ್ಷ ಟನ್ ಅಲ್ಲದೆ, 15 ಪರ್ಸೆಂಟ್‌ನಷ್ಟು ಹೆಚ್ಚುವರಿ ಪ್ರಮಾಣದ ಕಲ್ಲಿದ್ದಲ್ಲನ್ನು ಪೂರೈಸುವುದಕ್ಕೆ ಅಂತರರಾಷ್ಟ್ರೀಯ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಂತೆ ಮತ್ತು ಕೆಪಿಸಿಎಲ್‌ಗೆ ಸಂಬಂಧಿಸಿದಂತೆ ಅದು fixed rate tender ಆಗಿದ್ದರಿಂದ, ಆ ಟೆಂಡರ್ ಪ್ರಮಾಣದಲ್ಲಿಯೇ ಕಡಿಮೆ ಮಾಡಿದ್ದರಿಂದ ತಮಗೆ ಹಾನಿಯಾಗಿದೆಯೆಂದು ತಿಳಿಸುತ್ತಾ, ಮೂಲ ಆದೇಶದಲ್ಲಿ ತಿಳಿಸುವಂತೆ ವಿನಂತಿ ಮಾಡಿತು.

ಈ ಮಧ್ಯ ವಿದ್ಯುತ್ ಬೇಡಿಕೆ ಹೆಚ್ಚಾಗಿದ್ದು, ನಮ್ಮ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿತ್ತು ಮತ್ತು ಹೆಚ್ಚು ಪ್ರಮಾಣದಲ್ಲಿ ಕಲ್ಲಿದ್ದಲ್ಲನ್ನು ಪಡೆಯುವ ಅವಶ್ಯಕತೆಯೂ ಉಂಟಾಗಿತ್ತು. ಅದಕ್ಕೋಸ್ಕರ, ಕೆಪಿಸಿಎಲ್ ಮೂಲಕ ಮೂಲ ಆದೇಶದಲ್ಲಿ ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಕಲ್ಲಿದ್ದಲ್ಲನ್ನು ಖರೀದಿಸಿರುವುದು ಸೂಕ್ತವೆಂದು ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ದಿನಾಂಕ: 18.7.2008ರಂದು ತಿಳಿಸಲಾಗಿತ್ತು. ಅದೇ ವಿಷಯವನ್ನು ದಿನಾಂಕ 22.4.2009ರಂದು ಬರೆದ ಪತ್ರದಲ್ಲಿ ಕೆಪಿಸಿಎಲ್‌ನ ಎಂ.ಡಿ. ಯವರಿಗೆ ತಿಳಿಸಿದೆ. ಈ ಪತ್ರದ ಹಿಂದೆ ಯಾವುದೇ ದುರುದ್ದೇಶವಿರಲು ಸಾಧ್ಯವಿಲ್ಲ. ಆದುದರಿಂದ, ಕೆಪಿಸಿಎಲ್ 5,30,677 ಟನ್‌ಗಳಷ್ಟು ಕಲ್ಲಿದ್ದಲು ಪೂರೈಕೆಯಾಗಿದೆ. ಪೂರೈಕೆಯಾಗದೆ ಕೇವಲ 68,300 ಟನ್‌ಗಳಷ್ಟು ಮಾತ್ರ ಬಾಕಿ ಇತ್ತು. ಇಷ್ಟು ಕಲ್ಲಿದ್ದಲನ್ನು ಹಿಂದೆ ನಿಗದಿಪಡಿಸಿದ ದರದಂತೆ ಖರೀದಿಸಿದರೆ ಕೆಪಿಸಿಎಲ್‌ಗೆ ಕೇವಲ 54.76 ಕೋಟಿ ಮಾತ್ರ ನೀಡಬಹುದಾಗಿತ್ತು. ಆದಾಗ್ಯೂ ಸದರಿ ದರದಲ್ಲಿ 200 ರೂ.ಗಳಷ್ಟು ದರವನ್ನು ಕಡಿಮೆ ಮಾಡಿಸಿ, 1.38 ಕೋಟಿ ರೂ. ಹಣವನ್ನು ಉಳಿತಾಯ ಮಾಡಿ ಈ ಖರೀದಿ ವ್ಯವಹಾರ ಮುಗಿಸಿದ್ದೇವೆ.

ಮೊದಲನೆಯದಾಗಿ, ಈ ಕಲ್ಲಿದ್ದಲು ವ್ಯವಹಾರದಲ್ಲಿ ಅನೇಕ ವರ್ಷಗಳಿಂದ ಅನೇಕ ರೀತಿಯ ಅವ್ಯವಹಾರಗಳು ಕೆಪಿಸಿಎಲ್‌ನಲ್ಲಿ ನಡೆದುಕೊಂಡು ಬರುತ್ತಿದೆ. ಅವುಗಳನ್ನು ಒಂದೊಂದಾಗಿ ಪತ್ತೆ ಹಚ್ಚಿ ದೊಡ್ಡ ಗಾತ್ರದ ಆನೆಯನ್ನು ನನ್ನ ಸರ್ಕಾರದ ಅವಧಿಯಲ್ಲಿ ತಡೆಯುವ ಪ್ರಯತ್ನ ಮಾಡಿದ್ದೇನೆ. ಅದಕ್ಕೋಸ್ಕರ ಇವತ್ತು ಜಸ್ಟೀಸ್ ಮೋಹನ್‌ಕುಮಾರ್ ಅವರಿಂದ ಎನ್‌ಕ್ವೇರಿ ನಡೆಸಲಾಗುತ್ತಿದೆ. Washing of coal ಬಗ್ಗೆ 36 ಪರ್ಸೆಂಟ್ ಹೆಚ್ಚಿಗೆ ಎಂಎಎಂ ರಾಮಸ್ವಾಮಿಯವರಿಗೆ ಕಲ್ಲಿದ್ದಲು ಕೊಟ್ಟಿರುವ ಬಗ್ಗೆ, ಕೆಪಿಟಿಸಿಎಲ್‌ನಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಿರುವ ಬಗ್ಗೆ ಈಗ ಎನ್‌ಕ್ವೇರಿ ನಡೆಯುತ್ತಿದೆ. ಸನ್ಮಾನ್ಯ ರೇವಣ್ಣನವರಿಗೆ ಒಂದು ಮಾತನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಎಂಎಎಂ ರಾಮಸ್ವಾಮಿ ಯಾರು ಸ್ವಾಮಿ ?

(ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರು ಮಾತನಾಡಲು ಎದ್ದು ನಿಂತರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ಮಾತನ್ನು ಪೂರ್ತಿಗೊಳಿಸುತ್ತೇನೆಂದರೂ ತಾವು ಕೇಳುವುದಿಲ್ಲವಲ್ಲ.

ಅಧ್ಯಕ್ಷರು : ಏನಿದ್ದರೂ ತಾವು (ರೇವಣ್ಣ) ಆಮೇಲೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ಮಾತುಗಳನ್ನು ಪೂರ್ತಿಗೊಳಿಸುತ್ತೇನೆ. ನಾನು ಎಲ್ಲಿಗೂ ಓಡಿ ಹೋಗುವುದಿಲ್ಲ. ನೀವು ಕೇಳಿದ್ದಕ್ಕೆಲ್ಲಾ ನಾನು ಉತ್ತರಿಸುತ್ತೇನೆ. ಎಲ್ಲಾ ದಾಖಲೆಗಳನ್ನೂ ನಿಮ್ಮ ಮುಂದೆ ತಂದಿಡುತ್ತೇನೆ. ಎಲ್ಲಾ ದಾಖಲೆಗಳನ್ನೂ ಅವರಿಗೆ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮೊದಲು ಉತ್ತರ ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಆನಂತರ ಉತ್ತರ ಕೊಡಲಿ, ಚರ್ಚೆಗೆ ಅವಕಾಶವೇ ಇಲ್ಲವಲ್ಲ. ಎಲ್ಲದಕ್ಕೂ ಉತ್ತರ ಕೊಟ್ಟುಕೊಂಡೇ ಹೋಗುತ್ತೇನೆಂದರೆ ಹೇಗೆ ? ಮೋಹನ್‌ಕುಮಾರ್ ಅವರನ್ನು ಮಾಡಿದ್ದೇನೆ, ಈ ಭೂತವನ್ನು ಬಿಡುತ್ತೇನೆ ಎಂದರೆ....

ಅಧ್ಯಕ್ಷರು : ಆಯಿತು, ಅನಂತರ ನೀವು ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಚರ್ಚೆ ಮಾಡಲಿ, ನಾವು ಚರ್ಚಿಸಲು ಸಿದ್ಧರಿದ್ದೇವೆ. ಚರ್ಚೆಯಾಗುವ ಮುನ್ನವೇ ಉತ್ತರ ಕೊಡುತ್ತೇನೆಂದರೆ ಹೇಗೆ? ನಾನು ನಿಯಮ 69ರಡಿ ಪ್ರಸ್ತಾಪಿಸಿದಾಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಮೋಹನ್‌ಕುಮಾರ್ ಅವರ ಹೆಸರು ಹೇಳಲಿಲ್ಲವೇ? ನನಗೇಕೆ ಗಾಬರಿ? ನನಗ್ಯಾವ ಗಾಬರಿಯೂ ಇಲ್ಲ. ಗಾಬರಿಯಾಗಿರುವುದು ಮುಖ್ಯಮಂತ್ರಿಗಳಿಗೆ, ನನಗಲ್ಲ. ಮುಖ್ಯಮಂತ್ರಿಗಳಿಗೆ ಗಾಬರಿ ಇಲ್ಲದಿದ್ದರೆ, ರಾಮಸ್ವಾಮಿಯವರು, ರೇವಣ್ಣನದು, ತಿಮ್ಮಣ್ಣನದು ಎಲವನ್ನೂ ಹೇಳಲಿ. ನೀವು ಪ್ರಾಮಾಣಿಕರು ತಾನೆ. ಹಾಗಿದ್ದರೆ, ಸಿಬಿಐಗೆ ಇದನ್ನು ವಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಎಂಎಎಂ ರಾಮಸ್ವಾಮಿಯವರು ರಾಜ್ಯಸಭಾ ಸದಸ್ಯರಾಗಿದ್ದರು.

ಶ್ರೀ ಹೆಚ್.ಡಿ. ರೇವಣ್ಣ : ಈ ಸಭೆಯಲ್ಲಿ ಇಲ್ಲದಿದ್ದವರ ಕುರಿತು ಚರ್ಚಿಸುವುದು ಬೇಡ.

(ಗೊಂದಲ)

ಅಧ್ಯಕ್ಷರು : ಅವರು ಟೆಂಡರ್‌ದಾರರು, ಹಾಗಾಗಿ, ಅವರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಎಂಎಎಂ ರಾಮಸ್ವಾಮಿಯವರಿಗೆ ಸಂಬಂಧಿಸಿದ South India Corporation Limited Company, ಅವರನ್ನು ರಾಜ್ಯಸಭೆ ಸದಸ್ಯರನ್ನಾಗಿ ಸಿದ್ದು ಸನ್ಮಾನ್ಯ ದೇವೇಗೌಡರು ಮತ್ತು ರೇವಣ್ಣನವರು.

(ಗೊಂದಲ)

ಅಧ್ಯಕ್ಷರು : ಅವರು ವಾಸ್ತವಿಕ ವಿಚಾರ ಹೇಳುತ್ತಿದ್ದಾರೆ. ತಾವು ಅನಂತರ ಉತ್ತರ ಕೊಡಿ. ಪ್ಲೀಸ್, ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಎಂಎಎಂ ರಾಮಸ್ವಾಮಿಯವರ ಬಗ್ಗೆ ನನಗೆ ಗೌರವವಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಅವರ ಜೊತೆ ನಿಮ್ಮದೂ (ಮುಖ್ಯಮಂತ್ರಿ) ಸಂಪರ್ಕವಿದೆಯೆಂದೂ, ನೀವು ಅದನ್ನು ಹೇಳಬೇಕೆಂದು ಅವರು (ರೇವಣ್ಣ) ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಎಂಎಂ ರಾಮಸ್ವಾಮಿಯವರ ಬಗ್ಗೆ ಗೌರವವಿದೆ. ಆದರೆ, ರೇವಣ್ಣನವರಿಗೂ ರಾಮಸ್ವಾಮಿಯವರಿಗೂ ಇರುವಂತಹ ಸಂಬಂಧ ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಯಾವ ರೀತಿಯ ಸಂಬಂಧವೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಮತ್ತು ಇವರ ಸಂಬಂಧ ಎಷ್ಟು ಚೆನ್ನಾಗಿತ್ತು ಎಂದರೆ, ನಿಮಗೆ ಆಶ್ಚರ್ಯಕರ ಉದಾಹರಣೆ ನೀಡುತ್ತೇನೆ. ಸಿದ್ಧರಾಮಯ್ಯನವರೆ, ಬಿಜೆಪಿ ಪಕ್ಷದವರಾದ ನಾವು ಅಕ್ಟೋಬರ್ 3 ರಂದು ಬೆಂಬಲ ವಾಪಸ್ಸು ತೆಗೆದುಕೊಂಡೆವು. ರೇವಣ್ಣನವರು ಅಕ್ಟೋಬರ್ 6ನೇ ತಾರೀಖು, ಅಂದರೆ, ನಾವು ಬೆಂಬಲ ವಾಪಸ್ಸು ತೆಗೆದುಕೊಂಡ 3 ದಿನಗಳ ನಂತರ 36 ಪರ್ಸೆಂಟ್ ಹೆಚ್ಚಿಗೆ ದರ ನಿಶ್ಚಯಿಸಿ ಎಂಎಂ ರಾಮಸ್ವಾಮಿ ಯವರಿಗೆ ಈ ಕಲ್ಲಿದ್ದಲನ್ನು ಸಪ್ಲೈ ಮಾಡುವುದಕ್ಕೆ ಟೆಂಡರ್ ಕೊಟ್ಟರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನನ್ನ ವಿಚಾರವನ್ನೂ ಸಿಬಿಐಗೆ ರೆಫರ್ ಮಾಡಲಿ, ಅವರ ವಿಚಾರವನ್ನೂ ಸಿಬಿಐಗೆ ರೆಫರ್ ಮಾಡಲಿ. ಚರ್ಚೆ ಮಾಡಲಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿ. ನಾನು 36 ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದೇನೆ ಎನ್ನುವುದಾದರೆ, ಆಮೇಲೆ ಸರ್ಕಾರ ಬಂದಾಗ ಏನಾಯಿತು? ಅವರು ಏಳು ದಿವಸಗಳಾದ ಬಳಿಕ ಮಾಡಿದರು ಎಂದು ಹೇಳಿದರಲ್ಲ, ರಾಜ್ಯಪಾಲರು ಬಂದ ನಂತರ ಕುಮಾರಸ್ವಾಮಿಯವರು ಮಾಡಿದ ಮೂರು ತಿಂಗಳ ಆದೇಶವನ್ನು ರದ್ದುಗೊಳಿಸಿದ್ದೇವೆಂದು ಹೇಳಿದ್ದಾರೋ, ಇಲ್ಲವೋ ಎಂಬುದನ್ನು ಕಡತ ತೆಗೆದು ನೋಡುವುದಕ್ಕೆ ದಯಮಾಡಿ ಮುಖ್ಯಮಂತ್ರಿಗಳಿಗೆ ಹೇಳಿ, ಮುಖ್ಯಮಂತ್ರಿಗಳು ಸದನವನ್ನು ತಪ್ಪು ದಾರಿಗೆಳೆಯಬಾರದು.

ಅಧ್ಯಕ್ಷರು : ಪ್ರತಿ ಉತ್ತರಕ್ಕೂ ಹೀಗೇ ಎದ್ದು ನಿಂತು ಮಾತನಾಡಿದರೆ ಹೇಗೆ ? ಪ್ಲೀಸ್, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇವರು ಏನು ಪುಣ್ಯ ಕೆಲಸ ಮಾಡಿದರು ಎಂದರೆ, ಅಕ್ಟೋಬರ್ 2007ರಂದು ಸಪ್ಲೈ ಆರ್ಡರ್ ಕೊಟ್ಟರಲ್ಲ, ಒರಿಸ್ಸಾದ ತಾಲ್ಚೇರ್‌ನಿಂದ ರಾಯಚೂರಿಗೆ ನೇರವಾಗಿ ರೈಲಿನಲ್ಲಿ ಇದನ್ನು ತರಬಹುದಾಗಿತ್ತು. ಆದರೆ, ತಲಚೇರಿಯಿಂದ ಚೆನ್ನೈಗೆ ಹಡಗು ಮುಖಾಂತರ ತಂದು, ಚೆನ್ನೈನಿಂದ ರಾಯಚೂರಿಗೆ ರೈಲು ಮೂಲಕ ತರುವ ವ್ಯವಸ್ಥೆ ಮಾಡಿಕೊಂಡರು, ಪುಣ್ಯಾತ್ಮರು ! ಇದರಿಂದ 350 ಕಿ.ಮೀ. ದೂರ ಜಾಸ್ತಿ ಆಯಿತು, ನಿಧಾನ ಆಯಿತು, ಮಾನ್ಯ ಜಯಚಂದ್ರರವರೇ ಇದರಿಂದ ಕಂಪನಿಗೆ ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ಲಾಸ್ ಆಯಿತು. ಒಂದು ಟನ್‌ಗೆ ರೂ. 1400 ಇದ್ದುದು ರೂ. 2400 ಕೊಟ್ಟರು. ಅದಕ್ಕೇ ಎನ್‌ಕ್ವೈರಿಗೆ ಹಾಕಿರುವುದು. ಕಾಲ ಬಂದಾಗ ಎಲ್ಲರ ಬಣ್ಣ ಬಯಲಾಗುತ್ತದೆ. ಇಲ್ಲಿ ನಿಂತು ಮಾತನಾಡುವುದು ಬಹಳ ಸುಲಭ, ಯಾರು ಬೇಕಾದರೂ ಯಾರ ಮೇಲೆ ಬೇಕಾದರೂ ಆರೋಪ ಮಾಡಬಹುದು. KPCL ನ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಆರು ತಿಂಗಳುಗಳ ಕಾಲ ಎಂಎಂ. ರಾಮಸ್ವಾಮಿಯವರು ಸಾಗಣೆ ಮಾಡಲಿಲ್ಲ. ಅಧಕ್ಕೆ ಕಾರಣ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಡಗುಗಳ ಬಾಡಿಗೆ ಡಬ್ಬಲ್ ಆಯಿತು ಎಂದು ಸಾಗಾಟ ಮಾಡಬೇಕಾಗಿದ್ದ ಕಲ್ಲಿದ್ದಲನ್ನು ಸಾಗಾಣಿಕೆ ಮಾಡಲಿಲ್ಲ. Fixed rate tender ಆಗಿತ್ತು. ಹೆಚ್ಚಿನ ದರ ಕೇಳುವುದಕ್ಕೆ ಅವಕಾಶವಿರಲಿಲ್ಲ. 8 ಲಕ್ಷ ಟನ್ ಕಲ್ಲಿದ್ದಲು ಪರದಿಪ್ ಪೋರ್ಟ್‌ನಲ್ಲಿ ಬಾಕಿ ಹಾಗೆಯೇ ಬಿದ್ದಿತು. ಮಾನ್ಯ ರೇವಣ್ಣರವರು ನಾವು ಉದ್ದೇಶಪೂರ್ವಕವಾಗಿ ಸಾಗಾಣಿಕೆ ಮಾಡಲಿಲ್ಲವೆಂದು ಆಪಾದನೆ ಮಾಡುತ್ತಾರೆ. ನಾನು ಈ ಮನೆಯಲ್ಲಿ ಎಲ್ಲರ ಮುಂದೆ ಸತ್ಯವನ್ನು ಬಿಚ್ಚಿಟ್ಟಿದ್ದೇನೆ. ನಾವು ಟೆಂಡರ್ ರದ್ದು ಮಾಡಿದಾಗ ಸದರಿ ಕಂಪನಿಯವರು ತಡೆ ಆಜ್ಞೆ ತಂದರು. ಕಲ್ಲಿದ್ದಲನ್ನು ಬೇರೆಯವರಿಗೆ ಸಾಗಾಟ ಮಾಡಲಿಕ್ಕೆ ಸಮಯ ಹಿಡಿಯಿತು. ಅದಕ್ಕಾಗಿ ಹೆಚ್ಚಿನ ಕಲ್ಲಿದ್ದಲನ್ನು ಇಂಪೋರ್ಟ್ ಮಾಡಿಕೊಳ್ಳಬೇಕಾಗಿತ್ತು. ಜನತಾದಳದಲ್ಲಿ ತಾವು ರಾಮಸ್ವಾಮಿಯವರ ಜೊತೆ

ಇದ್ದುಕೊಂಡು ಈ ರೀತಿ ಇಷ್ಟು ದೊಡ್ಡ ದುಬಾರಿ ಬೆಲೆಯನ್ನು ಕೊಟ್ಟು ಒಂದು ಸಾವಿರ ರೂಪಾಯಿ ಒಂದು ಟನ್‌ಗೆ ಹೆಚ್ಚು ಕೊಟ್ಟು, ಒಪ್ಪಂದ ಮಾಡಿಕೊಂಡು, ಒಳ ಒಪ್ಪಂದ ಮಾಡಿಕೊಂಡು ವ್ಯವಹಾರ ಕುದುರಿಸಿಕೊಂಡು ಮಾಡಬಾರದ್ದನ್ನು ಮಾಡಿ ನನ್ನ ಮೇಲೆ ಆರೋಪ ಮಾಡುತ್ತಿದ್ದೀರಿ, ನಿಮಗೆ ದೇವರು ಒಳ್ಳೆಯದು ಮಾಡುತ್ತಾನಾ ಎಂದು ನಿಮಗೆ ಕೇಳುವುದಕ್ಕೆ ಇಷ್ಟು ಪಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅತ್ಯಂತ ವಿನಮ್ರತೆಯಿಂದ ಒಂದು ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ಧರಾಮಯ್ಯನವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹಳ ಸವಿಸ್ತಾರವಾಗಿ ಚರ್ಚೆ ಆಯಿತು. ವಿದ್ಯುತ್ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೀರಿ. ನಾವು ಶಾಶ್ವತವಾಗಿ ಏನೇನು ಮಾಡುವುದಕ್ಕೆ ಹೆಜ್ಜೆ ಇಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ. ದುಡ್ಡು ಎಷ್ಟು ಖರ್ಚಾದರೂ ಪರವಾಗಿಲ್ಲ, ಒಂದು ಸಾವಿರ ಮೆ.ವ್ಯಾ. ವಿದ್ಯುತ್ತನ್ನು ಇವತ್ತಿನಿಂದ ಖರೀದಿ ಮಾಡುತ್ತಿದ್ದೇವೆ. ಇಷ್ಟಿಷ್ಟು ಸಮಯ ವಿದ್ಯುತ್ ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ನೀವು ಇನ್ನೇನು clarification ಕೇಳಿದರೂ ಸಹ ನಾವು ಏನೇನು ಮಾಡುತ್ತಿದ್ದೇವೆಂದು ಮತ್ತೊಮ್ಮೆ ಅದೇ ಉತ್ತರವನ್ನು ನಾನು ನಿಮಗೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಅದರಲ್ಲಿ ಏನೂ ಮುಚ್ಚಿಡುವಂಥದ್ದು ಇಲ್ಲ. ನಿಮಗೆ ಏನು ಬೇಕು ಕೇಳಿ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಒಪ್ಪಂದ ಒಳಒಪ್ಪಂದ ಹೇಳಿದಿರಿ. ಒಪ್ಪಂದ ಯಾವುದು, ಒಳಒಪ್ಪಂದ ಯಾವುದು ಅದನ್ನಾದರೂ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ : ಕ್ಯಾಬಿನೆಟ್ ತೀರ್ಮಾನ ಏನು ಅದೂ ಹೇಳಲಿಲ್ಲ ನೀವು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕ್ಯಾಬಿನೆಟ್ ತೀರ್ಮಾನದ ಬಗ್ಗೆ ಏನೂ ಹೇಳಲಿಲ್ಲ. ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡಿ ಬಹುಮತ ಇಲ್ಲದೇ ಇದ್ದಾಗ ಕ್ಯಾಬಿನೆಟ್ ಮೀಟಿಂಗ್ ಮಾಡಿರುವುದು ಅಕ್ಷಮ್ಯ

ಅಪರಾಧ. ಇವರು ನಿಮಗೆ ಉಪದೇಶ ಮಾಡುವ ನೈತಿಕ ಹಕ್ಕು ಇಲ್ಲವೆಂದು ಹೇಳಿದೆ.

ಶ್ರೀ ಡಿ.ಕೆ. ಶಿವಕುಮಾರ್ : ನೀವು ಮೆಜಾರಿಟಿ ಕಳೆದುಕೊಂಡಿದ್ದರೋ, ನೀವು ವಾಪಸ್ ಹೋಗಿದ್ದರೋ ಗೊತ್ತಿಲ್ಲ, ಸರ್ಕಾರ ಇತ್ತು. ಆ ಸರ್ಕಾರದಲ್ಲಿ ಏನೇನು ತೀರ್ಮಾನ ಆಯಿತು ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು ನೆನ್ನೆ ನಿಲುವಳಿ ಸೂಚನೆ ಮೂಲಕ ಇವತ್ತು ಏನು ವಿದ್ಯುತ್ತಿನ ಕೊರತೆಯಿಂದಾಗಿ ರಾಜ್ಯದಲ್ಲಿ ಬಹಳ ಗಂಭೀರವಾದ ಸಮಸ್ಯೆ ಇದೆ, ಆ ವಿದ್ಯುತ್ತಿನ ಕೊರತೆಯಿಂದ ಇವತ್ತು ರೈತರು, ವಿದ್ಯಾರ್ಥಿಗಳು, ಕುಡಿಯುವ ನೀರಿನ ಸಮಸ್ಯೆ, ಕೈಗಾರಿಕೆಗಳು ನಮ್ಮ ರಾಜ್ಯಕ್ಕೆ ಬಂಡವಾಳ ಬರದೆ ಇರತಕ್ಕಂಥದ್ದು, ಜನ ಹಿಂದೇಟು ಹೊಡೆಯುತ್ತಿರತಕ್ಕಂಥದ್ದು ಇವೆಲ್ಲಾ ಸಮಸ್ಯೆ ಇವೆ. ಈ ವರ್ಷ ಒಂದೂ ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಡ್ರಿಲ್ ಮಾಡುವುದಕ್ಕೆ ಹೋಗಲಿಲ್ಲ. ಇವೆಲ್ಲಾ ಸಮಸ್ಯೆಗಳಿವೆ. ಕಳೆದ ಒಂದು ವರ್ಷದಿಂದ ಕೂಡ ಈ ಸಮಸ್ಯೆ ಬಹಳ ದೊಡ್ಡದಾಗಿದೆ. ಇತ್ತೀಚಿನ ದಿನಗಳಲ್ಲಿ ಇನ್ನು ಬಹಳ ಭೀಕರವಾಗಿದೆ. ನೀವು ಬೆಂಗಳೂರಿನಲ್ಲಿ ಒಂದು ಗಂಟೆ ಮಾತ್ರ ಲೋಡ್ ಶೆಡ್ಡಿಂಗ್ ಮಾಡುತ್ತೇವೆ ಎಂದು ಹೇಳಿ, ಸುಮಾರು 3, 4 ಮತ್ತು 5 ಗಂಟೆ ವರೆಗೆ scheduled, un-scheduled load shedding ಆಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಪರೀಕ್ಷೆಗೆ ಅಭ್ಯಾಸ ಮಾಡಿಕೊಳ್ಳುವುದಕ್ಕೆ ಬಹಳ ತೊಂದರೆಯಾಗಿದೆ. ನಿಮ್ಮ ಪ್ರಕಾರ ರಾಜ್ಯದಲ್ಲಿ 20 ಲಕ್ಷ ಪಂಪ್‌ಸೆಟ್‌ಗಳಿವೆ, 20 ಲಕ್ಷ ಪಂಪ್‌ಸೆಟ್‌ಗಳಿವೆ ಎಂದರೆ, ಒಂದು ಪಂಪ್‌ಸೆಟ್‌ಗೆ ಎರಡು ಎಕರೆ ಭೂಮಿಗೆ ನೀರು ಕೊಡುತ್ತದೆ ಎಂದರು ಕೂಡ 40 ಲಕ್ಷ ಎಕರೆ ಭೂಮಿಗೆ ನೀರು ಇಲ್ಲದ ಹಾಗಾಗುತ್ತದೆ. 40 ಲಕ್ಷ ಎಕರೆ ಭೂಮಿಗೆ ನೀರು ಇಲ್ಲದೆ ಇದ್ದರೆ, ಆ ಪ್ರಮಾಣದ ಆಹಾರೋತ್ಪಾದನೆ ಕಡಿಮೆ ಆಗುತ್ತದೆ. ರೈತರು ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಇದಕ್ಕೆ ಕೂಡಲೇ ಪರಿಹಾರ ಹುಡುಕುವ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಹೇಳಿ ನಾವು ಇವತ್ತು ಈ ವಿಷಯವನ್ನು ತಂದಿದ್ದೇವೆ. ಆದರೆ ನೀವು ನಾವು ಏನು ಮಾಹಿತಿಗಳನ್ನು

ಪಡೆದುಕೊಂಡಿದ್ದೇವೆ ಅದು ಬಿಟ್ಟರೆ ಈ ಪರಿಹಾರಕ್ಕೆ ಏನು ಮಾಡಬೇಕೆಂದು ಸರಿಯಾದ ಉತ್ತರ ಹೇಳಲಿಲ್ಲ. Admittedly, ಸಮಸ್ಯೆ ಇದೆ. ನೀವೇ ಹೇಳುತ್ತಿದ್ದೀರಿ ಪ್ರತಿ ವರ್ಷ ನಮಗೆ 10% ಡಿಮ್ಯಾಂಡ್ ಜಾಸ್ತಿಯಾಗುತ್ತಿರುತ್ತದೆ. ಹಾಗಾಗಿ ಡಿಮ್ಯಾಂಡ್ ಮೀಟ್ ಮಾಡುವುದಕ್ಕಾಗುತ್ತಿಲ್ಲ, ತೊಂದರೆ ಇದೆ ಎನ್ನತಕ್ಕಂಥದ್ದನ್ನು ಒಪ್ಪಿಕೊಳ್ಳುತ್ತೀರಿ. ಕಳೆದ ವರ್ಷ ನಾವು 2600 ಕೋಟಿ ರೂ. ಕೊಟ್ಟು ವಿದ್ಯುತ್ ಪರ್ಚೇಸ್ ಮಾಡಿದೆವು. ಚುನಾವಣೆ ಇತ್ತು ಅದಕ್ಕೋಸ್ಕರ ಮಾಡಿದೆವು, ಈ ವರ್ಷ ಕಳೆದ ತಿಂಗಳಲ್ಲಿ ನಾವು 280 ಮೆ.ವ್ಯಾ. ತೆಗೆದುಕೊಳ್ಳುವುದಕ್ಕೆ ಹೋಗಿದ್ದೇವೆಂದು ನೀವು ಹೇಳಿದ್ದೀರಿ. ಈಗ ಮತ್ತೆ ಮುಂದಿನ ತಿಂಗಳು ಒಂದು ಸಾವಿರ ಮೆ.ವ್ಯಾ. ವಿದ್ಯುತ್ತನ್ನು ತೆಗೆದುಕೊಳ್ಳುತ್ತಿದ್ದೇವೆ, ಅದಕ್ಕೋಸ್ಕರ 243 ಕೋಟಿ ರೂ. ಬೇಕಾದರೆ ನಾವು ಖರ್ಚು ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳುತ್ತಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು, ನೀವು ಏನೇನು ಹೇಳಿದಿರಿ, ಗುಂಡ್ಯಾ ಯೋಜನೆ, ಉಡುಪಿಯಲ್ಲಿರತಕ್ಕಂತಹ ಯೋಜನೆ, ಕೂಡ್ಲಿಗಿ ಯೋಜನೆ, ಬಳ್ಳಾರಿ 3rd ಯೂನಿಟ್, 8th Unit of Raichur, ಯಡ್ಲಾಪುರ, ಯರಮಾರಸ್ ಇವೆಲ್ಲಾ ನೀವು ಬಂದ ಮೇಲೆ ಒಂದೊಂದೇ MOU ಮಾಡಿಕೊಂಡಿದ್ದೀರಿ, ಇವೆಲ್ಲಾ ನಮ್ಮವೇ ಎಂದು ಉತ್ತರ ಕೊಟ್ಟಿದ್ದೀರಿ. ನೀವು ಬಂದ ಮೇಲೆ ಛತ್ತೀಸ್‌ಗಡ ಮಾತ್ರ ಒಂದು MOU ಮಾಡಿಕೊಂಡಿರುವುದು ಬಿಟ್ಟರೆ ಯಾವ MOU ಮಾಡಿಲ್ಲ. ಒಂದು ಆಫೀಸ್ ಮಾಡಿದ್ದೀರಿ. ವಿದ್ಯುತ್ ಬಂದಿದೆಯಾ ? ಬಿಜಾಪುರದ ಕೂಡಿಗೆ NTPC ಜೊತೆ ನೆನ್ನೆ ಆಯಿತಾ ? ನೀವು ಬಂದ ಮೇಲೆ ಮಾಡಿದ್ದೋ ಅದೂ ಹಿಂದೆಯೇ ಆಗಿತ್ತು. ಅದಕ್ಕೆ ಇನ್ನು ಲ್ಯಾಂಡ್ ಅಕ್ವೈರ್ ಆಗಿಲ್ಲಾ ಗೊತ್ತಾ ನಿಮಗೆ ? ಅದು ಆಗಲೇ ಆಗಿ ಹೋಯಿತೇ ? ನಿಮಗೆ ಆ ಉಡುಪಿಯಲ್ಲಿ 2006ನೇ ಇಸವಿಯಲ್ಲಿ ಆಗಿರುವುದು, ಇವತ್ತಿನವರೆಗೂ ನಿಮಗೆ ವಿದ್ಯುತ್ ಬಂದಿಲ್ಲ. ಅದಕ್ಕೆ ತಕರಾರು ಇದೆ. ಈ ಮಾರ್ಚ್‌ನೊಳಗೆ ಉಡುಪಿಯದ್ದು ಬರಬೇಕಾಗಿತ್ತು ಎಂದು ಹೇಳಿದಿರಿ, ಅದು ಬಂದಿದೆಯೇ ? 600 ಮೆಗಾವ್ಯಾಟ್ ವಿದ್ಯುತ್ ಬಂತೇ? ಮಾರ್ಚ್‌ನೊಳಗೆ 8th unit of Raichur ಬಂತೇ ? ಅದನ್ನು ನೀವೇ

ಮಾಡಿದಿರಾ? ಬಳ್ಳಾರಿಯಲ್ಲಿ 1st unit ನಿಂದ 500 ಮೆಗಾವ್ಯಾಟ್ ಬಂತು. ಅದನ್ನು ನೀವೇ ಮಾಡಿದಿರಾ? 2nd unit 1000 ಮೆಗಾವ್ಯಾಟ್‌ದ್ದು ನೀವೇ ಮಾಡಿದಿರಾ ? ನಾವು ದೀರ್ಘಾವಧಿಗಾಗಿ ಇದನ್ನೆಲ್ಲಾ ಮಾಡಿ, 2013–14ಕ್ಕೆ self sufficient ಮಾಡುತ್ತೇವೆಂದು ಹೇಳಿದಿರಲ್ಲಾ, ಇವೆಲ್ಲಾ ನಿಮ್ಮವೋ? ನಾನು ಬಂದ ಮೇಲೆ ಮಾಡಿದ್ದು ಎಂದು ಹೇಳಿಕೊಳ್ಳುತ್ತೀರಲ್ಲಾ! ಜನಗಳಿಗೆ wrong message ಹೋಗಬಾರದು. ಎಲ್ಲಾ ನಾವೇ ಮಾಡಿದ್ದೇವೆಂದು ಹೇಳಿಕೊಳ್ಳುವುದು ಸರಿಯಲ್ಲ. ನೀವು ಒಂದೇ ಒಂದು, ಛತ್ತೀಸ್‌ಗಡದ್ದು MOU ಮಾಡಿಕೊಂಡಿರುವುದು ಬಿಟ್ಟರೆ, ಇನ್ನಾವುದನ್ನೂ ಸಹ ನೀವು ಬಂದ ಮೇಲೆ ಮಾಡಿಲ್ಲ, ಅದಕ್ಕೆ ಒಂದು ರೂಪಾಯಿಯನ್ನೂ ಸಹ ಖರ್ಚು ಮಾಡಿಲ್ಲ. This is number one. ಉಳಿದವೆಲ್ಲಾ ನಗೆ ಗೊತ್ತಿರತಕ್ಕವೇ, ನೀವು ಬಂದ ಮೇಲೆ ಈ ವರ್ಷ 2008–09ರಲ್ಲಿ, ನೀವೇ ಹೇಳಿದಿರಿ, ನಮಗೂ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ನೀವು ಏನು ಹೇಳಿದ್ದೀರಿ ಎಂಬುದೆಲ್ಲವನ್ನೂ ಇಲ್ಲಿ ಓದಿದ್ದೀರಿ. 1999–2000ನೇ ಇಸವಿಯಲ್ಲಿ ಎಷ್ಟು ಮೆಗಾವ್ಯಾಟ್ add ಆಯಿತು? 2001ರಲ್ಲಿ ಎಷ್ಟಾಯಿತು ? 2001–02ರಲ್ಲಿ ಎಷ್ಟಾಯಿತು ? ಇದೆಲ್ಲಾ ಆದ ಮೇಲೂ ನಿಮಗೆ peak periodನಲ್ಲಿ 8900 ಮೆಗಾವ್ಯಾಟ್ ವಿದ್ಯುತ್ ಬೇಕು. ನಮ್ಮ ಹತ್ತಿರ peak period ನಲ್ಲಿ 5700 ಮೆಗಾವ್ಯಾಟ್ ಸಿಗುತ್ತಿದೆ. ಸುಮಾರು 3200 ಮೆಗಾವ್ಯಾಟ್ ನಮ್ಮ ಹತ್ತಿರವಿಲ್ಲ. ಈಗ 2009–10 ಮುಗಿಯಿತು. ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು. ನೀವು ಏನೆಂದು ಹೇಳಿದ್ದೀರಿ ? ನಾವು ಬಂದ ಮೇಲೆ 2008–09ರಲ್ಲಿ 1251 ಮೆಗಾವ್ಯಾಟ್ ವಿದ್ಯುತ್ ಅನ್ನು add ಮಾಡಿದ್ದೇವೆ. 1251 ಮೆಗಾವ್ಯಾಟ್ ಎಂದು ನಮಗೆ ಕೊಟ್ಟಿರುವ ಮಾಹಿತಿಯಲ್ಲಿ ತಿಳಿಸಿದ್ದಾರೆ. ಇದು ಯಾವಾಗ ಶುರುವಾಯಿತು ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿದ್ರಾಮಣ್ಣ ಈ ರೀತಿ ಮಾತನಾಡುವುದೇ ?

ಶ್ರೀ ಸಿದ್ದರಾಮಯ್ಯ : ಹೌದು, ಸಿದ್ರಾಮಣ್ಣನೇ ಮಾತನಾಡಬೇಕು. ಇನ್ಯಾರು ಮಾತನಾಡುತ್ತಾರೆ ? ಅವರು ಮಾತನಾಡುವುದಕ್ಕಾಗುತ್ತದೆಯೇ ?

ಅವರು ಬೇರೆ ತರಹ ಮಾತನಾಡುತ್ತಾರೆ, ನಾನು ಬೇರೆ ತರಹ ಮಾತನಾಡುತ್ತೇನೆ. ನಿಮಗೂ ಅವರಿಗೂ ಮಾತನಾಡುವುದು ಸರಿ ಹೋಗುತ್ತದೆ. ನಮಗೆ ಬೇರೆ ತರಹ ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಹವಾಸದಿಂದ ಈ ರೀತಿ ಮಾತನಾಡುತ್ತಿದ್ದೀರಿ ?

ಶ್ರೀ ಸಿದ್ದರಾಮಯ್ಯ : ನಿಮ್ಮಿಬ್ಬರ ಸಹವಾಸದಿಂದ ಏನಾಯಿತು ಎಂದು ನಮಗೆ ಗೊತ್ತಾಯಿತಲ್ಲ ? ದೇಶಕ್ಕೆ ಏನಾಯಿತು ? ರಾಜ್ಯಕ್ಕೆ ಏನಾಯಿತು? ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ ಬಿಡಿ. 2008–09ರಲ್ಲಿ 1251 ಮೆಗಾವ್ಯಾಟ್ ಆದಮೇಲೆ, ಈ ವರ್ಷ ನಾವು ಈಗಾಗಲೇ ಮಾರ್ಚ್ end ನಲ್ಲಿದ್ದೇವೆ, 1400 ಮೆಗಾವ್ಯಾಟ್ ಆದ ಮೇಲೆ ಒಟ್ಟು 2600 ಮೆಗಾವ್ಯಾಟ್ ಆಯಿತು. Then where is the problem ? ಎಲ್ಲಿ ಪ್ರಾಬ್ಲಂ ಇದೆ? ಏಕೆ ನೀವು ಕೇವಲ 6 ಗಂಟೆಗಳ ಕಾಲ ಸಹ ಕರೆಂಟ್ ಕೊಡಲಿಕ್ಕೆ ಆಗುತ್ತಿಲ್ಲ? more than 10% cover ಆಗಿ ಹೋಗಿದೆ. Why ಕತ್ತಲೆ ? ಏಕೆ ಇವತ್ತು ರಾಜ್ಯವನ್ನು ಕತ್ತಲೆ ಮಾಡಿದ್ದೀರಿ ? ಕಳೆದ ವರ್ಷ 1250 ಮೆಗಾವ್ಯಾಟ್, ಈ ವರ್ಷ 1400 ಮೆಗಾವ್ಯಾಟ್, ಒಟ್ಟು 2600 ಮೆಗಾವ್ಯಾಟ್ ಆಯಿತು. ನಿಮ್ಮ ಕೊರತೆಯೇ 2600 ಮೆಗಾವ್ಯಾಟ್ ಆಗಿದೆ. ಆದರೂ ಏಕೆ ಕತ್ತಲೆ? ಕರೆಂಟ್ high cost ಖರೀದಿ ಮಾಡಿದ್ದು ಎಲ್ಲಿ ಹೋಯಿತು? ಪಂಪ್‌ಸೆಟ್ಟುಗಳಿಗಾಗಿ ಕನಿಷ್ಟ 3 ಗಂಟೆ ಕೂಡ ರೈತರಿಗೆ ಸಿಕ್ಕಿಲ್ಲ. ಈ ಕರೆಂಟ್ ಎಲ್ಲಾ ಎಲ್ಲಿ ಹೋಯಿತು? Where it has gone ? ಜನರಿಗೆ ಅದು ತಲುಪಬೇಕಾಗಿತ್ತಲ್ಲವೇ ? ರಾತ್ರಿ ನೀವು 3 phaseನಲ್ಲಿ ಕೊಡುವುದು 6 ಗಂಟೆಯಿಂದ 8 ಗಂಟೆ ಅಥವಾ 10 ಗಂಟೆಯವರೆಗೆ ಆಗಬೇಕಾಗಿತ್ತಲ್ಲವೇ? 12 ಗಂಟೆಗಳ ಕಾಲ ಹಳ್ಳಿಗಾಡನ್ನು ಕತ್ತಲೆಯಲ್ಲಿ ಇಡುವುದರ ಬದಲು, ಅದರಲ್ಲಿ ಅರ್ಧ ಕಡಿಮೆ ಆಗಬೇಕಾಗಿತ್ತಲ್ಲವೇ ? ಈ ಮೆಗಾವ್ಯಾಟ್ ಎಲ್ಲಾ ಏನಾಯಿತು? ನಿಮ್ಮ ಪ್ರಕಾರ peak periodನಲ್ಲಿ ಒಂದು ವರ್ಷಕ್ಕೆ 51000 ಮಿಲಿನ್ ಯೂನಿಟ್ ವಿದ್ಯುತ್ ಬೇಕು. ಈಗ 44,500 ಮಿಲಿಯನ್ ಯೂನಿಟ್ ಉತ್ಪಾದನೆಯಾಗುತ್ತಿದೆ. ಅಂದ ಮೇಲೆ ನನ್ನ ಪ್ರಕಾರ 2600

ಮೆಗಾವ್ಯಾಟ್‌ಗೆ, 2.4 ಮಿಲಿಯನ್ ಯೂನಿಟ್ ಒಂದು ಮೆಗಾವ್ಯಾಟ್ add ಆದರೆ, ಕಡಿಮೆ ಆಗಿ ಹೋಯ್ತಲ್ಲಾ ಯಡಿಯೂರಪ್ಪನವರೆ, ಏಕೆ ಕತ್ತಲೆಯಲ್ಲಿದ್ದೀರಿ ?

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ...

ಶ್ರೀ ಸಿದ್ದರಾಮಯ್ಯ : ನೀವು ಕುಳಿತುಕೊಳ್ಳಿ, ಅವರು ಅದಕ್ಕೆ ಉತ್ತರ ಕೊಡುತ್ತಾರೆ. ನಿಮಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ನಾನು ನಿಮ್ಮ ಸಹಾಯಕ್ಕೆ ಬರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನನಗೆ ನಿಮ್ಮ ಸಹಾಯ ಬೇಡ. ನನಗೆ ಗೊತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ : ನೀವು ಲೆಕ್ಕ ತಪ್ಪು ಮಾಡಿದ್ದೀರಿ. ಅದಕ್ಕೆ ನಾನು ಹೇಳುತ್ತಿದೇನೆ.

ಶ್ರೀ ಸಿದ್ದರಾಮಯ್ಯ : ಇಲ್ಲ, ನನ್ನ ಲೆಕ್ಕದಲ್ಲೇನೂ ತಪ್ಪಿಲ್ಲ. ಅವರು ಉತ್ತರ ಹೇಳುತ್ತಾರೆ. ಅವರಿಗೆ ಲೆಕ್ಕ ಹೇಳಿಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ : 1300 ಈ ವರ್ಷ ಆಗುವುದು, ಅದನ್ನು ನೀವು ಈಗಾಗಲೇ ಬಂದಿದೆ ಎಂದು ತೆಗೆದುಕೊಂಡಿದ್ದೀರಿ. ಆಗಲೇ ಮಾನ್ಯ ಮುಖ್ಯಮಂತ್ರಿಗಳು demand 12% ಜಾಸ್ತಿಯಾಗಿದೆ ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : 1300 ಮೆಗಾವ್ಯಾಟ್ ಮಾರ್ಚ್ ತಿಂಗಳಿನೊಳಗೆ ಬಂದು ಬಿಡುತ್ತದೆಯೇ ?

ಶ್ರೀ ಬಸವರಾಜ ಬೊಮ್ಮಾಯಿ : ಇಲ್ಲ, 1300 ಮುಂದಿನ ವರ್ಷ ಬರುವುದನ್ನು ನೀವು ಈ ವರ್ಷಕ್ಕೆ ತೆಗೆದುಕೊಳ್ಳುತ್ತಿದ್ದೀರಿ. ಅದಕ್ಕಾಗಿ ಲೆಕ್ಕ ತಪ್ಪಾಗುತ್ತಿದೆ.

ಶ್ರೀ ಸಿದ್ದರಾಮಯ್ಯ : 2009–10 ಅಂದರೆ ಮುಂದಿನ ವರ್ಷ ಅಲ್ಲ...

ಶ್ರೀ ಬಸವರಾಜ ಬೊಮ್ಮಾಯಿ : 12% demand ಹೆಚ್ಚಾಗಿದೆ. ನೀವು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಿಮಗೆ ಅದೆಲ್ಲಾ ಗೊತ್ತಾಗುವುದಿಲ್ಲ. ನೀವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಈ mathematics ಎಲ್ಲಾ ಗೊತ್ತಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : Mathematics ನಿಮಗೆ ಗೊತ್ತಾಗಿಲ್ಲ, ಅದಕ್ಕೆ ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 2–3 firgures ನೀವು ವ್ಯತ್ಯಾಸ ಮಾಡಿದ್ದೀರಿ ?

ಶ್ರೀ ಸಿದ್ದರಾಮಯ್ಯ : ನೀವು ಕೊಟ್ಟಿರುವ figures ಅನ್ನೇ ನಾನು ಹೇಳುತ್ತಿದ್ದೇನೆ. ಇದು ಸರಿಯಲ್ಲ ಎಂದು ನೀವು ಹೇಳಿ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ನಿಮ್ಮ ಬಾಯನ್ನು ನಾನೇಕೆ ಮುಚ್ಚಿಸಲಿ ? ಇರುವುದನ್ನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೀವು ನನ್ನ ಬಾಯನ್ನು ಹೇಗೆ ಮುಚ್ಚಿಸಲಿಕ್ಕಾಗುತ್ತದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅಧಿಕಾರಕ್ಕೆ ಬಂದ ಮೇಲೆ, PTPS-3, Yeramaras MOU with BHEL, ಯಡ್ಲಾಪುರ, ಛತ್ತೀಸ್‌ಗಡ್ MOU with L & T, NTPC ಜೊತೆಗೆ MOU January 2009ನಲ್ಲಿ ಅಂದರೆ ಒಟ್ಟು 5 ಹೊಸ ಪ್ರಾಜೆಕ್ಟ್‌ಗಳಿಗೆ ನಾವು ಹೆಜ್ಜೆ ಇಟ್ಟು MOU ಮಾಡಿಕೊಂಡು ಮುಂದೆ ಹೋಗುತ್ತಿದ್ದೇವೆ. ಎರಡನೆಯದಾಗಿ, ನಾನು ನಿಮಗೆ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ನಾವು ಅಧಿಕಾರಕ್ಕೆ ಬಂದ ಮೇಲೆ 2008–09ನೇ ಸಾಲಿನಲ್ಲಿ 1252 ಮೆಗಾವ್ಯಾಟ್ ವಿದ್ಯುತ್ ಅನ್ನು ಹೊಸದಾಗಿ ಜಾಲಕ್ಕೆ ಸೇರ್ಪಡೆ ಮಾಡಿದ್ದೇವೆ. ಇದು ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿ ನೋಡಿದರೆ, ಒಂದು ವರ್ಷದಲ್ಲಿ ಅತ್ಯಂತ ಹೆಚ್ಚು ಮಾಡಿದ್ದೇವೆ. ಮುಂದಿನ ವರ್ಷ ಅಂದರೆ 2009–10ರಲ್ಲಿ 1300 ಮೆಗಾವ್ಯಾಟ್ ವಿದ್ಯುತ್ ಅನ್ನು ಹೊಸದಾಗಿ....

(ಈ ಹಂತದಲ್ಲಿ ವಿದ್ಯುತ್ ಕಡಿತವಾಗಿ ಸದನ ಕತ್ತಲಲ್ಲಿ ಮುಳುಗಿತು)

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೋಡಿ, ನೀವು ಹೇಳುವುದೆಲ್ಲಾ ಸುಳ್ಳು ಎನ್ನುವುದು ಈಗ ಸಾಬೀತಾಯಿತು. ನೀವು ಹೇಳುವುದೊಂದು, ಮಾಡುವುದು ಮತ್ತೊಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಯಾರೋ ರೇವಣ್ಣ ಶಿಷ್ಯನ ಕೈವಾಡ ಇದೆ ಎನಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತ ಇಲ್ಲವೇ? Government is more powerful.

ಶ್ರೀ ಬಿ.ಎಸ್. ಯಡಿಯೂರಪ್ಪ : ಆದರೆ ಅವರ influence ಎಲ್ಲಾ ಕಡೆಗೂ ಇದೆ. ನೀವು ಎಲ್ಲಿದ್ದೀರಿ? ಮುಂದಿನ ವರ್ಷ ಅಂದರೆ 2009–10ರಲ್ಲಿ 1300 ಮೆಗಾವ್ಯಾಟ್ ವಿದ್ಯುತ್ ಅನ್ನು ಹೊಸದಾಗಿ ಜಾಲಕ್ಕೆ ಸೇರ್ಪಡೆ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಮಾನ್ಯ ಸಿದ್ರಾಮಣ್ಣನವರು ಕೇಳಿಸಿಕೊಂಡರೂ, ಕೇಳಿಸಿಕೊಳ್ಳದಂತೆ ಇದ್ದರೆ ನಾನೇನು ಮಾಡಲಿ ?

ಶ್ರೀ ಸಿದ್ದರಾಮಯ್ಯ : ನೀವು ಹೇಳಿ, ನಾನು ಎಲ್ಲಾ ಕೇಳಿಸಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿರುವುದು ಏನೆಂದರೆ, ಈ 1ನೇ ತಾರೀಖಿನಿಂದಲೇ 1000 ಮೆಗಾವ್ಯಾಟ್ ವಿದ್ಯುತ್ ಅನ್ನು ಖರೀದಿ ಮಾಡುತ್ತಿದ್ದೇವೆ. ಎರಡನೆಯದಾಗಿ, ಇವತ್ತಿನಿಂದ ನಾವೇನು ವಿದ್ಯುತ್ ಅನ್ನು ಕೊಡುತ್ತೇವೆ ಎನ್ನುವುದನ್ನು ವಿವರವಾಗಿ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : 1000 ಮೆಗಾವ್ಯಾಟ್ ವಿದ್ಯುತ್ ಖರೀದಿ ಮಾಡುತ್ತಿದ್ದೇವೆಂದು ಹೇಳಿದಿರಿ. ಯಾರ್‍ಯಾರಿಂದ ಎಷ್ಟೆಷ್ಟು ವಿದ್ಯುತ್ ಖರೀದಿ ಮಾಡುತ್ತಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿವರಗಳನ್ನು ಕೊಡುತ್ತೇನೆ. ಜವಾಬ್ದಾರಿಯಿಂದ ನಿಂತು ಈ ಮಾತನ್ನು ಹೇಳುತ್ತಿದ್ದೇನೆ. ಜಿಂದಾಲ್ ಪವರ್‌ನಿಂದ 200 ಮೆಗಾವ್ಯಾಟ್ ವಿದ್ಯುತ್ ಪಡೆಯುತ್ತಿದ್ದೇವೆ. PTC ಯಿಂದ

450 ಮೆಗಾವ್ಯಾಟ್ ವಿದ್ಯುತ್, NTPC ಯಿಂದ barter ಅಂದರೆ ನಾವು ಮತ್ತೆ ವಾಪಸ್ ವಿದ್ಯುತ್ ಕೊಡುತ್ತೇವೆಂದು ಹೇಳಿ 100 ಮೆಗಾವ್ಯಾಟ್, ಇನ್ನು NTPC ಯಿಂದ 250 ಮೆಗಾವ್ಯಾಟ್ ಖರೀದಿ, ಹೀಗೆ ಒಟ್ಟು ದಿನಪ್ರತಿ 21 ಮಿಲಿಯನ್ ಯೂನಿಟ್‌ಗಳಷ್ಟು ಪ್ರಮಾಣದ ವಿದ್ಯುತ್ ಅನ್ನು ಮಾರ್ಚ್ ತಿಂಗಳಿನಲ್ಲಿ ನಾವು ಖರೀದಿ ಮಾಡುತ್ತಿದ್ದೇವೆ. ಮೇಲ್ಕಂಡ ಪ್ರಮಾಣದ ವಿದ್ಯುತ್ ಖರೀದಿಯಿಂದ ರಾಜ್ಯದಲ್ಲಿ ಈ ಕೆಳಗಿನ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡುತ್ತೇವೆಂದು ಈ ಸದನದಲ್ಲಿ ನಿಂತುಕೊಂಡು ಹೇಳುತ್ತಿದ್ದೇನೆ. ನಾಳೆಯಿಂದ ತಮ್ಮ ತಮ್ಮ ಏರಿಯಾಗಳಲ್ಲಿ ತಾವು ವಿಚಾರಿಸಿಕೊಳ್ಳಬಹುದು. ಎಲ್ಲರೂ ಕೂಡ ಈಗಾಗಲೇ ನನಗೆ ದೂರವಾಣಿ ಮೂಲಕ ಸಂಪರ್ಕ ಮಾಡಿ, ನಿನ್ನೆಯಿಂದ improve ಆಗಿದೆ ಎಂದು ಹೇಳುತ್ತಿದ್ದಾರೆ. ಬೆಂಗಳೂರು ನಗರಕ್ಕೆ 23 ಗಂಟೆ, ಇತರ ನಗರ & ಪಟ್ಟಣಗಳಿಗೆ 21 ಗಂಟೆ, ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ 6 ಗಂಟೆಗಳ ಕಾಲ 3 phase, 6 ಗಂಟೆಗಳ ಕಾಲ single phase, ಸಂಜೆ 7 ರಿಂದ 11 ಗಂಟೆಯವರೆಗೆ single phase ವಿದ್ಯುತ್ ಕೊಡುತ್ತೇವೆಂದು ಈ ಮನೆಯಲ್ಲಿ ಈ ನಾಡಿನ 6 ಕೋಟಿ ಜನರಿಗೆ ನಾನು ಭರವಸೆ ಕೊಡುತ್ತಿದ್ದೇನೆ. ಈ ಪ್ರಕ್ರಿಯೆ ನಿನ್ನೆಯಿಂದಲೇ ಪ್ರಾರಂಭವಾಗಿದೆ.

ಶ್ರೀ ಸಿದ್ದರಾಮಯ್ಯ : ಆಯಿತು, ಕುಳಿತುಕೊಳ್ಳಿ ಒಂದು ಯೂನಿಟ್‌ಗೆ ಎಷ್ಟು ರೇಟ್‌ನಲ್ಲಿ ಖರೀದಿ ಮಾಡುತ್ತಿದ್ದೀರಿ ಎಂಬುದನ್ನು ತಾವು ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನೂ ಸಹ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಯೂನಿಟ್‌ಗೆ 6–7 ರೂ.ಗಳಂತೆ ಖರೀದಿ ಮಾಡುತ್ತಿದ್ದೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗೆಲ್ಲಾ ಯದ್ವಾತದ್ವಾ ರೇಟ್‌ನಲ್ಲಿ ಖರೀದಿ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಯದ್ವಾತದ್ವಾ ರೇಟ್ ಕೊಟ್ಟಿಲ್ಲ ಎನ್ನುವುದಾದರೆ, reasonable rate ನಲ್ಲಿ purchase ಮಾಡುತ್ತಿದ್ದೀರಾ? ಅಂದರೆ ಯೂನಿಟ್‌ಗೆ 9 ರೂ.ಗಳ ದರ ಕೊಟ್ಟಿದ್ದೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಯೂನಿಟ್‌ಗೆ 9 ರೂ.ಗಳ ರೇಟ್‌ನಲ್ಲಿ ನಿಮ್ಮ ಕಾಲದಲ್ಲಿ ಕೊಟ್ಟಿರಬಹುದು. ನನ್ನ ಕಾಲದಲ್ಲಿ ಅಲ್ಲ.

ಶ್ರೀ ಸಿದ್ದರಾಮಯ್ಯ : ನನ್ನ ಕಾಲದಲ್ಲಿ ಕೊಟ್ಟಿಲ್ಲ. ನಿಮ್ಮ ಇಬ್ಬರ ಕಾಲದಲ್ಲಿ ಕೊಟ್ಟಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರೇವಣ್ಣನವರ ಕಾಲದಲ್ಲಿ ಎಷ್ಟು ಕೊಟ್ಟರೋ ಗೊತ್ತಿಲ್ಲ. ನನ್ನ ಕಾಲದಲ್ಲಿ ಎಷ್ಟು ಕೊಡುತ್ತಿದ್ದೇವೆ ಎಂಬುದನ್ನು ಹೇಳುತ್ತೇನೆ. GSW Power Trading Company ಯಿಂದ 200 ಮೆಗಾವ್ಯಾಟ್ 4.50 ರೂ.ಗಳ ದರದಲ್ಲಿ ಖರೀದಿಸುತ್ತಿದ್ದೇವೆ. ಮಾನ್ಯ ರೇವಣ್ಣನವರು ಈ ಬಗ್ಗೆ ಗಮನಿಸಬೇಕು. ತಮಗೂ ಈ ಬಗ್ಗೆ ಗೊತ್ತಿರಲಿ. PTC India Limited ನಿಂದ 250 ಮೆಗಾವ್ಯಾಟ್ 5.25 ರೂ.ಗಳ ದರದಲ್ಲಿ ಖರೀದಿಸುತ್ತಿದ್ದೇವೆ. PTC India Limited ನಿಂದ 200 ಮೆಗಾವ್ಯಾಟ್ 4.74 ರೂ.ಗಳ ದರದಲ್ಲಿ ಖರೀದಿಸುತ್ತಿದ್ದೇವೆ. NTPC, BGML, ಛತ್ತೀಸ್‌ಗಡ್‌ನಿಂದ 250 ಮೆಗಾವ್ಯಾಟ್ ಅನ್ನು 4.75 ರೂ.ಗಳ ದರದಲ್ಲಿ ಖರೀದಿ ಮಾಡುತ್ತಿದ್ದೇವೆ. ಈ ತರಹ 1000 ಮೆಗಾವ್ಯಾಟ್ ಅನ್ನು ನಾವು ಖರೀದಿ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಆಯಿತು, ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ಕುಳಿತುಕೊಳ್ಳುತ್ತಾರೆ ಬಿಡಿ. ನೀವೇನು ಹೇಳುವುದು ?

ಶ್ರೀ ಸಿದ್ದರಾಮಯ್ಯ : ನಾನು ನಿಂತಿರುವಾಗ ಅವರು ನಿಂತುಕೊಳ್ಳುವುದು ಬೇಡ ಎಂದು ಹಾಗೆ ಹೇಳಿದೆ. ನೀವು ಇಂಥಾದ್ದರಲ್ಲಿ ತಪ್ಪು ಹುಡುಕಿದರೆ ಹೇಗೆ ? ನಿಮಗೆ ಬೇರೆ ಏನು ಕಸಬು ಇಲ್ಲವೇ ? 'ನೀವು ಕುಳಿತುಕೊಳ್ಳಿ' ಎಂದರೆ ಏನಾಯಿತು ?

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಆಗನಿಂದಲೂ ನೋಡುತ್ತಿದ್ದೇನೆ. He is the Leader of the House. You are the Leader of Opposition. ನೀವು ಹೇಗೆ behave ಮಾಡುತ್ತೀರಿ ಎಂದು ಎಲ್ಲರೂ ಕೂಡ ನೋಡುತ್ತಿರುತ್ತಾರೆ. ಆಗನಿಂದಲೂ 'ನೀವು ಕುಳಿತುಕೊಳ್ಳಿ' ಎಂದು ಹೇಳುತ್ತಲೇ

ಇದ್ದೀರಿ. ಅವರು ನೀವು ಹೇಳಿದಾಗ ಕುಳಿತುಕೊಳ್ಳಬೇಕು, ನೀವು ಹೇಳಿದಾಗ ನಿಂತುಕೊಳ್ಳಬೇಕಾ ?

ಶ್ರೀ ಸಿದ್ದರಾಮಯ್ಯ : That is not the meaning. I didn't mean like that. ಆ ತರಹದ ಅರ್ಥದಲ್ಲಿ ನಾನು ಹೇಳಲಿಲ್ಲ. 'ಕುಳಿತುಕೊಳ್ಳಿ' ಎಂದರೆ 'ಗೌರವಯುತವಾಗಿ ಕುಳಿತುಕೊಳ್ಳಿ' ಎಂದೇ ನಾನು ಹೇಳಿದ್ದು.

ಶ್ರೀ ಎಸ್. ಸುರೇಶ್‌ಕುಮಾರ್ : ಈಗ ನಿಮ್ಮ ಮಾತಿನಲ್ಲಿ ಗೌರವ ಬಂದಿದೆ. ಆಗ ನಿಮ್ಮ tone and tenor ಹೇಗಿತ್ತು ಗೊತ್ತೇ ? 'ನೀವು ಕುಳಿತುಕೊಳ್ಳಿ' ಎಂದರೆ ಏನಿದು ?

ಡಾ: ಹೆಚ್.ಸಿ. ಮಹದೇವಪ್ಪ : Law Minister mis–interrupt ಮಾಡಬೇಡಿ.

ಶ್ರೀ ಸಿದ್ದರಾಮಯ್ಯ : ನೀವು ಮೊಸರಿನಲ್ಲಿ ಕಲ್ಲು ಹುಡುಕುವುದಕ್ಕೆ ಹೋಗುತ್ತೀರಿ, ಕುಳಿತುಕೊಳ್ಳಿ ಎಂದರೆ, ನಿಮಗೆ ಅವಮಾನವಾಯಿತಾ ಸ್ವಾಮಿ, ಹೋಗಲಿ ಕ್ಷಮೆ ಕೇಳುತ್ತೇನೆ, ಆಯಿತಾ, ಕುಳಿತುಕೊಳ್ಳಿ ಎಂದರೆ ಅವಮಾನವಾಯಿತಾ? That is not my intention. You should know that. ನಾನು ಎದ್ದು ನಿಂತಿದ್ದಾಗ ಅವರು ಎದ್ದು ನಿಂತು ಕೊಳ್ಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಸಿದ್ದರಾಮಯ್ಯ : ಬೇರೊಬ್ಬರಿಗೆ ಅಗೌರವ ಮಾಡುವುದನ್ನು ನಾವು ಕಲಿತೇ ಇಲ್ಲ, ಕುಳಿತುಕೊಳ್ಳಿ ಎಂದು ಹೇಳುವುದು ಅಗೌರವವೆಂದು ನೀವು ತಿಳಿದುಕೊಂಡರೆ, ಹಾಗಾದರೆ ನಾನು ಬೇರೆ ಪದಗಳನ್ನು ಬಳಸಬೇಕಾಗುತ್ತದೆ. ನಾನು ನಿಂತಾಗ ನೀವು ಕುಳಿತುಕೊಳ್ಳಿ ಎಂದರೆ, Is there any wrong in that? ನಮಗೆ ಬೇಕಾಗಿರುವುದು, ಇವತ್ತಿ ವರೆಗೆ ಜನರು ಕಷ್ಟದಲ್ಲಿದ್ದಾರೆ, ಇವತ್ತು 1000 ಮೆ.ವ್ಯಾ. ವಿದ್ಯುತ್ ಖರೀದಿ ಮಾಡುತ್ತೇವೆಂದು ಹೇಳಿದ್ದಾರೆ, ಹಳ್ಳಿಗಾಡಿನಲ್ಲಿ ಏನಾದರು improve ಮಾಡುತ್ತೇವೆಂದು ಹೇಳಿದ್ದೀರಾ? 6 hour 3 phase ನಲ್ಲಿ ಬೆಳಿಗ್ಗೆ 3 hour, ರಾತ್ರಿ 3 hour ಕೊಡುತ್ತೇವೆಂದು ಹೇಳಿದ್ದೀರಿ. Continous ಆಗಿ 6 ಗಂಟೆ

ಕಾಲ ಹಳ್ಳಿಗಾಡಿಗೆ ವಿದ್ಯುತ್ ಕೊಡಬೇಕೆಂದು ನಾವು ಹೇಳಿದ್ದು. 1000 ಮೆ.ವ್ಯಾ. ವಿದ್ಯುತ್ ಅನ್ನು ನೀವು ಖರೀದಿ ಮಾಡಿದ ಮೇಲೆ ಹಗಲು ಹೊತ್ತು 6 ಗಂಟೆ 3 ಫೇಸ್‌ನಲ್ಲಿ ಕೊಡಿ, that is our demand. ಇಲ್ಲದಿದ್ದರೆ ಪಂಪ್ ಸೆಟ್‌ಗಳು ಎಲ್ಲಿ ಓಡುತ್ತವೆ, continous ಕೊಡಿ ಎಂಬುದು that is our demand. 1000 ಮೆ.ವ್ಯಾ. ವಿದ್ಯುತ್ ಅನ್ನು ಖರೀದಿ ಮಾಡುತ್ತಿದ್ದೀರಿ, ಬೇಕಾದರೆ ಇನ್ನು 200 ಮೆ.ವ್ಯಾ. ಖರೀದಿ ಮಾಡಿ, 500 ಮೆ.ವ್ಯಾ. ಖರೀದಿ ಮಾಡಿ, 6 ಗಂಟೆಗಳ ಕಾಲ ಹಳ್ಳಿಗಾಡಿಗೆ ವಿದ್ಯುತ್ ಅನ್ನು ಕೊಡಿ, that is our first demand. ಇದನ್ನು ನಾವು ನಿನ್ನೆಯು ಕೂಡ ಹೇಳಿದ್ದೇವೆ, 1000 ಮೆ.ವ್ಯಾ. ಖರೀದಿ ಮಾಡಿದ ಮೇಲೆ ಯಾರಿಗೆ ಕೊಡುತ್ತೀರಿ? 3000 ಮೆ.ವ್ಯಾ. ಮಾತ್ರ ನಮಗೆ ಗ್ಯಾಪ್ ಇರುವುದು, 2600 ಮೆ.ವ್ಯಾ. ಈಗಾಗಲೇ ನಮಗೆ add ಆಗಿದೆ. ಅಂದ ಮೇಲೆ peak hour ನಲ್ಲೂ 8900 ಮೆ.ವ್ಯಾ. meet ಮಾಡುವುದಕ್ಕೆ ನಿಮಗೆ ಶಕ್ತಿ ಇದ್ದ ಮೇಲೆ ಏಕೆ ಕೊಡುವುದಿಲ್ಲ? That is number one, demand number one, number two, ಹೊರ ರಾಜ್ಯಗಳಿಂದ ಪವರ್ ತರಿಸಿಕೊಳ್ಳುವುದು ಬೇಡ, ರಾಜ್ಯದೊಳಗೆ ಪವರ್ ಸಿಗುತ್ತಿದೆ. ನೀವು, ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲೇ ಪವರ್ ತೆಗೆದುಕೊಂಡಿದ್ದರೆ, ಕಲ್ಲಿದ್ದಲು ಕೊಂಡುಕೊಳ್ಳುವುದು ಕಡಿಮೆಯಾಗುತ್ತಿತ್ತು, transmission loss ಕಡಿಮೆಯಾಗುತ್ತಿತ್ತು. ಅಕ್ಟೋಬರ್, ನವೆಂಬರ್‌ನಲ್ಲಿ 2–3 ರೂಪಾಯಿ ಇತ್ತೆಂದನಿಸುತ್ತದೆ, 2 ರೂಪಾಯಿ 50 ಪೈಸೆ, 3 ರೂಪಾಯಿಗಳೊಳಗೆ ಸಿಗುತ್ತಿತ್ತು, ಆಗ ನೀವು ಏತಕ್ಕೆ ಕೊಂಡುಕೊಳ್ಳಲಿಲ್ಲ, that is why I said, ನಿಮ್ಮ ಸರ್ಕಾರಕ್ಕೆ ಒಂದು ಪ್ಲಾನ್ ಇಲ್ಲ, ಹೇಗೆ ಈ ಸಮಸ್ಯೆಯನ್ನು ಎದುರಿಸಬೇಕೆನ್ನುವ ಒಂದು ರಾಜಕೀಯ ಇಚ್ಛಾಶಕ್ತಿ ಇಲ್ಲ, ನಿಮಗೆ ಆ ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದರಿಂದ ಕಳೆದ ವರ್ಷ ನೀವು 9 ರೂಪಾಯಿವರೆಗೆ ಒಂದೊಂದು ಯೂನಿಟ್‌ಗೆ ಕೊಟ್ಟಿದ್ದೀರಿ, ಆ ಹೊರೆ ಯಾರ ಮೇಲೆ ಬೀಳುವುದು, ಈ ರಾಜ್ಯದ Exchequer ಮೇಲೆ ಹೊರೆ ಬೀಳುವುದು. ನೀವು ಎಷ್ಟು ಯೂನಿಟ್ ತೆಗೆದುಕೊಳ್ಳುತ್ತೀರೆಂಬುದು it is a different thing, 8 ರೂಪಾಯಿ, 9

ರೂಪಾಯಿ, 7 ರೂಪಾಯಿ, ಏಳುವರೆ ರೂಪಾಯಿ ಹೀಗೆಲ್ಲಾ ಕೊಟ್ಟಿದ್ದೀರಿ, ಈಗ ನಾಲ್ಕುವರೆ, ಐದು ಚಿಲ್ಲರೆ ಎಲ್ಲಾ ಕೊಡುತ್ತಿದ್ದೀರಿ, ಅಕ್ಟೋಬರ್, ನವೆಂಬರ್‌ನಲ್ಲಿ ಎರಡೂವರೆ ರೂಪಾಯಿಗೆ ಸಿಗುತ್ತಿತ್ತು, Water ಕೂಡ preserve ಮಾಡಿಕೊಳ್ಳಬಹುದಾಗಿತ್ತು, ಈಗ ಕಲ್ಲಿದ್ದಲನ್ನು ಉಳಿಸಿಕೊಳ್ಳಬಹುದಾಗಿತ್ತು, ಈಗ ತೆಗೆದುಕೊಂಡು ಮಾಡಬಹುದಾಗಿತ್ತು, that is why I said yesterday ನಿಮಗೊಂದು ಪ್ಲಾನ್ ಇಲ್ಲವೆಂದು, ಪವರ್ ಇಲ್ಲೇ ಸಿಗುತ್ತಿತ್ತು, ಬರಿ ಜಿಂದಾಲ್‌ನಲ್ಲೆ ನಿಮಗೆ 750 ಮೆ.ವ್ಯಾ. ವಿದ್ಯುತ್ ಕಡಿಮೆಗೆ ಸಿಗುತ್ತಿತ್ತು. ಇವತ್ತು ಅನೇಕ ಖಾಸಗಿ ಕೊ–ಜನರೇಟ್ ಮಾಡುವ ಜನರು ನಿಮಗೆ ಕೊಡುವುದಕ್ಕೆ ಮುಂದೆ ಬರುತ್ತಿಲ್ಲ, ಏಕೆಂದರೆ ಬಾಕಿ ಉಳಿಸಿಕೊಂಡಿದ್ದೀರಿ. These problems are there. ಇವತ್ತು ನಾನು ಏನು ಹೇಳುತ್ತೇನೆಂದರೆ, ಹಳ್ಳಿಗಳಲ್ಲಿ ಕನಿಷ್ಟ 6 ಗಂಟೆ ಕಾಲ ಸತತವಾಗಿ 3 ಫೇಸ್‌ನಲ್ಲಿ ಪಂಪ್ ಸೆಟ್‌ಗಳು ಓಡುವುದಕ್ಕೆ ವಿದ್ಯುತ್ ಕೊಡಬೇಕು, ಇಲ್ಲದ್ದಿದ್ದರೆ, ನೀವು ರೈತರ ಪರ ಎಂದು ಹೇಳುವುದಕ್ಕೆ ನಿಮಗೆ ಯಾವುದೇ ನೈತಿಕವಾದ ಶಕ್ತಿ, ಹಕ್ಕು ಇಲ್ಲ, that is number one, number two, ಪರೀಕ್ಷೆ ಕಾಲದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ರಾತ್ರಿ ಹೊತ್ತು ಯಾವುದೇ ಕಾರಣಕ್ಕೆ ವಿದ್ಯುತ್ ಇಲ್ಲದಿರುವ ರೀತಿಯಲ್ಲಿ ನೋಡಿಕೊಳ್ಳಬೇಕು. ಎರಡನೇಯದಾಗಿ ಇವತ್ತು ನಮ್ಮ ರಾಜ್ಯದಲ್ಲಿ ಯಾವ ರೀತಿ ವಾತಾವರಣ ನಿರ್ಮಾಣ ವಾಗಬೇಕೆಂದರೆ, energy ಬಹಳ ಬಹಳ ಮುಖ್ಯವಾದ raw–material, ಅಭಿವೃದ್ಧಿಗೆ, ಕೃಷಿ ಉತ್ಪನ್ನಕ್ಕೆ, ಉದ್ಯೋಗ ಸೃಷ್ಟಿಗೆ, ಶಿಕ್ಷಣಕ್ಕೆ, ಕುಡಿಯುವ ನೀರಿಗೆ ಬಹಳ ಮುಖ್ಯವಾದುದು. ಇದೆಲ್ಲಾ ಮಾಡಬೇಕಾದರೆ, ಇವತ್ತು ಬಹಳ ತೊಂದರೆಯಲ್ಲಿದ್ದೇವೆ, ನಿನ್ನೆ, ಮೊನ್ನೆ 3–4 ದಿವಸಗಳ ಹಿಂದಿನ ದಿನಪತ್ರಿಕೆಗಳನ್ನು ಓದಿದ್ದೇನೆ, what is the reaction of the people? What is the reaction of the Bangaloreans? ಇಲ್ಲ ಬೆಂಗಳೂರನ್ನು represent ಮಾಡುವವರು ಇದ್ದಾರೆ, what they say, what they said? It is not my statement, it is not my reaction. ಇವತ್ತೇನೋ ನಾಳೆ ಕಾರ್ಪೊರೇಷನ್ ಎಲೆಕ್ಷನ್ ಇದೆ

ಎಂದು 1000 ಮೆ.ವ್ಯಾ. ಮಾರ್ಚ್‌ನಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಇವತ್ತಿನಿಂದ, ಒಂದನೇ ತಾರೀಖಿನಿಂದ ಕೊಡುತ್ತೇವೆ, ಚುನಾವಣೆಯಾದ ಮೇಲೆ, ಹೋದ ವರ್ಷ ಚುನಾವಣೆಯಾದ ಮೇಲೆ ಕೊಡಲಿಲ್ಲ, ಪಾರ್ಲಿಮೆಂಟ್ ಚುನಾವಣೆ ಮುಗಿಯಿತು, ಆಮೇಲೆ ತೆಗೆದುಕೊಳ್ಳಲೇ ಇಲ್ಲ. ಮಾರ್ಚ್ 30ರೊಳಗೆ ಚುನಾವಣೆ ಮಾಡಲೇ ಬೇಕೆಂದು ಸುಪ್ರೀಂ ಕೋರ್ಟ್, ಹೈಕೋರ್ಟ್ ಛೀಮಾರಿ ಹಾಕಿದ್ದಾರೆ, ನೀವು ಮಾಡಲೇ ಬೇಕು ಬೇರೆ ದಾರಿಯೇ ಇಲ್ಲ. ಅದಕ್ಕೋಸ್ಕರ ಈ ಬೆಂಗಳೂರು ಜನರಿಗೆ ಗೊತ್ತಾಗಿದೆ, ಚುನಾವಣೆಗೋಸ್ಕರ ಮಾಡುವುದಕ್ಕೆ ಹೋಗಬೇಡಿ. ಚುನಾವಣೆ ಬರುತ್ತವೆ, ಹೋಗುತ್ತವೆ, ಆದರೆ ಜನರ ಹಿತ ಬಹಳ ಮುಖ್ಯವಾಗುತ್ತದೆ, ವಿದ್ಯಾರ್ಥಿಗಳ ಹಿತ ಬಹಳ ಮುಖ್ಯವಾಗುತ್ತದೆ, ಆ ಕಾರಣದಿಂದ ನಾನು ಇವತ್ತು ಬಹಳ ಒತ್ತಾಯ ಮಾಡುತ್ತೇನೆ, ಮುಂದಿನ ಮೇ-ಜೂನ್ ನಲ್ಲಿ ಮಳೆ ಬರುವವರೆಗೆ ಬೆಂಗಳೂರು ನಗರದಲ್ಲಿ ರಾಜ್ಯದ ಬೇರೆ ಬೇರೆ ಪಟ್ಟಣ, ಹಳ್ಳಿಗಳಿಗೆ ನಿರಂತರವಾಗಿ ವಿದ್ಯುತ್ ಕೊಡಬೇಕೆಂಬುದು ಒಂದು. ಆಮೇಲೆ, ಕೇಂದ್ರ ಸರ್ಕಾರ ನಮಗೆ ವಿದ್ಯುತ್ ಕೊಡಲಿಲ್ಲವೆಂದು ಓದಿದರು ಕೇಂದ್ರ ಸರ್ಕಾರ ರಾಜೀವ್ ಚಂದ್ರಶೇಖರ್‌ಗೆ ಪಾರ್ಲಿಮೆಂಟ್‌ನಲ್ಲಿ ಉತ್ತರ ಕೊಟ್ಟಿದ್ದಾರೆ, ಅವರು ಏನು ಹೇಳಿದ್ದಾರೆಂದರೆ, The allocation of Karnataka is relatively less in comparison to Andhra Pradesh and Tamil Nadu mainly because of higher benefits of dedicated Stations and the home state share available to Andhra Pradesh and Tamil Nadu ಅದು ನಮಗೆ ಇಲ್ಲವೆಂದು ಹೇಳಿದ್ದಾರೆ, ಹಾಗಾದರೆ ತಾರತಮ್ಯ ಹೇಗಾಗುತ್ತದೆ, ನೀವು ಮಾಡಿಕೊಳ್ಳದೆ ಇರುವುದಕ್ಕೆ ಯಾರು ಕಾರಣ? That is not my answer. ಈ ಪರಿಸ್ಥಿತಿಯನ್ನು ತಂದಿಟ್ಟಿದ್ದೀರಲ್ಲ, ನಿಮ್ಮನ್ನು ದೇವರು ಕಾಪಾಡಬೇಕಷ್ಟೆ. ಕೇಂದ್ರ ಸರ್ಕಾರ, ಪಾರ್ಲಿಮೆಂಟ್‌ನಲ್ಲಿ ರಾಜೀವ್ ಚಂದ್ರಶೇಖರ್‌ಗೆ ಉತ್ತರ ಕೊಟ್ಟಿರುವುದು, ಅವರು ನಿಮ್ಮ ಜೊತೆಯಲ್ಲೆ ಇದ್ದಾರೆ. ಆಮೇಲೆ Simhadri Thermal Power Station 1000 MW is dedicated to Andhra Pradesh and the State gets the benefit of

10% of home state share. The capacity of Ramagundum stage 1 and 2, 2600 MW, ಇದು ಆಂಧ್ರದಲ್ಲೆ ಇರುವುದು, Tamil Nadu is having Naively, 600 Mw is a dedicated station and also gets the 10% home state share. In Madras Automic Power station 440 MW and Naively one expansion 420 MW and Naiveli second stage 1 and 2 420 MW, Karnataka is having only10% home share. ಇಲ್ಲಿ ಕೇಂದ್ರ ಸರ್ಕಾರ ಎಲ್ಲಿ ತಾರತಮ್ಯ ಮಾಡಿದೆ? ನಾನು ಓದುತ್ತಿರುವುದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. 1500 ಮೆ.ವ್ಯಾ.ನಲ್ಲಿ 1200 ಮೆ.ವ್ಯಾ ಬರುತ್ತಿದೆ, 300 ಮೆ.ವ್ಯಾ. ಬರುತ್ತಿಲ್ಲವೆಂಬುದು ನಿಮ್ಮ ವಾದ, ಅದಕ್ಕೆ ಹೇಳುತ್ತೇನೆ ನೋಡಿ. ನಮ್ಮ ಹತ್ತಿರ ಕೈಗಾ ಒಂದೇ ಇರುವುದು, ಅದು ಬಿಟ್ಟರೆ ಇನ್ನ್ಯಾವುದು ಇದೆ? Central Grid ನಮಗೆ ಯಾವುದಿದೆ? ಆದುದರಿಂದ 10% home share ನಮಗೆ ಬರುತ್ತದೆ, ಆಂಧ್ರದಲ್ಲಿ ಸಿಗುತ್ತಿರುವ home share ನಷ್ಟು ನಮಗೆ ಸಿಗುತ್ತಿದೆಯಾ? ತಮಿಳುನಾಡಿನಲ್ಲಿ ಸಿಗುವಷ್ಟು ನಮಗೆ ಸಿಗುತ್ತಿದೆಯಾ? ಮಹಾರಾಷ್ಟ್ರದಲ್ಲಿ ಸಿಗುವಷ್ಟು ನಮಗೆ ಸಿಗುತ್ತಿದೆಯಾ? Because of that, ಅವರಿಗೆ ಜಾಸ್ತಿ ಬರುತ್ತಿದೆ. ನಾನು ಏತಕ್ಕೆ ಹೇಳುತ್ತೇನೆಂದರೆ, ಸುಮ್ಮಸುಮ್ಮನೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಹೋಗಬಾರದು. ನಿಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವಂಥ ಕೆಲಸವನ್ನು ಮಾಡಬಾರದು, In view of the fact that the Karnataka has been allocated ಇದು 227 to 276 MW, 20.9% to 25.4 % un-allocated power ಇದನ್ನು additional ಆಗಿ ಕೊಟ್ಟಿರುವುದು, Region, which is second highest in the region and further allocation will call for deduction from other states and union territories. It was not possible to make additional allocation to make Karnataka, the position has been intimated to Chief Minister, Government of Karnataka on 14.10.2009 ಅಂತ ಹೇಳಿದ ಮೇಲೆಯೂ ಸಹ, ಈಶ್ವರಪ್ಪ

ಅವರು ಒಂದು ಕಡೆ ಕೇಂದ್ರ ಸರ್ಕಾರದವರು ನಮಗೆ ಅನ್ಯಾಯ ಮಾಡಿದರು, ತಾರತಮ್ಯ ಮಾಡಿದರು, ಎಂದು ಹೇಳುತ್ತಾರೆ. ನಿಮ್ಮ ಕೆಲಸ ಮಾಡಿ ಸ್ವಾಮಿ. ಅವರದೆಲ್ಲಾ ಹೇಳಿದ್ದಾರೆ, ಈ ತರಹ ಮಾಡಿದ್ದೇವೆ ಅಂತ. ಈ ತರಹ ಇದೆ, ನಾವು ತಾರತಮ್ಯ ಮಾಡಿಲ್ಲವೆಂದು ಮೊನ್ನೆ ಶ್ರೀ ಸುಶೀಲ್ ಕುಮಾರ್ ಶಿಂಧೆ ಅವರು ಬಂದಾಗ he made a categorical statement in presence of your good-self and Eeshwarappa, the then power Minister. ಆಗ ಒಬ್ಬರೂ ಮಾತನಾಡಲೇ ಇಲ್ಲ. ನಮಗೆ ಅನ್ಯಾಯವಾಗಿದೆ, ನೀವು ಹೇಳುತ್ತಿರುವುದು ಸರಿ ಇಲ್ಲವೆಂದು ನೀವು ಹೇಳಬಹುದಾಗಿತ್ತು. ಆವತ್ತು demand ಏನಾದರೂ ಇಟ್ಟಿದ್ದೀರಾ ? ನೀವು ತಾರತಮ್ಯ ಮಾಡಿದ್ದೀರಿ ಎಂದು ನಿಮ್ಮ ಭಾಷಣದಲ್ಲಿ ಹೇಳಿದೀರಾ ? ಇಲ್ಲ. What is the message would go to the people of Karnataka ? ಸುಮ್ಮನೆ ಗೂಬೆ ಕೂಡಿಸುವುದಕ್ಕೋಸ್ಕರ ಏನೋ ಹೇಳಿ ಬಿಡುವುದಲ್ಲ. ಕೇಂದ್ರ ಸರ್ಕಾರ ಯಾವುದೇ ತಾರತಮ್ಯ ಮಾಡಿಲ್ಲ. ಎಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ ಹೋಗೋಣ ನಡೆಯಿರಿ, ಅವರು ಏನಾದರೂ discriminate ಮಾಡಿದ್ದರೆ between Andhra and Karnataka, Between Maharashtra and Karnataka, between Tamilnade and Karnataka, ಮಾಡಿದರೆ ಹೋಗೋಣ ಬನ್ನಿ, ಕೇಳೋಣ, but ಸುಮ್ಮನೆ ಹೇಳೋದು ಬೇಡ this is no.1, No.2, ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನೆಂದರೆ, ಮಾನ್ಯ ರೇವಣ್ಣನವರು ಮಾತೆತ್ತಿದರೆ, ಕಲ್ಲಿದ್ದಲಿನಲ್ಲಿ ಮಾನ್ಯ ಯಡಿಯೂರಪ್ಪನವರೇ ನೇರವಾಗಿ ಭಾಗಿಯಾಗಿದ್ದಾರೆ ಅಂತ ಅವರು ಹೇಳುತ್ತಾರೆ. ಇದು ನಾನು ಹೇಳಿದ್ದಲ್ಲ, ನೀವು ಬರೆದಿರುವ ಪತ್ರ ಹಿಡಿದುಕೊಂಡು ಅವರು ಹೇಳಿದ್ದು. ಪದೇ ಪದೇ ಜಾಗಟೆ ಹೊಡೆದ ಹಾಗೆ ಹೊಡೆಯುತ್ತಿದ್ದಾರೆ.

"ಮೆ. ಭಾಟಿಯಾ ಇಂಟರ್ ನ್ಯಾಷನಲ್ಸ್ ಲಿಮಿಟೆಡ್ ಅವರೊಂದಿಗೆ ಟೆಂಡರ್ ಮಾಡಲಾದಷ್ಟು ಆಮದಿತ ಕಲ್ಲಿದ್ದಲನ್ನು ಅಂದರೆ 6 ಲಕ್ಷ ಟನ್ ಕಲ್ಲಿದ್ದಲು ಪಡೆಯಲು ಕೆ.ಪಿ.ಸಿ.ಎಲ್. ಒಪ್ಪಂದ ಮಾಡಿಕೊಂಡಿದ್ದು ಪ್ರಸ್ತುತ ಪ್ರಸ್ತಾವನೆಯಲ್ಲಿ 6 ಲಕ್ಷ ಟನ್‌ಗೆ ಬದಲಾಗಿ ಪ್ರತಿಶತ 15 ರಷ್ಟು ಕಡಿಮೆ

ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ. ಪರ್ಯಾಯ ವ್ಯವಸ್ಥೆಯಿಂದ ಕಲ್ಲಿದ್ದಲನ್ನು ಪಡೆಯುವ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ ಮತ್ತು ಜಾರಿಯಲ್ಲಿರುವ ಚುನಾವಣಾ ನೀತಿ ಸಂಹಿತೆಯಿಂದಾಗಿ ಇನ್ನಷ್ಟು ವಿಳಂಬವಾಗುವ ಸಾಧ್ಯತೆಯಿದೆ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಮುಂಬರುವ ದಿನಗಳಲ್ಲಿ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲಿನ ಅವಶ್ಯಕತೆ ಹೆಚ್ಚು ಹೆಚ್ಚು ಬೇಕಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಒಪ್ಪಂದದಲ್ಲಿರುವಂತೆ 6 ಲಕ್ಷ ಟನ್ ಕಲ್ಲಿದ್ದಲನ್ನು ಪ್ರಸ್ತಾಪಿತ ಶೇಕಡ 15 ರಷ್ಟು ಕಡಿತಗೊಳಿಸದಂತೆ, (ನಿಮ್ಮ ಅಗ್ರೀಮೆಂಟ್‌ನಲ್ಲಿ ಕಡಿತಗೊಳಿಸಬೇಕೆಂದು ಇದೆ) ಖರೀದಿಸುವುದು ಸಮಂಜಸವಾಗಿರುತ್ತದೆ. ಆದ್ದರಿಂದ ಟೆಂಡರ್ ಮಾಡಿರುವಂತೆ ಹಾಗೂ ಮೆ: ಭಾಟಿಯ ಇಂಟರ್ ನ್ಯಾಷನಲ್ ಲಿಮಿಟೆಡ್ ನವರೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ 6 ಲಕ್ಷ ಟನ್ ಆಮದಿತ ಕಲ್ಲಿದ್ದಲನ್ನು ಖರೀದಿಸಲು ಸೂಚಿಸಿದೆ." ಎಂದು ನಿಮ್ಮ ಟಿಪ್ಪಣಿ ಹೋಗಿದೆ. ಈ ಟಿಪ್ಪಣಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ಇವರಿಗೆ ಬರೆದಿರುತ್ತೀರಿ. ಇದು ಬಂದಮೇಲೆ ಅವರು ತೆಗೆದುಕೊಂಡಿರುತ್ತಾರೆ. otherwise ತೆಗೆದುಕೊಳ್ಳುತ್ತಿರಲಿಲ್ಲ. ಹಾಗೆಯೇ ಎಂ.ಡಿ. ಅವರ ಟಿಪ್ಪಣಿಯೂ ಓದಿ ಬಿಡುತ್ತೇನೆ.

"Para No. 23. in this context, the firm vide their letter dated: 04.04.2009 (placed opposite in the file for kind perusal) have intimated as follows:

We have for reference your letter dated 28th March, 2009 wherein you have requiested us to restrict the quantity of imported coal to be supplied from our forthcoming vessel to 30,219 MT and that contract shall be limited to supply of 5,10,000 MT. In this connection we wish to state as under.

1. Our letter dated 16th March, 2009 clerly states that we agree to reduce the rate provided quantity within the tolerance of +15% over 6 lakh MT is accepted to compensate our loss.
2. Subsequently we have agreed to reduce CIF price of coal by Rs. 200/- PMT under the cover of our letter dated 18th March, 2009.
3. we have received acceptance letter. In reply to your letter dated 16th March, 2009 and 18th March, 2009 that our proposal of reducing CIF price limit the quantity to -15% of 6 lakh tones i.e. 5,10,000 MT. We have already planned our vessels to the extent of +15% of supply quantity i.e. 6,90,000 MT based on your acceptance letter. You are requested to kindly accept all our forthcoming vessels so that we can supply a quantity of 6,90,000 MT under the above referred contract.

Further vide letter dated 04.04.2009, M/s. Bhatia International Limited have intimated that ;

Vessel m.v. Rosita has sailed from load port today and the loaded quantity is 50,896 MT. The vessel is ETA Chennai Port by 9th/10th April, 2009.

You are requested to kindly send us acceptance letter for the vessel m.v.Rosita so that we can submit documents for completion of HSS formalities on receipt of the same to you.

The firm, vide their letter dated: 09.04.2009 furnished the documents for execution of High Seas Agreement. As per the kind instructions of Managing Director, the High Seas agreement has been executed". ಇದರಲ್ಲಿ ಏನು ಹೇಳಿದ್ದಾರೆಂದರೆ 200 ರೂ. ಕಡಿಮೆಯಾಗಿದೆ.

"Thereafter another ship was received i.e. m.v.Rosita, which was communicated to KPCL vide letter dated 4th April and received in KPCL on 6th April, 2009 and in the file form it was put up on 9th April by which time the ship had already arrived in the port and KPCL had not communicated its decision till that date. The contractor was thereafter pressing immediate communication about acceptance of the vessel. But the MD was not available since he was away at Delhi on 8th and 9th April. The Contractor contacted the office of the Chief Minister and the Principal Secretary to Chief Minister Shri V.P. Baligar called up to MD over mobile phone and asked about the problem of the Contractor. Since the vessel had already arrived and communication from KPCL side was bit delayed and the quantity received until that moment was still less by about 30,000 tones even going by reduced quantity of 5,10,000 tones and the receipt until that date was 4,79,000 tones and MD informed over mobile phone to SE (Fuels) to issue order accepting the coal from vessel m.v. Rosita. This is how it was accepted. This acceptance has led to the total receipt of 5,30,677 tones of coal so far on paper based on the high sea sales agreement. However, quite of ten the actual quantities received are much less than the quantity shown in the high seas sales agreement due to the loss on account of handling,

6.00 ಪಿ.ಎಂ.

transportation and moisture. Therefore totally received quantity in RTPS is generally much less.

At any case, going by the reduced quantity of 5.10 lakh tones, the received quantity is slightly higher by about 20,000 tones. This is on account of the fact that vessel m.v. Roshita carried 50,000 tonnes and in the high sea sales agreement we cannot accept part of the shipments. Therefore, the entire shipment was to be received and is received which led to the slight excess in quantity by 20,000 tonnes of coal. This may also be brought to the notice of the Technical committee as well as the Board, and the reasons therefore"....

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಕೇವಲ correspondence ಏನಿದೆ ಅದನ್ನು ಓದುತ್ತಿದ್ದಾರಷ್ಟೆ. ಅದರಲ್ಲಿ ಏನು contents ಇದೆ ಅದನ್ನು ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : Now the point is . . . .

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದರಲ್ಲಿ contents ಏನಿದೆಯೆಂದರೆ, 22.04.2009 ರಲ್ಲಿ 5 ಲಕ್ಷ ಟನ್‌ನ್ನು ಮಾತ್ರ ಖರೀದಿ ಮಾಡಬೇಕು, ನಮಗೆ ರೇಟ್ 7800 ರಿಂದ 4000 ರೂಪಾಯಿಗಳಿಗೆ ಇಳಿಮುಖವಾಗಿದೆ, 3800 ರೂಪಾಯಿ ಬೀಳುತ್ತದೆ ಒಂದು ಟನ್‌ಗೆ ಎಂದು ಹೇಳಿ ಆಗ ಅಧಿಕಾರಿ ಯಾರಿರುತ್ತಾರೋ ಅವರು ನೋಟ್ ಕೊಡುತ್ತಾರೆ. ಆ ಅಧಿಕಾರಿ 22.08.2009 ರಲ್ಲಿ ನಮಗೆ ಸಾಕು ಕಲ್ಲಿದ್ದಲು, 04.04.2009 ರಲ್ಲಿ ಯಾರು ಎಷ್ಟು ಎಷ್ಟು procure ಮಾಡಿದ್ದಾರೆ ಅವರಿಗೆ writing ನಲ್ಲಿ ತಿಳಿಸುತ್ತಾರೆ. writing ನಲ್ಲಿ ಕೊಟ್ಟಮೇಲೆ ಮುಖ್ಯಮಂತ್ರಿಗಳು 22.04.2009 ರಲ್ಲಿ, 04.04.2009 ರಲ್ಲಿ ಯಾರು ಎಂ.ಡಿ. ಬೇಡವೆಂದು ಹೇಳುತ್ತಾರೋ. ಆ ರೀತಿ ಅವರು ಹೇಳಿದ ಮೇಲೆ 22.04.2009 ರಲ್ಲಿ ಮುಖ್ಯಮಂತ್ರಿಗಳು

ಇಲ್ಲಾ, 15 % cut down ಮಾಡುವ ಹಾಗಿಲ್ಲ, ನಾನು ಹೇಳಿದ್ದೇನೆಯಾದ ಕಾರಣ ತೆಗೆದುಕೊಳ್ಳಲೇಬೇಕು ಎಂದು ಹೇಳಿ ಬರೆದಿರುವ ಪತ್ರದ ಪ್ರತಿಯನ್ನು ಬೇಕಾದರೆ ಇನ್ನೊಂದು ಬಾರಿ ಸಿದ್ದರಾಮಣ್ಣನವರು ಓದಲಿ. ಏಕೆಂದರೆ ಇದರಲ್ಲಿ interference ಎಷ್ಟಿದೆ ಮತ್ತು ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಹೇಳಲಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೆ.ಪಿ.ಸಿ.ಎಲ್.ನ ಎಂ.ಡಿ.ಯವರು ಇವರಿಗೆ ಏನು advise ಮಾಡುತ್ತಾರೆ ಆ advise ಅನ್ನು ಇವರು reject ಮಾಡಿದ್ದಾರೆ ಎನ್ನತಕ್ಕಂಥದ್ದು ಅವರ argument. That is his total argument. ಅದರ ಮೇಲೆ ಅವರು ಬೇಡವೆಂದರೂ ಕೂಡ Chief Minister ಈ ರೀತಿಯಲ್ಲಿ ಪತ್ರ ಬರೆದು ತೆಗೆಸಿದ್ದಾರೆ. ಆ ರೀತಿ ತೆಗೆಸಿರುವುದರಿಂದ Chief Minister ಅದಕ್ಕೆ ಜವಾಬ್ದಾರರು ಎನ್ನತಕ್ಕಂಥದ್ದು ಅವರ argument ಇದೆ. ಅವರ argument ಏನೆಂದರೆ ಎಂ.ಡಿ. ಕೆ.ಪಿ.ಸಿ.ಎಲ್. ಅವರು ಬೇಡವೆಂದರೂ ಕೂಡ Chief Minister has taken personal interest, he has written a letter.

ಶ್ರೀ ಹೆಚ್.ಡಿ. ರೇವಣ್ಣ : Chairman ಕೂಡ ಆಗಿದ್ದಾರೆ.

ಶ್ರೀ ಸಿದ್ದರಾಮಯ್ಯ : True, True. He is a Chairman of KPCL. I know that.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿಂದೆ ಪದ್ಧತಿ ಏನಿತ್ತು ಎಂದರೆ, ಯಾರಾದರೂ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅವರಿಂದ ತಪ್ಪು ಮಾಡಿಸಿದ ನಂತರ ನಾನು ಆ ರೀತಿ ತಪ್ಪು ಮಾಡಿಲ್ಲವೆಂದು ಹೇಳುವಂಥ ಒಂದು ಕಾಲವಿತ್ತು. ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ವಿಶೇಷತೆ ಏನೆಂದರೆ, ನಾನು ಏನು ಹೇಳಿದ್ದೇನೆ, ಏನು ಒಪ್ಪಂದವಾಗಿರುತ್ತದೋ ಆ ಒಪ್ಪಂದದಂತೆ ನಡೆದುಕೊಳ್ಳಬೇಕು ಎಂದು ಹೇಳುವವನು ಈ ಯಡಿಯೂರಪ್ಪ. ಅದರಂತೆ ಹಿಂದೆ ಏನು ಒಪ್ಪಂದವಾಗಿತ್ತೋ ಅದರಂತೆ ನೀವು ಖರೀದಿ ಮಾಡಿ ಎಂದು oral ಆಗಿಯೇ ಹೇಳಬಹುದಾಗಿತ್ತು. ಆದರೆ ನಾನು writing ನಲ್ಲಿ ಕಳುಹಿಸಿ

ಅದೇನಿತ್ತೋ ಆ ವ್ಯವಸ್ಥೆಯಂತೆ ಮುಂದುವರಿಯಬೇಕು, ಇದರಲ್ಲಿ ಯಾರಲ್ಲಿ ಯಾರನ್ನೂ ನಂಬುವುದಿಲ್ಲ, ಒಪ್ಪಂದವಾಗಿರುವಂತೆ ನಡೆದುಕೋ ಎಂದು ನಾನು Writing ನಲ್ಲಿ directions ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ನಿಜ ಪರಿಸ್ಥಿತಿಯನ್ನು ಒಪ್ಪಿಕೊಂಡಿದ್ದಾರೆ. ಟೆಂಡರ್ ಕರೆಯಬೇಕಾದರೆ condition ಏನಿತ್ತು ಎನ್ನುವುದನ್ನು ಹೇಳಬೇಕೆಂದರೆ, ಅವರು ಏನು ಹೇಳಿದ್ದಾರೆಂದರೆ ಟೆಂಡರ್ ಕರೆಯಬೇಕಾದರೆ 15 % Minus or Plus ಎಂದು ಇತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೋಹನ್‌ಕುಮಾರ್‌ರವರ ಹತ್ತಿರ ಕೇಳಿ ಹೇಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ : ನಾನೇಕೆ ಜಸ್ಟೀಸ್ ಮೋಹನ್‌ಕುಮಾರ್ ರವರನ್ನು ಕೇಳಬೇಕು. ಹಾಲಿ ಕರ್ನಾಟಕ ಹೈಕೋರ್ಟ್‌ನ ಜಡ್ಜ್‌ರವರೇ ಹೇಳಿದ್ದಾರಲ್ಲ. ಮೋಹನ್‌ಕುಮಾರ್‌ರವರ ಹತ್ತಿರ ನಾನೇಕೆ ಕೇಳುವುದಕ್ಕೆ ಹೋಗಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಈಗ ಅವರು ಹೇಳುತ್ತಿರುವ ವಿಷಯ ಈಗಾಗಲೇ Enquiry Commission ಮುಂದೆ ಇದೆ. ಈಗ ರಾಜ್ಯದಲ್ಲಿ ವಿದ್ಯುತ್ ಕೊರತೆ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಅವರು ಹೇಳುವ ವಿಷಯ ಈಗಾಗಲೇ Enquiry Commission ಮುಂದೆ ಇದೆ. The matter is before the enquiry commission.

ಅಧ್ಯಕ್ಷರು : ರೇವಣ್ಣನವರೆ, The matter which is pending before the enquiry commission ಅದನ್ನೇ ಪ್ರಸ್ತಾಪ ಮಾಡಿದರೆ ಹೇಗೆ? ಇಲ್ಲಿ ಅದನ್ನು ಪ್ರಸ್ತಾಪ ಮಾಡಬಾರದು.

ಶ್ರೀ ಹೆಚ್.ಡಿ. ರೇವಣ್ಣ : ಈಗ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಅವರ ಮೇಲೆಯೇ ನೇರವಾದ ಆರೋಪವಿದೆಯಲ್ಲಾ.

ಶ್ರೀ ಬಸವರಾಜ ಬೊಮ್ಮಾಯಿ : ನೀವು ಬೇಕಾದ್ದನ್ನು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕಾಲ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ ರೈತರಿಗೆ ವಿದ್ಯುತ್‌ನ್ನು ಸತತವಾಗಿ ಕೊಡಬೇಕು. ಇವರು ಇವತ್ತಿನವರೆವಿಗೆ ವಿದ್ಯುತ್‌ನ್ನು ಆ ರೀತಿಯಲ್ಲಿ ವಿದ್ಯುತ್ ಪೂರೈಕೆ ಮಾಡುವುದರಲ್ಲಿ ಸಂಪೂರ್ಣವಾಗಿ failure ಆಗಿದ್ದಾರೆ. ಇವರು ಈ ವಿಚಾರದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಇದು ಒಂದು ಅಸಮರ್ಥ ಸರ್ಕಾರ. ಇವರ ಸರ್ಕಾರ ರೈತರ ವಿರೋಧಿ ಸರ್ಕಾರ. ಕೇವಲ ಇವರ ಕುರ್ಚಿಯನ್ನು ಉಳಿಸಿಕೊಳ್ಳುವುದರಲ್ಲಿಯೇ ಇವರು ಕಾಲವನ್ನು ಕಳೆದಿದ್ದಾರೆಯೇ ವಿನಃ ಜನರಿಗೆ, ರೈತರಿಗೆ ವಿದ್ಯುತ್ ಕೊಡುವುದಕ್ಕೆ ಇವರ ಕೈಯಲ್ಲಿ ಆಗಿಲ್ಲ. ಈ ಬಗ್ಗೆ ಇವರು ಕಸರತ್ತು ಮಾಡಿದ್ದರೆ ವಿದ್ಯುತ್ ಸಿಗುತ್ತಿತ್ತು. ಅದನ್ನು ಇವರು ಏನೂ ಮಾಡಿಲ್ಲ. ಇವರು ರಾಜ್ಯದಲ್ಲಿ ರೈತರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದು ರೈತರಿಗೆ ಮೋಸ ಮಾಡಿದ್ದಾರೆ. ವಿದ್ಯುಚ್ಛಕ್ತಿಯನ್ನು ಸರಿಯಾಗಿ ಪೂರೈಕೆ ಮಾಡಿಲ್ಲ. ಇದರ ಜೊತೆಗೆ ವಿದ್ಯುತ್ ಬಿಲ್ ಬಾಕಿಯನ್ನು ರೈತರು ಏನು ಕೊಡಬೇಕಾಗಿದೆ ಅದನ್ನು ಎಲ್ಲವನ್ನೂ ಮನ್ನಾ ಮಾಡುತ್ತೇವೆಂದು ಇವರು ಹೇಳಿದ್ದರು. ಇವತ್ತಿನವರೆವಿಗೂ ಅದನ್ನು ವಜಾ ಮಾಡುವುದಕ್ಕೆ ಕ್ರಮವನ್ನೇ ತೆಗೆದುಕೊಂಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದನ್ನು.

ಶ್ರೀ ಸಿದ್ದರಾಮಯ್ಯ : ನೀವೇ ಒಪ್ಪಿಕೊಂಡು ಹೇಳಿದ್ದೀರಿ. ರೈತರು ವಿದ್ಯುತ್ ಬಿಲ್ ಅನ್ನು ಹಿಂದೆ ಏನು ಕೊಡಬೇಕಾಗಿದೆ ಅದನ್ನೆಲ್ಲವನ್ನೂ ವಜಾ ಮಾಡುತ್ತೇವೆಂದು ನೀವೇ ಹೇಳಿದ್ದೀರಿ. ಆದರೆ ಮಾಡಲಿಲ್ಲ. ಅಸೆಂಬ್ಲಿಯಲ್ಲಿಯೇ ಆ ರೀತಿ ಹೇಳಿದ್ದಾರೆ. ಅದನ್ನು ಮಾಡಲಿಲ್ಲ. ಇವರು ರೈತರ ಹೆಸರು ಹೇಳಿಕೊಂಡು ಬಂದವರು ರೈತರಿಗೆ ದೊಡ್ಡ ಅನ್ಯಾಯ ಮಾಡಿದ್ದಾರೆ. ಇವರು ಈಗ ಇನ್ನು ಎರಡು ವರ್ಷದಲ್ಲಿ, ಮೂರು ವರ್ಷದಲ್ಲಿ, ನಾಲ್ಕು ವರ್ಷದಲ್ಲಿ ವಿದ್ಯುತ್ ಬರುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ವಿದ್ಯುತ್ ಸಿಗಬೇಕಲ್ಲ. ಮುಂದೆ ಸಿಗುತ್ತದೆ ಎಂದು ಈಗ ಹೇಳಿಕೊಂಡು ಹೋದರೆ ಈಗಿನ ಸಮಸ್ಯೆಗೆ ಪರಿಹಾರವೇನೂ ಸಿಗುವುದಿಲ್ಲ. ಆ ಕಾರಣದಿಂದ ಕೂಡಲೇ ಈ ವರ್ಷ ಮೇ ತಿಂಗಳಿನವರೆವಿಗೆ ನಾವೇನು ಮಾಡುತ್ತೇವೆಂದು ಹೇಳಿ ಇವರು contingency plan ಮಾಡಬೇಕು. Every

month ಎಷ್ಟು power ಬೇಕಾಗುತ್ತದೆಯೋ ಅಷ್ಟು power ಖರೀದಿ ಮಾಡಬೇಕು. ರೈತರಿಗೆ ಕನಿಷ್ಠ ದಿನಕ್ಕೆ 6 ಗಂಟೆ ಮೂರು ಫೇಸ್‌ನಲ್ಲಿ ಹಗಲು ಹೊತ್ತು ವಿದ್ಯುತ್ ಕೊಡತಕ್ಕಂಥ ನಿರ್ಣಯವನ್ನು ನೀವು ಮಾಡಬೇಕು. ಸಾಯಂಕಾಲ 6 ಗಂಟೆಯಿಂದ ಬೆಳಿಗ್ಗೆ 8 ಗಂಟೆಯವರೆವಿಗೆ ವಿದ್ಯಾರ್ಥಿಗಳಿಗೆ ತೊಂದರೆ ಆಗದ ರೀತಿಯಲ್ಲಿ ವಿದ್ಯುತ್‌ನ್ನು ಕೊಡತಕ್ಕಂಥ ಕೆಲಸವನ್ನು ನೀವು ಮಾಡಬೇಕು. ಆದರೆ ಈ ರೀತಿ ಇವರ ಸರ್ಕಾರ ಈ ಘಳಿಗೆಯವರೆವಿಗೂ ಮಾಡಿಲ್ಲ. ಆದಕಾರಣ ಈ ವಿಚಾರದಲ್ಲಿ ಇವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇದು ಒಂದು ವಿಚಾರ. ಇನ್ನು ಮಾನ್ಯ ರೇವಣ್ಣನವರು ಪದೇ ಪದೇ ಒಂದು ವಿಚಾರ ಹೇಳುತ್ತಿದ್ದಾರೆ. ಅದಕ್ಕೆ ಈಗ ಅವರು ಕೂಡ ಮಾತನಾಡಿ ಎಂತದೋ ಎಂ.ಎ.ಎಂ. ರಾಮಸ್ವಾಮಿಯವರಿಗೆ ಕೊಟ್ಟಿದ್ದಾರೆ. ಹೀಗೆ ಮಾಡಿದ್ದರಿಂದ ಅದರ ಬೆಲೆ ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. It is a loss to the State.

Mr. Speaker : That is, Enquiry is pending.

ಶ್ರೀ ಸಿದ್ದರಾಮಯ್ಯ : ಆದುದರಿಂದ ನಾನು ಏನು ಹೇಳುತ್ತೇನೆಂದರೆ. ಮಾನ್ಯ ರೇವಣ್ಣನವರು ಸಿ.ಬಿ.ಐ. ಎನ್‌ಕ್ವೈರಿಗೆ ಕೊಡಬೇಕೆಂದು ಹೇಳುತ್ತಿದ್ದಾರೆ. ಅವರು ಪದೇ ಪದೇ ಸಿ.ಬಿ.ಐ.ಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ನೀವು ಏಕೆ ಹೆದರಿಕೊಳ್ಳುತ್ತಿದ್ದೀರಿ. ಯಡಿಯೂರಪ್ಪನವರು ಕೈ ಬಾಯಿ ಶುದ್ಧವಾಗಿದೆಯೆಂದು ಹೇಳಿಕೊಂಡ ಮೇಲೆ Why are you afraid of it? ಅವರು ಪಾಪ ನಾವು ಏನು ಮಾಡಿಲ್ಲವೆಂದು ಒಪ್ಪಿಕೊಳ್ಳುತ್ತೇವೆ. ಒಪ್ಪಿಕೊಳ್ಳುತ್ತೇವೆ. ಒಪ್ಪಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಆದುದರಿಂದ ನಾನು ಒತ್ತಾಯ ಮಾಡುವುದೇನೆಂದರೆ ಈ ಕೂಡಲೇ ಈ ವಿಚಾರದಲ್ಲಿ ಯಡಿಯೂರಪ್ಪನವರು ಬೇರೆ ಏನೂ ಹೇಳದೆ ಈಗಿರುವ Judicial Enquiry ಕೂಡ ಇರಲಿ ಎಂದು ಹೇಳಿ ಇದನ್ನು ನೀವು ಸಿ.ಬಿ.ಐ.ಗೆ ಒಪ್ಪಿಸಿ. ನೀವು ತಿಂದಿದ್ದರೆ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ ಅಥವಾ ಅವರು ತಿಂದಿದ್ದರೆ ಅವರು ಸಿಕ್ಕಿಹಾಕಿಕೊಳ್ಳಲಿ. ಇದರಲ್ಲಿ ನಮ್ಮದೇನೂ ತಕರಾರಿಲ್ಲ. ಸಿ.ಬಿ.ಐ.ಗೆ ಕೊಡುವ ಬಗ್ಗೆ ನಿರ್ಣಯವನ್ನು ಮುಖ್ಯಮಂತ್ರಿಗಳು ಮಾಡಬೇಕು. ಇದು ಒಂದು

ವಿಚಾರ. ನೀವು ಈ ರೀತಿ ಮಾಡದಿದ್ದರೆ ಜನರು ನಿಮ್ಮ ಮೇಲೆ ಸಂಶಯ ಪಡುತ್ತಾರೆ. ಏಕೆಂದರೆ ನೀವು ಅವರ ಮೇಲೆ ಆರೋಪವನ್ನು ಮಾಡಿದ್ದೀರಿ. ಅವರು ನಿಮ್ಮ ಮೇಲೆ ಆರೋಪವನ್ನು ಮಾಡಿದ್ದಾರೆ. ನೀವು ಭಾಗಿಯಾಗಿದ್ದೀರೋ ಅಥವಾ ಅವರು ಭಾಗಿಯಾಗಿದ್ದಾರೋ, ಅವರು ಹೊಡೆದಿದ್ದಾರೋ ಅಥವಾ ನೀವು ಹೊಡೆದಿದ್ದೀರೋ ಅಥವಾ ಯಾರು ಲೂಟಿ ಹೊಡೆದಿದ್ದಾರೋ ಅದರ ಬಗ್ಗೆ ಈ ರಾಜ್ಯದ ಜನರಿಗೆ ಗೊತ್ತಾಗಬೇಕು. ಆ ರೀತಿ ಲೂಟಿ ಹೊಡೆದಿರುವವರು ಯಾರು ಎಂದು ಗೊತ್ತಾಗಬೇಕಾದರೆ ಸಿ.ಬಿ.ಐ. enquiry ಮಾಡುವುದಕ್ಕೆ ಯಡಿಯೂರಪ್ಪನವರೆ, ನಿಮಗೆ ಧೈರ್ಯವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಿಮಗೆ ಧೈರ್ಯವಿದ್ದರೆ ಈ ಘಳಿಗೆಯಲ್ಲಿಯೇ ನೀವು ಹೇಳಬೇಕು, ಹೌದು ನಾನು ಕೇಂದ್ರ ಸರ್ಕಾರಕ್ಕೆ ಬರೆದು ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕೆಂದು ಹೇಳುತ್ತೇನೆ ಮತ್ತು ಅದಕ್ಕೆ ನಾನು consent ಕೊಡುತ್ತೇನೆಂದು please come out with the statement. ಆಗ ಇಡೀ ರಾಜ್ಯದ ಜನರು ನಿಮ್ಮನ್ನು ಮೆಚ್ಚುತ್ತಾರೆ ಮತ್ತು ನಾವು ಕೂಡ ಎಲ್ಲರೂ ನಿಮ್ಮನ್ನು ಮೆಚ್ಚುತ್ತೇವೆ. ನಾವು ನಿಮಗೆ ಶಹಭಾಸ್‌ಗಿರಿಯನ್ನು ಹೇಳುವುದಕ್ಕೆ ತಯಾರಾಗಿದ್ದೇವೆ. ಆದುದರಿಂದ ನೀವು ಆ ಕೆಲಸವನ್ನು ಮಾಡಬೇಕು. ಆದರೆ ಇಲ್ಲಿಯವರೆವಿಗೂ ನೀವು ವಿದ್ಯುತ್ ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ನೀವು ಕೊಟ್ಟಿರತಕ್ಕಂಥ ಉತ್ತರದಿಂದ we are not happy with this ಈ ರಾಜ್ಯದ ಜನರಿಗೆ ನ್ಯಾಯ ಸಿಕ್ಕಿಲ್ಲ. ಬಡವರನ್ನು ಕತ್ತಲೆಯಿಂದ ಬೆಳಕಿಗೆ ಬರುವಂತೆ ಮಾಡಲು ನೀವು ಪ್ರಯತ್ನವನ್ನೇ ಮಾಡುತ್ತಿಲ್ಲ. ನೀವು ಅವರನ್ನು ಕತ್ತಲೆಯಲ್ಲಿಯೇ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ನೀವು ಈ ರಾಜ್ಯವನ್ನು ಕತ್ತಲೆಯಲ್ಲಿ ಇಟ್ಟು ಅಧಿಕಾರದಲ್ಲಿ ಇರಕೂಡದು. ನೀವು ಅಧಿಕಾರದಲ್ಲಿ ಇರುವುದಕ್ಕೆ ನೈತಿಕ ಹಕ್ಕನ್ನು ಕಳೆದುಕೊಂಡಿದ್ದೀರಿ. ನೀವು ಅಧಿಕಾರವನ್ನು ಬಿಟ್ಟು ಹೋಗಿ ಎಂದು ಹೇಳಿ ನಾನು ಒತ್ತಾಯವನ್ನು ಮಾಡಿ ನಮ್ಮ ಪಕ್ಷದ ಶಾಸಕರೊಂದಿಗೆ ಸಭಾತ್ಯಾಗವನ್ನು ಮಾಡುತ್ತಿದ್ದೇನೆ.

(ಸದನದಲ್ಲಿದ್ದ ಕಾಂಗ್ರೆಸ್ ಪಕ್ಷದ ಶಾಸಕರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿಂದಿನ ಕಾಂಗ್ರೆಸ್ ಮತ್ತು ಜನತಾದಳ ಸರ್ಕಾರ ದೂರದೃಷ್ಟಿಯನ್ನಿಟ್ಟುಕೊಂಡು ವಿದ್ಯುತ್ ಯೋಜನೆಗಳ ಬಗ್ಗೆ ಏನೂ ಚಿಂತನೆಯನ್ನೇ ಮಾಡದೆ ಇವತ್ತು ಈ ರೀತಿಯಲ್ಲಿ ಸಂಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುವುದಕ್ಕೆ ಅವರು ಸಂಪೂರ್ಣ ಕಾರಣಕರ್ತರಾಗಿದ್ದಾರೆ. ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಆ ಕಾಲದ ಆಡಳಿತದ ವೈಖರಿ ಆ ರೀತಿ ಇತ್ತು. ಇವತ್ತು ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬಂದ ಮೇಲೆ ನಮ್ಮ ಇನ್ನು ಮೂರು ವರ್ಷದ ಅವಧಿಯಲ್ಲಿ ಈ ರಾಜ್ಯವನ್ನು ವಿದ್ಯುತ್ ವಿಚಾರದಲ್ಲಿ Self Sufficient ಮಾಡುವುದಕ್ಕೋಸ್ಕರ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಅದನ್ನು ಸಹಿಸಿಕೊಳ್ಳುವುದಕ್ಕಾಗದೆಯೆ ಇವರು ಸಭಾತ್ಯಾಗವನ್ನು ಮಾಡುವ ಪ್ರಯತ್ನದಲ್ಲಿ ಅವರಿದ್ದಾರೆ. ನಾನು ಸವಿಸ್ತಾರವಾಗಿ ಎಲ್ಲ ಉತ್ತರವನ್ನು ನಾನು ಕೊಟ್ಟಿದ್ದೇನೆ. ಮತ್ತೆ ವಿನಾಕಾರಣ ನಮ್ಮ ರೇವಣ್ಣನವರು ಆರೋಪಗಳನ್ನು ಮಾಡಿ ಇವತ್ತು ಆ ತನಿಖಾ ಆಯೋಗದ ಮುಂದೆ ನ್ಯಾಯಾಧೀಶರ ಮುಂದೆ ಎಲ್ಲ ವಿಷಯಗಳನ್ನು, ವಿವರಗಳನ್ನು ಅವರು ಒದಗಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮತ್ತೆ ವಿನಾಕಾರಣ ಇವತ್ತು ಗೂಬೆ ಕೂರಿಸಿ ಯಾರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಪ್ರಯತ್ನದಲ್ಲಿ ಇವರು ಇದ್ದಾರೆ. ಇವತ್ತು 1 ಸಾವಿರ ಮೆಗಾವ್ಯಾಟ್‌ನ್ನು ನಾವು ಖರೀದಿ ಮಾಡಿ ಇವತ್ತಿನಿಂದ ಎಲ್ಲರಿಗೂ ಸಹ ಒಂದು ನಿಶ್ಚಿತವಾದಂಥ ಸಮಯದಲ್ಲಿ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದ ಮೇಲೂ ಕೂಡ ಈ ರೀತಿ ಅವರು ಸಭಾತ್ಯಾಗ ಮಾಡುವುದರ ಮೂಲಕ ಏನೋ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಳ್ಳುತ್ತೇವೆ ಎನ್ನುವಂಥ ಭ್ರಮೆಯಲ್ಲಿ ಅವರು ಇದ್ದಾರೆ. ಆದರೆ ಇವತ್ತಿನ ಈ ಪರಿಸ್ಥಿತಿಗೆ ಕಾರಣಕರ್ತರು ಇದೇ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದವರು. ಮಾನ್ಯ ರೇವಣ್ಣನವರು ಈ ಇಲಾಖೆಯಲ್ಲಿ ಸಚಿವರಾಗಿದ್ದಾಗ,

ಅವರ ಬೇಜವಾಬ್ದಾರಿತನ, ಮುಂದಾಲೋಚನೆ ಇಲ್ಲದೆ, ವಿದ್ಯುತ್ ಉತ್ಪಾದನೆ ಕಡೆ ಗಮನ ಕೊಡದೆ, ಇವತ್ತು ಈ ದುಸ್ಥಿತಿ ತರುವುದಕ್ಕೆ ಕಾರಣರಾಗಿದ್ದಾರೆ. ದೇವರು ಅವರಿಂದ ಮುಕ್ತಿಗೊಳಿಸಿದ್ದಾನೆ. ನಿಶ್ಚಿತವಾಗಿ ನನ್ನ ಅವಧಿಯಲ್ಲಿ ಇನ್ನು ಮೂರು ವರ್ಷದಲ್ಲಿ ಈ ರಾಜ್ಯಕ್ಕೆ ಅಗತ್ಯವಿರುವಂತಹ self sufficient ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇನೆ. ನಾನು ಜನರಿಗೆ ಭರವಸೆಯನ್ನು ಕೊಡುತ್ತೇನೆ. ಇವರನ್ನು ನಂಬಿ ನೀವು ಕೆಟ್ಟಿದ್ದೀರಿ. ನಾವು ಪ್ರಾಮಾಣಿಕವಾಗಿ ಬರುವಂತಹ ದಿವಸಗಳಲ್ಲಿ ವಿದ್ಯುತ್ ಉತ್ಪಾದನೆಗೆ ಹೆಚ್ಚು ಒತ್ತನ್ನು ಕೊಡುತ್ತೇವೆ. ಕೇಂದ್ರ ಸರ್ಕಾರ ನಿಗದಿ ಪಡಿಸಿರುವಂತಹ ವಿದ್ಯುತ್‌ನ್ನು ಕೊಡದೆ, ಅದರ ಪರವಾಗಿ ವಕಾಲತ್ತು ವಹಿಸುವಂತಹ ಪ್ರಯತ್ನದಲ್ಲಿ ಇವರು ಇರುವುದು ನಿಜಕ್ಕೂ ಸಹ ಪ್ರಜಾತಂತ್ರ ವ್ಯವಸ್ಥೆಗೆ ಶೋಭೆ ತರುವಂತಾದ್ದಲ್ಲ. ಆದ್ದರಿಂದ ಜೆಡಿಎಸ್ ಮತ್ತು ಕಾಂಗ್ರೆಸ್‌ನವರ ನಡವಳಿಕೆ ಬಗ್ಗೆ ಜನ ಜಾಗೃತರಾಗಿದ್ದಾರೆ. ಚುನಾವಣೆ ಬರುತ್ತದೆ, ಹೋಗುತ್ತದೆ. ಚುನಾವಣೆಗೋಸ್ಕರ ನಾವು ವಿದ್ಯುತ್ ಉತ್ಪಾದನೆ ಮಾಡುವುದಕ್ಕಾಗಲಿ ಅಥವಾ ಖರೀದಿ ಮಾಡುವುದಕ್ಕಾಗಲಿ ಹೋಗಲಿಲ್ಲ. ಹಿಂದೆ ಯಾರ್ಯಾರ ಕಾಲದಲ್ಲಿ ಎಷ್ಟು ವಿದ್ಯುತ್ ಅನ್ನು ಯಾವ ಬೆಲೆ ತೆತ್ತು ಖರೀದಿ ಮಾಡಿದರು ಎಂದು ಜಗತ್ತಿಗೆ ಗೊತ್ತಿದೆ. ಆದರೆ ಅತ್ಯಂತ ಕಡಿಮೆ ಬೆಲೆಗೆ ವಿದ್ಯುತ್‌ನ್ನು ಖರೀದಿ ಮಾಡಿ ಇವತ್ತು ಬೆಳಕನ್ನು ಕೊಡುವಂತಹ ಪ್ರಯತ್ನದಲ್ಲಿ ನಾನು ಇದ್ದೇನೆ. ನಿಶ್ಚಿತವಾದ ದಿನಗಳಲ್ಲಿ ಈ ವಿದ್ಯುತ್ ಅಭಾವದಿಂದ ಜನರನ್ನು ಮುಕ್ತಗೊಳಿಸುವುದಕ್ಕೆ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ನಾನು ಭರವಸೆಯನ್ನು ಈ ನಾಡಿನ ಜನರಿಗೆ ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು, ಈಗ ಮುಕ್ತಾಯ ಮಾಡೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವರು ಆಪಾದನೆ ಮಾಡಿದ್ದಾರೆ, ನಾವು clarification ಕೇಳಬೇಕು. ನಮಗೆ clarificationಗೆ ಉತ್ತರ ಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಅವರು ಒಂದೂವರೆ ಗಂಟೆ ಮಾತನಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : Clarification ಎಂದರೆ charge ಮಾಡಿದಮೇಲೆ ನಾನು ಹೇಳಬೇಕಲ್ಲ. ಕಾನೂನು ಸಚಿವರೇ, ಕಳ್ಳರು ಎಂದು ಹೇಳಿದಾಗ, ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳದಿದ್ದರೆ, ಓಡಿ ಹೋದರು ಎಂದು ಹೇಳುತ್ತಾರೆ. ನಾನು ತಪ್ಪು ಮಾಡಿದ್ದರೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಸಂಜೆ 6 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ : 03.03.2010ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

* * *